pūrṇapramati
A Center for Integrated Learning

Pratiṣṭhāpaka Saṃrakṣaka

PARAMA PŪJYA ŚRĪ VIŚVEŚATĪRTHA ŚRĪPĀDARU

PEJĀVARA ADHŌKṢAJA MAṬHA

# पूर्णशिक्षा










ಪ್ರಕಟಣೆ : ಪ್ರಶಿಕ್ಷಣ ವಿಭಾಗ

ದ್ವೈ ಮಾಸಿಕ ವಾರ್ತಾಪತ್ರಿಕೆ

ಅಕ್ಟೋಬರ್ ಮತ್ತು ನವೆಂಬರ್ 2024

Published By:
Prashikshana Division

Bimonthly Newsletter

Oct & Nov 2024

# ಪರಿವಿಡಿ


- ಸಂಪಾದಕೀಯ
- ಹಿನ್ನೋಟ ಮತ್ತು ಮುನ್ನೋಟ
- ENGLISH SECTION
  - Understanding the need for Aviralta Of Ganga Ma
  - Purnapramati Higher Education Program -2025
  - An Individual, the Society and the Fine Arts: A Thought
- ಕನ್ನಡ ವಿಭಾಗ
  - ಕಲಿಕೆಯ ಪಯಣ :
  - ಪ್ರಥಮ ಅಖಿಲ ಭಾರತೀಯ ವಿದ್ವತ್ ಸಭಾ ವರದಿ
  - ಗುರುಕುಲಗಳ ಅಧ್ಯಯನ : ಸಿದ್ಧಗಿರಿ ಗುರುಕುಲ
  - ಅರ್ಥವ್ಯವಸ್ಥೆಯ ಕಾರ್ಯಾಗಾರ : ಜೀವಿಕಾಶ್ರಮ
  - ಭಾರತೀಯ ಅರ್ಥವ್ಯವಸ್ಥೆಯ ಕಾರ್ಯಾಗಾರ
  - ಕುಂಕುಮ ಸಂಸ್ಕೃತಿ ಕಾರ್ಯಾಗಾರ
  - ಕನ್ನಡ ಹಬ್ಬದ ವರದಿ - 2024 - 25
  - ಅಧ್ಯಯನ ಪ್ರವಾಸ : ಆನಂದವನ ಗುರುಕುಲ ಮತ್ತು ರೇಷ್ಮೆ ಉದ್ಯಮ ಭೇಟಿ
  - ಅಜಿತ್ ಹನುಮಕ್ಕನವರ ಇರವರೊಡನೆ ಸಂವಾದ
  - ಪೂರ್ಣಪ್ರಮತಿಯಲ್ಲಿ ನನ್ನ ಮೊದಲ ಅನುಭವ
  - ಮಂಜೂಷಾ - ಕನ್ನಡ ಸಾಹಿತ್ಯ ಪ್ರಕಾರಗಳು - ಭಾಷಾ ವಿಸ್ಮಯ
- ಮೆದುಳಿಗೆ ಮೇವು
- ಪ್ರಕಟಣೆಗಳು




# ಸ್ಮರಣೀಯ ಕ್ಷಣಗಳು

















# English Section



# Understanding the need for Aviralta Of Ganga Ma

## A small naman to

## Sri Gyan Swaroop Sanand Swamiji

Anagha R Rao

Purnapramati's Senior student

### Introduction

Understanding the nature of modernity and development has proved to be a crucial exercise for all of us. Sri Sanand Swamijih has been a guiding light to all of us in this regard. During this year's Sanand Smarane Sabha, I compiled a few direct quotes of Swamiji from his works where he explains the impact on Gangaji due to Hydro Electric Power Projects built in the name of development.

### What is Aviralta?

- Continuous flow of the river in length (in the lateral flow of the river),
- Breadth (connectivity between the water and its two banks) and
- Height (water to air connectivity






and water to river-bed connectivity).

Only when these 3 aspects of continuity are present, the river is said to be Aviral, and that its flow is complete.

- Grounds for opposing Hydro power projects on Ganga Ma
- Scientific and environmental or
- Related to faith, culture and sentiments.

"Those related to faith, culture and sentiments) are the PRIMARY ones, scientific/environmental only meaningless auxiliaries from our point of view.

"A human who cannot stand (or fall) to defend his faith is no human, as a nation which cannot stand to defend its sovereignty is no nation."




**Dams on Ganga-Bhagirathi & Yamuna in Himalayan basin**

## Grounds for opposing Hydro power projects on Ganga Ma

The problem with so-called "educated" and of recent Indian Governments is that they wish to first treat and then make Gangaji like any other river.

They want to use the same guidelines, the same economic planning to Gangaji as to some nondescript stream,

They consider Gangajal as any other surface water, inferior to treated tap-water or "Bisleri/Aqua Fina"

They have never considered it necessary to explore and understand the basis of the Indian faith and reverence for Gangaji.

Their real aim and intention is to insult denounce and destroy all that is unique to India's land, its culture and its people, to be counted as second rate cousins of the other nationalities of the world, far behind those of European origin.

"Gangaji is no ordinary river it is "Sur-Sari", divine flow of energy, a living entity; "mother", revered and worshipped by tens of crores of Hindus"

Standards set by WHO or MoEF can't be applied - "It is a matter of the life and death of Hindu faith, culture, tradition, sentiments and ethos."

"The effort to equate or consider Gangaji to any other river is an attack by the modern scientific/economic culture on the traditional Indian



Dried Alakananda in Vishnupraya

culture, faith and ethos and has to be fought at that level."

## Understanding significance of GANGA MA

- Gangaji is our cultural mother.
- Gangaji is from Gangotri to Ganga Sagar.
- We shall not let Gangaji be treated like an ordinary river and harnessed for irrigation city water-supply, hydro-electricity, pisciculture etc. or be fouled with waste discharges.
- A special code for reverently using Gangaji has to be evolved.

## Scientific studies

## on the properties of Gangajal

- Rishi-Munis of our land have explicitly in various works described the unique properties of Ganga Ma treated her with utmost reverance
- No comprehensive scientific study has been made by the scientific community
- A number of stray observations and short studies by scientists, all of which support the Hindu faith in the unique non-putrefying, bactericidal and health promoting properties of GANGAJAL.




**Landslide near tunneling area in Kedar Valley**

- "Like the axiom in law to treat everyone as not guilty unless proven to be guilty, there has to be an axiom in culture-related matters to accept, respect and protect all issues of faith and conviction of our age-old tradition, unless and until they are conclusively proven to be false or wrong."

## Findings from observations

- Bactericidal properties of Gangajal at Varanasi and other locations
- E.Coli-cidal properties of Gangajal at Kanpur observed by Shri Kashi Prasad in his IIT Kanpur M.Tech Thesis.
- Unbelievably high BOD exertion (or removal) rate constants (several times of the values in other waters) in GANGAJI observed by Dr D.S. Bhargava in his IIT-Kanpur PhD.
- Bactericidal and purifying properties of Gangajal observed by NEERI in their study on "Self-Cleaning" properties of Gangaji in relation to Tehri Dam, found to be related to a unique mix of heavy and radioactive metals present in Gangajal.

## Environmental reasons against Hydropower projects

- From all information available to us, the issues of hydraulic feasibility, geologic safety and economic viability, have not been adequately addressed or assured. -



- Long term data is needed
- It should be adjusted to Himalayan ecosystem

## Environmental Impacts caused by the long-term changes by the project

- Effect on flows, water-spreads, velocities of flow, silt loads, bed-topography, bed-character, soil-moistures, drainage routes, ground-water-tables
- Ultimately affect the aquatic and terrestrial ecology and even the land-use, cultivated crops and overall environment
- Such impacts may appear only slowly but continue for all - they are cumulative and keep growing with time.

- Effect on flows, water-spreads, velocities of flow, silt loads, bed-topography, bed-character, soil-moistures, drainage routes, ground-water-tables
- Ultimately affect the aquatic and terrestrial ecology and even the land-use, cultivated crops and overall environment
- Such impacts may appear only slowly but continue for all - they are cumulative and keep growing with time.

## Environmental reasons against Hydropower projects

- Environmental Impacts due to construction activities of various structures
- Impacts visible shortly after the project
- Such as land-acquisition, land-use changes, displacement of people/activities, deforestation
- Impacts likely to be caused in case of an accidental breach or failure

## Cultural Impact

EIA consultants have only considered the neighbouring populations and

totally ignored the millions of the Indians proud of their natural heritage and hankering to just once in their life, visit and enjoy the tranquil, fragrant, beautiful, scintillating Bhagirathi valley which does not merely fills the mind with extreme joy ("Anand"), but lifts up the soul. The consultants may say this to be merely blind-faith. But is the impact on and deprivation of millions of devout believers to be ignored by an EIA or environmental clearance?

# Higher Education : Blending Traditional Wisdom with Modern Knowledge

Rohit Gowtham

Vishaya Prashikshana Pratinidhi

Pūrṇapramati will launch its higher education programs in 2025, after a decade of blending traditional wisdom with modern knowledge. We have seen our students excel academically while staying true to cultural and ethical values, which has highlighted the need for continued education focused on advanced studies, research, and lifelong learning to help students find purpose and stable livelihoods.

In today's world, securing a stable livelihood is challenging, with traditional professions fading and most opportunities linked to salaried jobs. This often leads individuals away from their true calling, or Svadharma. There is a gap in higher education for students from non-conventional educational systems, such as home-schooling and Gurukulas, who struggle to transition into conventional higher education.

Pūrṇapramati seeks to bridge this gap by redefining research and academic pursuits to address societal challenges and guide students toward meaningful careers. We aim to empower students to pursue their calling while contributing to society, inspired by the qualities of wisdom, discipline, and compassion found in the Rāmāyaṇa. Our goal is to nurture graduates who are both competent professionals and conscientious individuals.Our programs are designed to align with students' pursuits and are structured as follows:

## a. Pāramparikā Vṛtti

i. Without external degree: Students pursue traditional knowledge (pāramparik jñāna), arts (kalā), or sciences (vidyā) with guidance from kālavids and ācāryas, without opting for an external degree.

ii. With external degree: Students can pursue programs from universities aligned with traditional vocations, while still having access to scholars and mentors.

## b. Ādhunikā Vṛtti

This track prepares students for modern careers in industries, civil services, research, and corporate sectors. They can take competitive exams after senior secondary or graduation.

c. Miśritā Vṛtti

Here, students can engage with sectors like Saṃskṛta universities, religious institutions, and NGOs, which blend modern systems with Indian cultural values.

## d. Pūrṇapramati Vṛtti

Students can join Pūrṇapramati for continued support, exploring opportunities in teaching, research, entrepreneurship, and projects related to arts, agriculture, and Indian knowledge systems.

Our 7-year higher education programs will begin after the 10th standard, at the Senior Secondary stage.

Till now, a few discussion sessions have been held with students, attended by Srinivas Anna and Srinidhi Anna. Additionally, a session with parents took place where we shared details about our program, subject combinations, and more, while addressing their concerns and curiosity. This session was attended by Srinidhi Anna, Srinivas Anna, Dhananjaya Acharyaru, and the Secondary team, with around 15 parents and their children present.

During the session, Srinidhi Ji emphasized the significant role parents and students play in choosing their careers, subjects, and courses, encouraging them to make these decisions without any pressure. Srinivas Anna introduced the concept of higher education at Pūrṇapramati, addressing the questions and concerns raised by parents, and invited them to join us on this journey.

We are also pleased to announce that Sri Arun Elassery Ji from Asli Shiksha, who is collaborating with Pūrṇapramati, will begin interacting with students soon. Regular small group sessions will be organized to help students with their career pursuits, providing personalized guidance along the way.

Further updates regarding our plans for higher education will be shared in upcoming articles



# An Individual, the Society and the Fine Arts: A Thought

Arun S.
Kala Pratinidhi

Exquisite, is probably the closest possible word that can be associated with the Arts. It is marvellous that fine arts (literature, performing and visual) can carry a spectator to different world altogether within a span of seconds- a world of fantastic experiences! As artistes and enthusiasts, we know that this experience is not a mere inkling or an excitement which might dwindle after a while, but an in-explainable Joy- an energy which fills our heart and mind. The "want" or yearning of this Joy makes us go back to it, time and again and we are never exhausted. This Joy is termed as Ānanda in Sanskrit Poetics. This Joy is not a passive veil which nullifies or numbs our sensitivities; we are very much aware of the dynamics of during the experience.

Different people like and practice the Arts for different reasons, for some it is a passionate hobby, for somebody else it is a means of livelihood and for someone it might simply be a pass of time and many reasons more. However, all of it primarily starts with the reason, 'because it makes me happy'. Knowingly or unknowingly, we would have gone back to it because it made us happy the first or the previous time we pursued it. A range of questions occur here, why does this happen? Meaning, why did dance, music or





painting or poetry attract me particularly? What makes me practice and pursue it? What is it that I feel when I pursue it? These set of questions, might mean differently for an artiste and an enthusiast; however, the primary question, what am I expecting/getting from it?

Advaita Vedanta explains three realities viz., Pāramārthika Satta, the Absolute Truth, which is unchanging and eternal ground of all existence. Vyāvahārika Satta is the mundane or everyday reality And Ākalpa Satta is that which is seemingly present. Meaning, the begotten experience is real, yet it is indescribable and does not necessarily have an output in terms of quantitative entity; rather, one can only attempt to describe the attributes of the experience. It is not a mundane experience bound by Sukha-Duḥkha factors, but an absolute experience of Oneness, a deep sense of satisfaction and contentment.

Alan kārika-s give three factors which help us understand the intensity of this experience- The Experience which crystallise our emotions and therefore also our thoughts and ideas, Dhṛti; The Experience which exalts our emotions, in a way, and gushes out, Dīpti, and, The Experience which makes us contemplate (Vikāsa).

In this line of thought, there are numerous discussions in the tradition of Sanskrit Poetics which seeks and answers the question- What must be expected from the Arts? And What is the purpose of Arts? The essence of the debate is that, Art has no purpose. Meaning, Arts do not contribute to the matrices of the world; the socio-political or economic status of a country does not depend on the nature of Art. For example, whether the currency rate of dollar vs. rupees is constant or varying has no effect and impact on the Arts; whether the entire earth has one government, or nuclear

governments, has no impact on Arts; similarly, whether a practitioner practices it or an enthusiast pursues it also does not change the fundamental nature of Art. Art shall essentially remain as it is. In this case, what is the purpose or the need of the Arts becomes a primary question. And, why has Arts been celebrated? becomes a secondary question.

Bharata in the Nāṭyas āstra records the conversation between Devendra and Brahma; Devendra asks for a source of entertainment which is both audio and visual in nature (kṛīḍanīyakamiççhāmo dṛs yam s ravyam ça yadbhavet). Hence, an "entertaining distraction" was the need. The words 'entertainment' and 'distraction' needs better clarity here- In Indian thought, entertainment is not seen as a 'break' from the mundane, a consonant of personal appreciations but, it is that which makes us contemplate the nature of it- a quest of philosophical appreciation. Hence, entertainment and education go parallel, in the context of Indian Art Appreciation.

Coming back to our question about the expectation from Arts, the tradition has presupposed this with the understanding of the nature of the Art. This is important because, once we understand the nature, can we address the expectation factor.

Accordingly, Art is something which is created by the poet. The mode and the medium are framed by the poet for the purpose of the expression of the vastu (plot/theme- which is also a result of the imagination of the poet) (kavehe karma kāvyam, says Kuntaka in Vakroktijīvita). In essence, Arts stand on a probability factor; we are aware that what we see is not entirely true and that it is not real or happening live. However, we willingly accept this and move ahead to enjoy the beautiful



creation of work with myriad emotions. This is because, although the created/expressed piece of work may be made-up and make-believe, the content is a reflection of our intellect and life-experiences; the medium and the characters might be pretence, but the emotions are real. For example, Rāmāyaṇa is not merely a kidnap story, but we appreciate Rāmāyaṇa for its profundity of value and beauty.

The generosity and unselfishness of Rāma, Hanumanta-s benevolence, Sītā-s patience and determination, Lakṣmaṇa-s devotion, willing servitude and mindless impatience, Rāvaṇa-s arrogance and idiocy, Vibhiṣaṇa-s sense of Dharma, are all but an inspiration for us. We identify and associate the traits of Rāma or Sītā or Hanumanta or a Rāvaṇa around us in our neighbourhood and people we know.

We associate ourselves and our peers with characters and plots of Rāmāyaṇa, which has given us immense joy and inspired us, in our everyday life. It is this quality of strong affection, inspiration and belief which makes us yearn for it. If it were to be only a kidnap story, Rāma story would have been long forgotten with no traces of it!

With respect to the Art Experience, there are two schools of thought which understand Art. Experience, slightly differently. The Realistic School of Philosophy (Sān khya and Nyāya schools mainly) understand Art as, a sort of a pause from the monotony of routine life, however momentary it might be. A kind of a relief from our usual monotonous activities' a pause to reality called Life. The Idealistic School of Philosophy (Vedānta School) approaches Art as a sublimation of reality and not an escape. We cannot run away from the world, but we can certainly change our attitude and feelings towards it. It is not a deviation but an acceptance, which makes us realise the Beauty. The final dictum in Indian Thought is that, Art is not an escape from reality and Art is not an addiction (in the sense of vice), but a contemplation of the self and the world. S atāvadhāni Dr. R Ganesh says, Art cannot promise a sound and healthy society where all the negatives are eradicated, but by Art Experience, these things may happen as biproduct(s). An artiste cannot certainly save the society but Art makes the society worth saving. Thus, impact of Art is a lasting charm of Life.

The purpose of Arts is not to create an illusion or a make-believe imagination. Arts do not shun the world but embrace it. The world with all its Sukhaduḥkhātmaka factors which are triggered by the Ariṣaḍvarga-s act as tools or raw-materials for the poet. Bhaṭṭa Tauta, poet, philosopher and an Alan kārika from Kashmir says, just like how ash (which is dirt and waste) is used to clean a dirty mirror for a clear view, the same is it with Arts.

# ಕನ್ನಡ ವಿಭಾಗ



# ಪ್ರಥಮ ಅಖಿಲ ಭಾರತೀಯ ವಿದ್ವತ್ ಸಭಾ - ಅಹಮದಾಬಾದ್, ಗುಜರಾತ್

(ಆಯೋಜನೆ - ಪುನರುತ್ಥಾನವಿದ್ಯಾಪೀಠ)
ದಿನಾಂಕ: 19/10/2024 - 20/10/2024)

**ಶ್ರೀಮತಿ ಲತಾ ಎಂ.**
ಪ್ರಶಿಕ್ಷಣ ಪ್ರತಿನಿಧಿ

## ಹಿನ್ನಲೆ:

ಜೂನ್ ೨೦೨೪ ರಲ್ಲಿ ಪುನರುತ್ಥಾನ ವಿದ್ಯಾಪೀಠವು ಜ್ಞಾನಕ್ಷೇತ್ರದ ವ್ಯವಸ್ಥೆಯ ಬಗ್ಗೆ ಒಂದು ವಿದ್ವತ್ ಗೋಷ್ಠಿಯನ್ನು ಆಯೋಜಿಸಿತ್ತು. ಆ ಸಂದರ್ಭದಲ್ಲಿ ವಿದ್ವತ್ ಪರಿಷತ್ತನ್ನು ರಚನೆ ಮಾಡಲಾಗಿತ್ತು. ಪುನರುತ್ಥಾನದ ಯೋಜನೆಯಲ್ಲಿ ಕುಟುಂಬ ಶಿಕ್ಷಣವು ಒಂದು ಪ್ರಮುಖ ಅಂಶವಾಗಿದ್ದು ಅದರ ಬಗ್ಗೆ ವ್ಯವಸ್ಥಿತವಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಈ ವಿದ್ವತ್ ಪರಿಷತ್ತನ್ನು ರಚನೆ ಮಾಡಲಾಗಿತ್ತು. ಈ ಪರಿಷತ್ತಿನ ಮುಂದಿನ ಕಾರ್ಯಗಳನ್ನು ಯೋಜನೆ ಮಾಡಲು ವಿದ್ವತ್ ಸಭೆಯನ್ನು ಅಕ್ಟೋಬರ್ ೧೯ ಮತ್ತು ೨೦ ರಂದು ಕರೆಯಲಾಗಿತ್ತು. ಈ ಸಭೆಗೆ ೯ ರಾಜ್ಯಗಳಿಂದ ವಿವಿಧ ಕ್ಷೇತ್ರದಲ್ಲಿ ಅಧ್ಯಯನ ಮಾಡಿರುವ ಅನೇಕ ಸಜ್ಜನರು, ಅಧ್ಯಯನಶೀಲರು ಆಗಮಿಸಿದ್ದರು. ತಮ್ಮ ತಮ್ಮ ಅಧ್ಯಯನದ ವಿಷಯವನ್ನು ಮಂಡಿಸಿದರು.

## ಮುದನೀಡಿದ ಅನುಭವಗಳು

- ಸಮಯ ಪಾಲನೆ, ಸ್ವಚ್ಛತೆ, ಗೊಂದಲವಿಲ್ಲದ ಕಾರ್ಯಕ್ರಮದ ಆಯೋಜನೆ, ಸಭಾಂಗಣ, ಸಾತ್ವಿಕ ಆಹಾರ, ಇವೆಲ್ಲಾ ಸಭೆಗೆ ವಿಶೇಷವಾಗಿ ಗಾಂಭೀರ್ಯತೆಯನ್ನು ನೀಡಿತ್ತು.
- ಪುನರುತ್ಥಾನ ೨೦ ವರ್ಷಗಳ ಪಯಣವನ್ನು



ಸಂಕ್ಷಿಪ್ತವಾಗಿ ಪರಿಚಯಿಸುವ ಪ್ರದರ್ಶಿನಿ ಒಳ್ಳೆಯ ಪ್ರಯತ್ನವಾಗಿತ್ತು ಮತ್ತು ನಮ್ಮ ಕಲಿಕೆಗೆ ಅವಕಾಶವಾಯಿತು.

- ಪ್ರತಿಬಾರಿಯೂ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸುವ ಹಾಡನ್ನು ರಚನೆ ಮಾಡಿ, ರಾಗ ಹಾಕಿ, ಸಭೆಯಲ್ಲಿ ವಿರಾಮದ ವೇಳೆಗಳಲ್ಲಿ ಕಾರ್ಯಕ್ರಮಕ್ಕೆ ತೊಂದರೆ ಆಗದಂತೆ ಮತ್ತೆ ಮತ್ತೆ ಹೇಳಿಕೊಟ್ಟು ಅಭ್ಯಾಸ ಮಾಡಿಸುವ ಕ್ರಮ ಖುಷಿಕೊಟ್ಟಿತು.
- ಪುಸ್ತಕ ಮಂದಿರ ಎಂಬ ಕಲ್ಪನೆ - ಪುಸ್ತಕವನ್ನು ಓದುವ ಅಭ್ಯಾಸವನ್ನು ಬೆಳೆಸಲು ಯಾವುದಾದರೂ ಪುಸ್ತಕವನ್ನು ತೆಗೆದುಕೊಳ್ಳಬಹುದು, ಸಾಧ್ಯವಾದಷ್ಟು, ಕೊಡಬೇಕೆನ್ನಿಸುವಷ್ಟು ಹಣವನ್ನು ಹುಂಡಿಯಲ್ಲಿ ಹಾಕುವುದು ಈ ಕಲ್ಪನೆಯಾಗಿತ್ತು.
- ಕಾರ್ಯಕ್ರಮದ ಒಂದು ವಾರದ ಹಿಂದಿನಿಂದ ತಲುಪುವ, ಹೊರಡುವ, ಇರುವ ವ್ಯವಸ್ಥೆಗಳ ಬಗ್ಗೆ ಕರಾರುವಾಕ್ಕಾದ ವ್ಯವಸ್ಥೆಯನ್ನು ಮಾಡಿದ್ದು ಅದ್ಭುತ ಎನಿಸಿತು.
- ರಾತ್ರಿ ಸಮಯದಲ್ಲಿ ಅನೌಪಚಾರಿಕ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಇದನ್ನು ಚಿಕ್ಕ ಚಿಕ್ಕ ಗಣಗಳಲ್ಲಿ ಮಾಡಲಾಗಿತ್ತು. ಇದರಿಂದ ಬಂದವರ ಪರಸ್ಪರ ಪರಿಚಯ ಮತ್ತು ಅವರ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಯಲು ವೇದಿಕೆ ದೊರಕಿತು.

## ಪ್ರಮುಖ ಕಲಿಕೆಗಳು

ವಿದ್ವಾಂಸರು ಯಾರು? ಅವರ ಕರ್ತವ್ಯವೇನು ಎನ್ನುವ ಪ್ರಶ್ನೆಯಿಂದ ಇಂದುತಾಯಿಯವರು ಆರಂಭಿಸಿದರು. ನಮ್ಮ ಆಂತರಿಕತೆಯ ಪರಿಚಯ ನಮಗಿದೆಯೇ ? ನಮ್ಮ ಕಾರಣದಿಂದ ಹೊರ ಜಗತ್ತಿನಲ್ಲಿ ಏನಾಗುತ್ತಿದೆ ಎಂಬುದರ ಅರಿವಿದೆಯೇ? ಸಂಘರ್ಷವನ್ನು ಗುರುತಿಸಲು ಸಾಧ್ಯವಾಗುತ್ತಿದೆಯೇ? ವೈಯಕ್ತಿಕ ಮಟ್ಟದಲ್ಲಿ ಮತ್ತು ವ್ಯವಸ್ಥೆಯ ಮಟ್ಟದ ಸಂಘರ್ಷಗಳನ್ನು ಗುರುತಿಸಿದ್ದೇವೆಯೇ ? ಎಂಬ ಪ್ರಶ್ನೆಗಳನ್ನು ಮುಂದಿಟ್ಟರು. ಸಮಸ್ಯೆ ಇರುವುದು ನಾವು ಅನುಕೂಲತೆಗಳಿಗೆ ವಿವಶರಾಗಿರುವುದು ಮತ್ತು ಅವುಗಳನ್ನು ಬಿಡಲು ಮನಸ್ಸು ಮಾಡದಿರುವುದು. ಮತ್ತೊಂದು ಸಮಸ್ಯೆ ಸಮಗ್ರತೆಯ ದೃಷ್ಟಿಯಿಂದ ನೋಡದಿರುವುದು ಮತ್ತು ಭಾರತೀಯತೆಯಿಂದ ವಿಮುಖರಾಗಿರುವುದೇ ಆಗಿದೆ. ಆದರೆ ಮೌನವಾಗಿ ಎಲ್ಲವನ್ನು ಸಹಿಸಿಕೊಳ್ಳುವ ಸ್ವಭಾವ ನಮ್ಮದಲ್ಲ ಎನ್ನುವುದನ್ನು ಮರೆಯಬಾರದು.

ಪಂಕಜ್ ಸಕ್ಸೇನ ಅವರು ಕಾನೂನು-ನೀತಿ-ರಾಜನೀತಿಗಳ ಬಗ್ಗೆ ಅಧ್ಯಯನ ಮಾಡಿದವರು. ತಮ್ಮ ವಿಷಯವನ್ನು ಸಶಸ್ತ್ರೀಕರಣ ಎಂಬ ಮೂಲಬಿಂದುವಿನೊಂದಿಗೆ ಮಂಡಿಸಿದರು. ಹೇಗೆ ಇಸ್ಲಾಂ ಮತ್ತು ಕ್ರಿಶ್ಚಿಯನ್ ಮತಗಳ ಮೂಲ ಚಿಂತನೆ ಭೌತಿಕವಾಗಿದೆ ಮತ್ತು ರಾಜಕೀಯ ಮನೋಭಾವನ್ನು ಹೊಂದಿದೆ

ಮತ್ತು ಭಾರತೀಯ ಮಾನಸಿಕತೆಯಿಂದ ಎಷ್ಟು ವಿಭಿನ್ನವಾಗಿ ಚಿಂತಿಸುವುದು ಎನ್ನುವುದನ್ನು ವಿವರಿಸಿದರು. ಉದಾ: ವಿವಾಹ ಸಂಸ್ಕಾರ, ಅಂತ್ಯಸಂಸ್ಕಾರಗಳನ್ನು ಕರಾರುಗಳಾಗಿ ನೋಡುವ ವಿಧಾನ, ಬೇರೆ ರಾಜ್ಯವನ್ನು ಗೆದ್ದಾಗ ಅಲ್ಲಿನ ದೇವತೆಗಳ ಅವಹೇಳನ ಮಾಡುವುದು, ವರ್ಣ-ಜಾತಿ ವ್ಯವಸ್ಥೆಯ ವರ್ಗೀಕರಣವನ್ನು ಧಾರ್ಮಿಕವಾಗಿ ನೋಡದಿರುವುದು.

ಇವುಗಳ ಹಿನ್ನಲೆಯಲ್ಲಿ ಈಗ ಬಂದಿರುವ ನೂತನ ಶಿಕ್ಷಣ ನೀತಿ ೨೦೨೦ ಭಾರತೀಯತೆಯನ್ನು ತರಬೇಕೆನ್ನುವ ನಿಟ್ಟಿನಲ್ಲಿ ಆಗಿರುವ ಒಂದು ಗುರುತರವಾದ ಹೆಜ್ಜೆ ಎಂದು ತಿಳಿಸಿದರು.

ಡಾ. ಭಾಗ್ಯಲತಾ ಪಾಠಸ್ಕರ್ ಅವರು - ಪೂರ್ವಪಕ್ಷದ ಸರಿಯಾದ ಅರಿವಿಲ್ಲದೆ, ಆಮೂಲಾಗ್ರ ಅಧ್ಯಯನವಿಲ್ಲದೆ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯವಿಲ್ಲ ಎಂಬುದನ್ನು ಅರ್ಥಮಾಡಿಸಿದರು. ಭಾರತದ ಸಮನ್ವಯ ಪದ್ಧತಿ ಇಲ್ಲದೆ ಬಿಡಿಬಿಡಿಯಾಗಿ ವಿಷಯಗಳನ್ನು ತಿಳಿಯುವುದು, ಪಠ್ಯಗಳನ್ನು ರಚನೆ ಮಾಡುವುದು ಇಂದಿನ ಶಿಕ್ಷಣ ವ್ಯವಸ್ಥೆಯ ದೊಡ್ಡ ಮಿತಿ ಎಂದರು. ಒಳಗಿನಿಂದ ಪರಿವರ್ತನೆ ತರುವ, ಕೇವಲ ಶಬ್ದವಿದ್ಯೆ ಅಲ್ಲದೆ ಆತ್ಮವಿದ್ಯೆಯಿಂದ ತೃಪ್ತಿ ಹೊಂದುವ ಕ್ರಮ ಭಾರತೀಯರದ್ದು. ವಿದ್ವಾಂಸನಾದವನು ಸಮಾಜವನ್ನು ತಿದ್ದದಿದ್ದರೆ ಅದು ಸಮಾಜದ ತಪ್ಪಲ್ಲ, ವಿದ್ವಾಂಸನದ್ದೇ ಅಪರಾಧ ಎಂಬುದು ಅವರ ಪ್ರಮುಖ ವಿಷಯವಾಗಿತ್ತು.

ಕುಟುಂಬದ ಸಮಗ್ರ ವಿಕಾಸದ ಬಗ್ಗೆ ಇಂದುಮತಿ ತಾಯಿಯವರು ಮಾತನಾಡುತ್ತಾ ಈ ಕೆಲವು ವಿಷಯಗಳ ಬಗ್ಗೆ ಗಮನ ಸೆಳೆದರು - ವ್ಯಕ್ತಿ ಸಮಾಜದೊಂದಿಗೆ ಬದುಕಲು ಸಾಧ್ಯವೇ ಹೊರತು, ಒಂಟಿಯಾಗಿ ಅಲ್ಲ, ಕೇವಲ ವ್ಯಕ್ತಿಯಾಗಿ ಅವರ ಅಸ್ತಿತ್ವವೂ ಇಲ್ಲ. ಕುಟುಂಬವೆಂದರೆ ಸುರಕ್ಷೆ. ನಮ್ಮದು ಕರಾರಿನ ಸಂಸ್ಕೃತಿಯಲ್ಲ ಬದಲಾಗಿ ಆತ್ಮೀಯತೆಯ ಸಂಸ್ಕೃತಿ. ಕುಟುಂಬದಲ್ಲಿ ಎಲ್ಲರಿಗೂ ಅವರದ್ದೇ ಆದ ಸ್ವಾತಂತ್ರವಿದೆ, ಏಕೆಂದರೆ ಪರಸ್ಪರಾವಂಬನೆ, ಪರಸ್ಪರಾನುಕೂಲ ಮತ್ತು ಪರಸ್ಪರ ಸ್ವತಂತ್ರದ ರಕ್ಷಣೆ ಎಲ್ಲರ ಹೊಣೆಯಾಗಿರುತ್ತದೆ. ಎಲ್ಲರಿಗೂ ತಮ್ಮ ತಮ್ಮ ಸ್ವತಂತ್ರದ ರಕ್ಷಣೆ ಮಾಡಿಕೊಳ್ಳಬೇಕು ಎನ್ನುವ ಮನೋಭಾವ ಹೋದರೆ ಸ್ಪರ್ಧೆ ಬರುವುದಿಲ್ಲ. ಆಗ ಸಹಜವಾಗಿ ಎಲ್ಲರ ಸ್ವತಂತ್ರವನ್ನು ಎಲ್ಲರೂ ರಕ್ಷಣೆ ಮಾಡುವರು.

ಸಮಾಜವನ್ನು ಸದೃಢ ಮಾಡಲು ಪರಂಪರೆಯ ರಕ್ಷಣೆ ಬಹಳ ಮುಖ್ಯ, ಇದಕ್ಕೆ ಸೂತ್ರವೆಂದರೆ ಯಾವುದು ಶಾಶ್ವತವೋ ಅದನ್ನು ಗುರುತಿಸಿ, ಹಾಗೆ ಉಳಿಸಿಕೊಳ್ಳುವುದು, ಯಾವುದು ದೇಶ-ಕಾಲ-ಪರಿಸ್ಥಿತಿಗೆ ತಕ್ಕಂತೆ ಪರಿವರ್ತನೆ ಆಗಬೇಕೋ ಅದನ್ನು ಗುರುತಿಸಿ ಪರಿವರ್ತನೆ ಮಾಡುವುದು, ಯಾವುದನ್ನು ಹೊಸದಾಗಿ ಸೇರಿಸಬೇಕೋ ಅದನ್ನು ಶಾಸ್ತ್ರೋಕ್ತ ಕ್ರಮದಲ್ಲಿ ಸೇರಿಸುವುದರಿಂದ ಪರಂಪರೆಯು

ಶುದ್ಧವಾಗಿ, ಅಖಂಡಿತವಾಗಿ ಉಳಿಯುವುದು. ಹೊಸ ಪೀಳಿಗೆಗೆ ಈ ಸಂಸ್ಕಾರಗಳನ್ನು ಕೊಡುವುದು, ಸಮಾಜಕ್ಕೆ ಯೋಗ್ಯ ಪೀಳಿಗೆಯನ್ನು ಕೊಡುವುದು ನಮ್ಮ ಕರ್ತವ್ಯ ಇದು ಸಮಾಜದ ಋಣ.

ವಿನೋದ್ ಖಂಡಾರೆ ಅವರು (ನಿವೃತ ಸೈನ್ಯಾಧಿಕಾರಿ) ಶಸ್ತ್ರ ಮತ್ತು ಶಾಸ್ತ್ರದ ಶಿಕ್ಷಣ ಬಾಲ್ಯದಿಂದಲೇ ಆಗಬೇಕು. ಯಾವುದೇ ಹಿಂಜರಿಕೆಯಿಲ್ಲದೆ ಪಠ್ಯದಲ್ಲಿ ತರಬೇಕೆನ್ನುವ ಅಂಶವನ್ನು ತಿಳಿಸಿದರು.

ಬ್ರಿಜೇಂದ್ರ ಪಾಂಡೆ ಅವರು ಎಲ್ಲವನ್ನೂ ಇಂದಿನ ಪರಿಭಾಷೆಯ ವೈಜ್ಞಾನಿಕ ಮನೋಭಾವದಿಂದ ನೋಡುವುದು ಎಷ್ಟು ಅಭಾರತೀಯ ಚಿಂತನೆ ಎಂಬುದನ್ನು ಮನವರಿಕೆ ಮಾಡಿಸಿದರು. ಅನೇಕ ಪುಸ್ತಕಗಳು ಮತ್ತು ಲೇಖಕರ ಉಲ್ಲೇಖವನ್ನು ನೀಡಿದರು.


- Bipin Chandra Pal: _The Soul of India_ , Rupa & Co., New Delhi.
- Ananda K Coomaraswamy: _Essays in National Idealism_ , Munshiram Manoharlal Publishers Pvt Ltd, New Delhi.
- Ananda K Coomaraswamy: _Art and Swadeshi_ , Munshiram Manoharlal Publishers Pvt Ltd, New Delhi.
- Ananda K Coomaraswamy: _East and West and Other Essays_ ,Ola Books Ltd, Colombo, Ceylon.
- KC Bhattacharya: _Swaraj in Ideas.
- Rabindranath Tagore: Nationalism.
- Swami Chandrashekharendra Saraswati: _Hindu Dharma: The Universal Way Life_ , Bharatiya Vidya Bhavan, Bombay.
- Sri Aurobindo: _Foundations of Indian Culture_ , Sri Aurobindo Ashram, Pondicherry.
- बद्रीशाह: _दैशिकशास्त्र_ , पुनरुत्थान विद्यापीठ, अहमदाबाद।
- स्वामी करपात्रीजी: _मार्क्सवाद और रामराज्य_ , गीताप्रेस, गोरखपुर।
- स्वामी करपात्रीजी: _राष्ट्रीय स्वयंसेवक संघ और हिन्दू धर्म_ , धर्मसंघ प्रकाशन, वाराणसी।
- मोतीलाल शास्त्री: _ दिग्देशकालस्वरूप - मीमांसा।
- Rene Guenon: _The Crisis of Modern World_ , Sophia Perennis, Hillsdale, NY.
- Seyyed Hossein Nasr: _Man and Nature_ .
- Frithjof Schuon: _ Transcendent Unity of All Religions.
- Frithjof Schuon: _ Understanding Islam_ .
- Frithjof Schuon: _Stations of Wisdom.

- TS Eliot: _The Idea of a Christian Society_ , Faber and Faber, London.
- AK Saran: _Traditional Vision of Man_ , Central Institute of Higher Tibetan Studies, Sarnath, Varanasi.
- AK Saran: _Hinduism in Contemporary India_ , Central Institute of Higher Tibetan Studies, Sarnath, Varanasi.
- Kenneth Oldmeadow: _Traditionalism: Religion in the Light of the Perennial Philosophy_ , Sri Lanka Institute of Traditional Studies, Colombo.
- इनके अतिरिक्त म. म. मोतीलाल शर्मा शास्त्री, म. म. गोपीनाथ कविराज, विश्वनाथ शास्त्री दातार, आचार्य बलदेव उपाध्याय, वासुदेवशरण अग्रवाल तथा विद्यानिवास मिश्र जैसे विद्वानों की भी रचनाएं अवलोकनीय हैं।
- इन पुस्तकों को इनके प्रकाशक के माध्यम से अथवा अमेज़न/ फ्लिपकार्ट के माध्यम से मंगाया जा सकता है। कई पुस्तकें आउट ऑफ प्रिंट हैं, इनकी सॉफ्ट कॉपी www.archive.com से ही प्राप्त हो पाएगी।


ಕುಟುಂಬ ಶಿಕ್ಷಣದ ಕುರಿತ ಮುಂದಿನ ವಿದ್ವತ್ ಗೋಷ್ಠಿಗೆ ಬೇಕಾದ ೭ ವಿಷಯಗಳ ಬಗ್ಗೆ ಸಣ್ಣ ಸಮೂಹಗಳಲ್ಲಿ ಚರ್ಚಿಸಲಾಯಿತು ಮತ್ತು ಅದಕ್ಕೆ ಬೇಕಾದ ಅಧ್ಯಯನ, ಚರ್ಚೆಗೆ ವೇದಿಕೆಯನ್ನು ಮಾಡಲಾಯಿತು. ಕೆಲವು ಪ್ರಶ್ನೆಗಳೂ ಮೂಡಿದವು: (೧) ಶಾಸ್ತ್ರ ಅಧ್ಯಯನದ ಹಿನ್ನಲೆಯಿಂದ ಬಂದ ವಿದ್ವಾಂಸರನ್ನು ಕರೆಯಿಸಿದ್ದರೆ ಚರ್ಚೆ ಇನ್ನೂ ಚೆನ್ನಾಗಿ ಮತ್ತು ಸರಿಯಾದ ದಾರಿಯಲ್ಲಿ ಹೋಗುತ್ತಿತ್ತು ಎನಿಸಿತು.

## ಮುಂದುವರೆಸಲು ಬಯಸುವ ವಿಷಯಗಳು

- ಎಲ್ಲರೂ ಓದಬೇಕಿರುವ ಲೇಖನಗಳು, ವಿಷಯಗಳು ಕನ್ನಡದಲ್ಲಿ ಮಾಡುವುದು.
- ಇಂತಹ ಸಭೆಗಳನ್ನು, ವಿಚಾರವಿನಿಮಯವನ್ನು ಕನ್ನಡದಲ್ಲಿ ಮಾಡುವುದು
- ಸಮಗ್ರತೆಯನ್ನು ಕೊಡುವ, ಆಂತರಿಕ ಪರಿವರ್ತನೆ ತರುವ ಪಠ್ಯಗಳನ್ನು ಸಿದ್ಧಮಾಡುವುದು.
- ಇಂದುತಾಯಿಯವರು ಉಲ್ಲೇಖಿಸಿದ ಪಂಚಪದಿ ಪ್ರಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳುವುದು - ಮೊದಲು ನಾನು ಮಾಡುವುದು ಅವರು ನೋಡುವುದು, ಎರಡನೆಯದಾಗಿ ಇಬ್ಬರೂ ಒಟ್ಟಿಗೆ ಮಾಡುವುದು, ಮೂರನೆಯದಾಗಿ ಅವರು ಮಾಡುವುದು ನಾನು ಗಮನಿಸುವುದು, ನಾಲ್ಕನೆಯದು ಅದನ್ನು ಉತ್ತಮಪಡಿಸಲು ಬದಲಾವಣೆಗಳನ್ನು / ವ್ಯತ್ಯಾಸಗಳನ್ನು ಆಲೋಚಿಸಲು ಹೇಳುವುದು, ಐದನೆಯದು ಪ್ರಯೋಗಕ್ಕೆ ತರುವುದು.

ಇಡೀ ಸಭೆಯಿಂದ ನನಗೆ ಸಿಕ್ಕ ದೊಡ್ಡ ಪಾಠ
ಯಾವುದೇ ವಿಷಯದಲ್ಲಿ ಹೆಚ್ಚು
ಉತ್ಸಾಹಿಯಾಗುವ ಅಥವಾ ಹೆಚ್ಚು
ನಿರುತ್ಸಾಹಿಯಾಗುವ ಅವಶ್ಯಕತೆ ಇಲ್ಲ. ಇರುವ
ಸ್ಥಿತಿಯನ್ನು ಒಪ್ಪಿಕೊಂಡು ಅಲ್ಲಿಂದ
ಮಾರ್ಗೋಪಾಯಗಳನ್ನು ಹುಡುಕುವುದು
ಮುಖ್ಯ

## ಗುರುಕುಲಗಳ ಅಧ್ಯಯನ ಸರಣಿ

**ಶ್ರೀಮತಿ ಲತಾ ಎಂ**
ಪ್ರಶಿಕ್ಷಣ ಪ್ರತಿನಿದಿ

# ಸಿದ್ಧಗಿರಿ ಗುರುಕುಲ - ಕನೇರಿ ಮಠ ಕೊಲ್ಹಾಪುರ, ಮಹಾರಾಷ್ಟ್ರ

ಪೂರ್ಣಪ್ರಮತಿಯ ಒಂದು ತಂಡ ಗುರುಕುಲ ಅಧ್ಯಯನಕ್ಕೆ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರದಲ್ಲಿರುವ ಸಿದ್ಧಗಿರಿ ಗುರುಕುಲವನ್ನು 14/11 ಮತ್ತು 15/11 ರಂದು ಭೇಟಿ ಮಾಡಿತ್ತು. ಮೊದಲಿಗೆ ಕೊಲ್ಹಾಪುರದ ಲಕ್ಷ್ಮಿಯ ದರ್ಶನ ಮಾಡಿ ಗುರುಕುಲದತ್ತ ಪ್ರಯಾಣ ಬೆಳೆಸಲಾಯಿತು.

ಇದೊಂದು ವಿಶಿಷ್ಟವಾದ ಪರಂಪರೆಯಿರುವ ಸ್ಥಳವಾಗಿತ್ತು. ಕಾಡುಸಿದ್ದೇಶ್ವರ ಸ್ವಾಮಿಗಳ ಪರಂಪರೆಯನ್ನು ಹೊಂದಿದೆ. ಈಗ ಅಲ್ಲಿ ಇರುವ ಸ್ವಾಮಿಗಳೆಂದರೆ ಶ್ರೀ ಅದೃಶ್ಯ ಕಾಡುಸಿದ್ದೇಶ್ವರ ಸ್ವಾಮಿಗಳು. ೧,೩೦೦ ವರ್ಷಗಳ ಇತಿಹಾಸವನ್ನು ಹೊಂದಿರುವ ಪುರಾತನವಾದ ಮಠ ಇದಾಗಿದೆ. ಸುಮಾರು ೧೦೦೦ ಎಕರೆ ಸ್ಥಳಾವಕಾಶದಲ್ಲಿ ಪ್ರಕೃತಿ ನಡುವೆ, ೩೦೦ ಗ್ರಾಮಗಳನ್ನೂ ಒಳಗೊಂಡಂತೆ ಇರುವ ವಿಸ್ತಾರವಾದ ಒಂದು ಸಮುದಾಯವಾಗಿದೆ. ಪ್ರಸ್ತುತ ಇರುವ ಸ್ವಾಮಿಗಳ ಸಾಮಾಜಿಕ ಕಾರ್ಯಗಳ ದೂರದೃಷ್ಟಿಕೋನವಂತೂ ಅದ್ಭುತ ಎನಿಸಿತು. ಗುರುಕುಲ ಪ್ರಾರಂಭವಾಗಿ ೮ ವರ್ಷಗಳಾಗಿವೆ. ಗುರುಕುಲಗಳಲ್ಲಿ ಗಮನಿಸಿದ ಕೆಲವು ಪ್ರಮುಖ ಅಂಶಗಳನ್ನು ಈ ಕೆಳಗಿನ ಶಿರೋನಾಮಗಳಲ್ಲಿ ಸಂಗ್ರಹಿಸಲಾಗಿದೆ:




### ಶಿಕ್ಷಣ ವ್ಯವಸ್ಥೆ

ಸಿದ್ಧಗಿರಿ ಗುರುಕುಲದಲ್ಲಿ ಗುರುಕುಲ ಪದ್ಧತಿಯ ಶಿಕ್ಷಣವನ್ನು ಅಳವಡಿಸಿಕೊಳ್ಳಲಾಗಿದೆ. ಅದು ನಿವಾಸಿ ಗುರುಕುಲವಾಗಿದ್ದು ಸ್ವಾಮಿಗಳು ಮತ್ತು ಆಚಾರ್ಯರು

ವಿದ್ಯಾರ್ಥಿಗಳೊಡನೆ ವಾಸಿಸುತ್ತಾರೆ. ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳು ಇಬ್ಬರೂ ಇದ್ದಾರೆ. ಇಬ್ಬರಿಗೂ ಬೇರೆ ಬೇರೆ ಭವನಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.

## ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ

ವಿದ್ಯಾರ್ಥಿಗಳು ಭಾರತದ ೮-೧೦ ರಾಜ್ಯಗಳಿಂದ ಇದ್ದಾರೆ. ಯಾರಿಗೂ ಜಾತಿ-ಮತದ ಪ್ರತಿಬಂಧಕವಿಲ್ಲ. ಎಲ್ಲಾ ಮತೀಯರು ಸೇರುವರು. ಅಲ್ಲಿಗೆ ಬಂದ ನಂತರ ಉಪನಯನ ಮಾಡಿ, ಸಂಧ್ಯಾವಂದನೆ, ಅಧ್ಯಯನ ಕ್ರಮ, ಆಚರಣೆಗಳನ್ನು ಕಲಿಸುವ ವ್ಯವಸ್ಥೆ ಇದೆ. ವರ್ಷಕ್ಕೆ ೩೦ ಮಕ್ಕಳನ್ನು ಮಾತ್ರ ಆಯ್ಕೆ ಮಾಡುತ್ತಾರೆ. ಭಾರತದಾದ್ಯಂತ ೫೦೦ ಅರ್ಜಿಗಳಲ್ಲಿ ೩೦ ನ್ನು ಮಾತ್ರ ಆಯ್ಕೆ ಮಾಡುವರು. ಆಯ್ಕೆ ಮಾಡುವಾಗ ತಂದೆ-ತಾಯಿಯರ ಸಂದರ್ಶನ ಪ್ರಧಾನವಾಗಿರುತ್ತದೆ. ಯಾವುದೇ ಪ್ರಮಾಣಪತ್ರ, ಪರೀಕ್ಷಾ ಮಂಡಳಿಯ ಅಪೇಕ್ಷೆ ಇದ್ದರೆ ಅದನ್ನು ತಿರಸ್ಕರಿಸಲಾಗುವುದು, ಕಡ್ಡಾಯವಾಗಿ ವರ್ಷದಲ್ಲಿ ಎರಡು ಬಾರಿ ನಡೆಯುವ ಎರಡು ದಿನಗಳ ಪೋಷಕರ ಪ್ರಶಿಕ್ಷಣಲ್ಲಿ ಭಾಗವಹಿಸುವು ಅನಿವಾರ್ಯ ನಿಯಮವಾಗಿರುತ್ತದೆ. ಇಷ್ಟು ವರ್ಷಗಳು ನಿಶ್ಶುಲ್ಕ ಮತ್ತು ನಿವಾಸಿ ಗುರುಕುಲವಾಗಿ ನಡೆದುಬಂದಿದೆ. ಈ ವರ್ಷದಿಂದ ಇಡುಗಂಟಾಗಿ ೨೫ ಸಾವಿರ ರೂಪಾಯಿಗಳನ್ನು ಸಂಗ್ರಹಿಸಲಾಗುತ್ತಿದೆ. ೧೨ ವರ್ಷಗಳ ಅಧ್ಯಯನ ಮುಗಿಸಿಕೊಂಡು ಹೋಗುವಾಗ ೫ ಲಕ್ಷ ಹಣವನ್ನು ಕೊಡುಗೆಯಾಗಿ ಕೊಟ್ಟು ಕಳುಹಿಸಲಾಗುತ್ತದೆ.

## ಗುಣಾಧಾರಿತ ಗಣ ವ್ಯವಸ್ಥೆ

ಪಂಚಮುಖಿ (ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ) ಮತ್ತು ಪಂಚಭಾಷಾ (ಪ್ರಮುಖ ಭಾಷೆಯಾಗಿ ಸಂಸ್ಕೃತ, ಪಕ್ಕದ ರಾಜ್ಯದ ಭಾಷೆಯಾಗಿ ಕನ್ನಡ, ರಾಷ್ಟ್ರಭಾಷೆಯಾಗಿ ಹಿಂದಿ, ವ್ಯವಹಾರದ ಭಾಷೆಯಾಗಿ ಮರಾಠಿ, ಔಪಚಾರಿಕ ಭಾಷೆಯಾಗಿ ಆಂಗ್ಲ) ಶಿಕ್ಷಣದ ಆಧಾರದ ಮೇಲೆ ವಯೋಮಿತಿಯನ್ನು ಗಮನಿಸದೆ ಕಲಿಕೆಯನ್ನು ಆಧರಿಸಿ ೧೨ ಗಣಗಳನ್ನು ಮಾಡಲಾಗುವುದು:

- ಭಕ್ತಿ ಗಣ
- ಶ್ರದ್ಧಾವಾನ್ ಗಣ
- ಪ್ರಜ್ಞಾವಾನ್ ಗಣ
- ಪ್ರತಿಭಾವಾನ್ ಗಣ
- ಧೃತಿಗಣ
- ಧೀ ಗಣ
- ತ್ರಿಪುರ ಗಣ
- ಮೇಧಾವತೀ ಗಣ
- ಪ್ರಜ್ಞಾವತೀ ಗಣ
- ಪ್ರತಿಭಾವತೀ ಗಣ
- ತೇಜಸ್ವಿನೀ ಗಣ

- ಓಜಸ್ವಿನೀ ಗಣ

## ಶಿಕ್ಷಣ ಪ್ರವಿಧಿ

ಸಿದ್ಧಗಿರಿ ಗುರುಕುಲದ ಪಠ್ಯ ೧೪ ಶಾಸ್ತ್ರಗಳು ಮತ್ತು ೬೪ ಕಲೆಗಳು.

ಒಂದೊಂದು ಗಣಕ್ಕೆ ಸಂಬಂಧಿಸಿದಂತೆ ಪಠ್ಯಗಳನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ವಿಶೇಷವೆಂದರೆ ಭಾಷೆಗಳಲ್ಲಿ ವರ್ಣಮಾಲೆಯನ್ನು ಹೇಳಿಕೊಡುವ ವಿಷಯ ವಿಶೇಷವಾಗಿತ್ತು. ವರ್ಣಮಾಲೆಗೆ ಸಂಬಂಧಿಸಿದ ಭಾರತೀಯ ಸಂಸ್ಕೃತಿಯನ್ನು ತಿಳಿಸುವ ಪಾಠಗಳನ್ನು ರಚಿಸಲಾಗಿದೆ. ಉದಾಹಾರಣೆಗೆ "ಅ" - ಅಗ್ನಿ, ಅಮ್ಮ ಅಮರರು "ಆ"- ಆಕಳು, ಆಲ, ಇತ್ಯಾದಿ. ಹೀಗೆ ಎಲ್ಲಾ ಭಾಷೆಗಳಲ್ಲೂ ಪಾಠಗಳನ್ನು ರಚಿಸಲಾಗಿದೆ.

ಗಣಿತದಲ್ಲಿ ಭಾರತೀಯ ಗಣಿತ, ಪರಿಸರ ವಿಜ್ಞಾನ, ಸಮಾಜದಲ್ಲಿ ಮೊದಲಿಗೆ ತನ್ನ ಸುತ್ತಲಿನ ಗ್ರಾಮೀಣ ಬದುಕಿನ ಅಧ್ಯಯನ ನಡೆಯುವುದು.

ಕುದುರೆ ಸವಾರಿ, ಸಂಗೀತ, ನೃತ್ಯ ಮರಗೆಲಸ, ಕುಂಬಾರಿಕೆ, ಬಣ್ಣ ಸಿದ್ಧಮಾಡುವುದು, ಬಟ್ಟೆ ತಯಾರಿಸುವುದು, ಗೋಪಾಲನೆ, ಕುಸ್ತಿ, ಕೃಷಿ, ಹೀಗೆ ಹತ್ತು ಹಲವು ಜೀವನ ಕಲೆಗಳನ್ನು ಕಲಿಸಲಾಗುವುದು. ಅವರ ಮುಖ್ಯ ಧ್ಯೇಯವಾಕ್ಯ - ವಿದ್ಯಾಧನಂ ಸರ್ವಧನಪ್ರದಾನಂ. ೧೨ ವರ್ಷಗಳ ಅಧ್ಯಯನ ಮುಗಿಸಿ ಗೃಹಸ್ಥಾಶ್ರಮಕ್ಕೆ ಕಾಲಿಡುವಾಗ ಅವರು ಬೇರೆಲ್ಲೋ ನೌಕರರಾಗಿ ಹಣಕ್ಕೆ ಕೈ ಚಾಚುವ ಬದಲು ತಾವು ಕೆಲಸ ನೀಡುವವರಾಗಿ, ಸ್ವಂತ ಉದ್ಯೋಗಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿ ಕಳುಹಿಸಿಕೊಡುವ ಧ್ಯೇಯ ಹೊಂದಿದ್ದಾರೆ.

ಒಂದು ಹಂತದವರೆಗೆ ಕೆಲವು ವಿದ್ಯೆಗಳು ಎಲ್ಲರಿಗೂ ಸಮಾನವಾಗಿದ್ದು, ನಂತರ ಹೆಚ್ಚಿನ ಅಧ್ಯಯನಕ್ಕೆ ಅವರವರ ಆಸಕ್ತಿಗೆ ತಕ್ಕಂತೆ ಬೇರೆ ಬೇರೆ ಗುರುಗಳ ಬಳಿ ಕಳುಹಿಸುವ ವ್ಯವಸ್ಥೆ ಇದೆ.

ಹುಣ್ಣಿಮೆ ಮತ್ತು ಅಮಾವಾಸ್ಯೆ, ಅಷ್ಟಮಿಯ ದಿನಗಳಂದು ಅನಧ್ಯಯನವನ್ನು ಮಾಡಲಾಗುವುದು. ಅಂದಿನ ದಿನ ಸ್ವಚ್ಛತಾ ಕೆಲಸ ಮಾಡುವರು, ಸಿನಿಮಾವನ್ನು ನೋಡುವರು, ಪೋಷಕರನ್ನು ಭೇಟಿ ಮಾಡುವ ಅವಕಾಶವಿರುವುದು. ದೀಪಾವಳಿ ಮತ್ತು ದಸರಾದಲ್ಲಿ ಮಾತ್ರ ಮನೆಗಳಿಗೆ ಹೋಗಿ ಬರುವ ಅವಕಾಶವಿದೆ.

## ವೃತ್ತಿಪರ ಕಲಿಕೆಯ ಅವಕಾಶಾಗಳು

ಸಿದ್ಧಗಿರಿ ಗುರುಕುಲದಲ್ಲಿ ಬದುಕುವ ರೀತಿ ಮತ್ತು ಕಲಿಸುವ ಜೀನವ ಕಲೆಗಳು ನೇರವಾಗಿ ಅವರ ಸ್ವಂತ ಉದ್ಯೋಗಕ್ಕೆ ಬೇಕಾದ ಎಲ್ಲಾ ಕೌಶಲಗಳನ್ನು, ಆತ್ಮಸ್ಥೈರ್ಯವನ್ನು ತುಂಬುತ್ತಿದೆ. ಜೊತೆಗೆ ಗ್ರಾಮೀಣ ಬದುಕಿನ ಸಮುದಾಯವನ್ನು ನಿರ್ಮಿಸುತ್ತಿರುವುದರಿಂದ ಅವರ ಜೀವನ,

ಉತ್ಪನ್ನಗಳಿಗೆ ಮಾರುಕಟ್ಟೆಯನ್ನೂ ಗ್ರಾಮದ ಬದುಕಿನಲ್ಲೇ ಕಂಡುಕೊಳ್ಳುವ ಅವಕಾಶವೂ ಇದೆ.

## ದೈನಂದಿನ ಚಟುವಟಿಕೆಗಳು

ದೈನಂದಿನ ಚಟುವಟಿಕೆಯಲ್ಲಿ ಆಸಕ್ತಿ ಮತ್ತು ಕುತೂಹಲ ಮೂಡಿಸಿದ ವಿಷಯವೆಂದರೆ ಸ್ವಾಮಿಗಳು ಎಷ್ಟೇ ಸಂಚಾರ ಮಾಡಿದ್ದರೂ ಮಲಗುವ ವೇಳೆಗೆ ಗುರುಕುಲದ ಮಕ್ಕಳೊಡನೆ ಮಲಗುವರು ಮತ್ತು ಬೆಳಗಿನ ಜಾವ ಮಕ್ಕಳಂತೆ ಬೇಗನೇ ಎದ್ದು ದೈನಂದಿನ ಕೆಲಸಗಳಲ್ಲಿ ತೊಡಗುವರು. ನಿಯಮೇನ ಪ್ರತಿದಿನ ಮಕ್ಕಳೊಡನೆ ೧.೫ ಗಂಟೆಗಳ ಸಂವಾದ ಬೆಳಗಿನ ವೇಳೆ ಇಟ್ಟುಕೊಳ್ಳುವರು. ತಮ್ಮ ಸಂಚಾರಕ್ಕೆ ೩ ಕೋಟಿ ಬೆಲೆಬಾಳುವ ಕಾರನ್ನು ಭಕ್ತಾದಿಗಳು ಉಡುಗೊರೆಯಾಗಿ ನೀಡಿದ್ದರೂ ತಾವು ಮಾತ್ರ ಸೈಕಲ್ಲಿನಲ್ಲಿ ಸಂಚರಿಸುತ್ತಾ ಮಕ್ಕಳಿಗೆ ಮಾದರಿಯ ಜೀವನವನ್ನು ನಡೆಸುತ್ತಿದ್ದಾರೆ. ಪ್ರತಿದಿನ ವಾದ್ಯ ಸಹಿತ ಪ್ರಾರ್ಥನೆ ಎರಡೂ ಹೊತ್ತು ನಡೆಯುವುದು.

## ಆಚಾರ್ಯ ಹಾಗೂ ಆಚಾರ್ಯೇತರ ವ್ಯವಹಾರ ಸಂಹಿತೆ

ಆಚಾರ್ಯರು ಮಕ್ಕಳೊಡನೆ ಕೆಲವೊಮ್ಮೆ ಪ್ರೀತಿಯಿಂದಲೂ, ಶಿಕ್ಷಿಸಬೇಕಾದ ಸಂದರ್ಭದಲ್ಲಿ ಶಿಕ್ಷೆ ನೀಡುತ್ತಲೂ ವ್ಯವಹರಿಸುತ್ತಿದ್ದರು. ಆಚಾರ್ಯೇತರರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು. ಸಂಸ್ಕೃತದಲ್ಲಿ ವ್ಯವಹಾರ ಅಲ್ಲಲ್ಲಿ ಕಂಡುಬಂದಿತು. ಉಳಿದಂತೆ ಮರಾಠಿ ಭಾಷೆ ಬಳಸುತ್ತಿದ್ದರು. ೩೦ ವರ್ಷಗಳಿಂದ ಮೌನವ್ರತದಲ್ಲಿದ್ದ ಅಪರೂಪದ ಆಚಾರ್ಯರನ್ನೂ ಕಂಡೆವು. ಗುರುಕುಲದ ಬಳಿ ಒಬ್ಬರು ಮೋಟಾರ್ ಬೈಕ್ ನಿಲ್ಲಿಸಲು ಬಂದಾಗ ಅವಕಾಶವಿಲ್ಲ ಎಂದು ತೆಗೆಸಿದರು. ಪಠ್ಯಪುಸ್ತಕ ಮತ್ತು ಮೊಬೈಲ್ ಅನ್ನು ತರಗತಿಯ ಒಳಗೆ ತೆಗೆದುಕೊಂಡು ಹೋಗುವಂತಿಲ್ಲ ಎಂಬ ನಿಯಮವನ್ನು ಎಲ್ಲರೂ ಪಾಲಿಸುತ್ತಿದ್ದರು. ಅಗತ್ಯವಿದ್ದಾಗ AV ROOM ಅನ್ನು ಬಳಸಬಹುದಾಗಿತ್ತು. ಗುರುಕುಲದ ಮಧ್ಯದ ಆವರಣದಲ್ಲಿ ದೊಡ್ಡ ಸ್ಥಳವಿದ್ದು, ಅಭ್ಯಾಸಕ್ಕೆ ವೇದಿಕೆಗೆ ಬಹಳಷ್ಟು ಅವಕಾಶಗಳಿದ್ದವು.

## ಸಾಮಾಜಿಕ ಹೊಣೆಗಾರಿಕೆಗಾಗಿ ನಡೆಯುವ ಚಟುವಟಿಕೆಗಳು

ವಿದ್ಯಾರ್ಥಿಗಳಿಗೆ ಸಾಮಾಜಿಕ ಹೊಣೆಗಾರಿಕೆ ಬಾಲ್ಯದಿಂದಲೇ ತರಲು ಗ್ರಾಮಗಳನ್ನೇ ದತ್ತುಪಡೆದು ಅಲ್ಲಿನ ಕುಲಕಸುಬುಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಶ್ರಮದಾನ, ಸೇವೆಗೆ ವಿಶೇಷ ಮಹತ್ವ ನೀಡಲಾಗಿದೆ. ಸ್ವಾಮಿಗಳ ಸಾಮಾಜಿಕ ದೃಷ್ಟಿಕೋನವಂತೂ ಅದ್ಭುತವಾಗಿದೆ. ಗುರುಕುಲದ ಆವರಣದಲ್ಲಿ ಎಲ್ಲಾ ಕುಲಕಸುಬುಗಳನ್ನು ತೋರಿಸುವ ಒಂದು ಗ್ರಾಮದ ಪ್ರಾತ್ಯಕ್ಷಿಕೆಯನ್ನು ಮಾಡಿಸಿದ್ದಾರೆ.




## ಆಚಾರ್ಯರ ಪ್ರಶಿಕ್ಷಣ ವ್ಯವಸ್ಥೆ

ಆಚಾರ್ಯರ ಪ್ರಶಿಕ್ಷಣಕ್ಕೆ ಅವರು ಹೇಳಿದ ಅಂಶವೆಂದರೆ ಸಿದ್ಧರಾಗುವವರೆಗೆ ಪ್ರಶಿಕ್ಷಣ ನಡೆಯುವುದು. ಮಕ್ಕಳ ಪ್ರತಿಭೆ, ಆಸಕ್ತಿಗಳನ್ನು ಗುರುತಿಸಿ ಅದಕ್ಕೆ ತಕ್ಕಂತೆ ಪೋಷಣೆ ನೀಡಬೇಕಿರುವುದರಿಂದ ಅಂತಹ ಪ್ರಶಿಕ್ಷಣವನ್ನು ನೀಡಲಾಗುವುದು. ವರ್ಷಕ್ಕೆ ಎರಡು ಬಾರಿ ನಿವಾಸಿ ೧೦ ದಿನಗಳ ಪ್ರಶಿಕ್ಷಣವರ್ಗವನ್ನು ನಡೆಸಲಾಗುವುದು.

## ಮುಂದಿನ ತರಗತಿಗೆ ನಿರ್ಣಯ

ವಿದ್ಯಾರ್ಥಿಗಳು ಮುಂದಿನ ತರಗತಿಗೆ ಹೋಗಲು ಅರ್ಹರೆಂಬುದನ್ನು ಮೌಖಿಕ ಮತ್ತು ಬರವಣಿಗೆ, ನಿರೀಕ್ಷಣ ಕ್ರಮಗಳಿಂದ ನಿರ್ಧರಿಸುವರು. ಸ್ವತಃ ಸ್ವಾಮಿಗಳು ಪರೀಕ್ಷೆ ಮಾಡುವರು. ಆದರೆ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ.

## ಹೊರಬರುವಾಗ ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಕೌಶಲಗಳ ಬೆಳವಣಿಗೆ

ಜ್ಞಾನ - ವ್ಯಕ್ತಿತ್ವ - ಕೌಶಲ ಹೀಗೆ ಮೂರು ಆಯಾಮಗಳಲ್ಲಿ ಮಕ್ಕಳು ಉತ್ತಮ ಪ್ರಜೆಗಳಾಗಿ ಸಮಾಜಕ್ಕೆ ಸಿಗುವರು. ಮನಸ್ಸನ್ನು ಶ್ರದ್ಧೆಯ ಕಡೆಗೆ, ಬುದ್ಧಿಯನ್ನು ಜ್ಞಾನದ ಕಡೆಗೆ, ಶರೀರವನ್ನು ಶ್ರಮದ ಕಡೆಗೆ ಕರೆದೊಯ್ಯುವುದು ಶಿಕ್ಷಣ ಎಂದು ನಂಬಲಾಗಿದೆ. ವಿದ್ಯೆಯೇ ಪರಮ ಧನವಾಗಿ

ಅವರನ್ನು ಕಾಯುವಂತೆ ಸಿದ್ಧಮಾಡಿ ಕಳುಹಿಸುವರು.

## ಗಮನಿಸಿದ ಇತರ ವಿಶೇಷಗಳು

- ಗರ್ಭಸಂಸ್ಕಾರ ಕೇಂದ್ರವನ್ನು ಮಾಡಲಾಗಿದೆ. ಅದರ ಎದುರುಗಡೆ ಸಪ್ತಧೇನು ಪರಿಕ್ರಮ ಗೋಮಾತಾ ಮಂದಿರವಿದೆ. ಗರ್ಭಿಣಿಯರು ಪ್ರತಿದಿನ ಅಲ್ಲಿ ಗೋಸೇವೆ ಮಾಡುತ್ತಾ ಪ್ರದಕ್ಷಿಣೆ ಮಾಡಬೇಕೆನ್ನುವ ಒಂದು ನಿಯಮವೂ ಇದೆ.
- ಗೋವಿನ ಪದಾರ್ಥಗಳಿಂದ ಮಾಡಿದ ಅನೇಕ ಔಷಧಿ, ನಿತ್ಯೋಪಯೋಗಿ ಪದಾರ್ಥಗಳ ಆಸ್ಪತ್ರೆ ಮತ್ತು ಮಾರುಕಟ್ಟೆ ಇದೆ.
- ಗೋವಿನಲ್ಲೂ ಅನೇಕ ರೀತಿಯ, ಜಾತಿಯ ಗೋವುಗಳನ್ನು ಪೋಷಣೆ ಮಾಡಲಾಗುತ್ತಿದೆ.
- ಗೋವಿನಂತೆ ಶ್ವಾನಗಳನ್ನೂ ಪೋಷಣೆ ಮಾಡಲಾಗುತ್ತಿದೆ.
- ಅಲ್ಲಲಿ ಸುಮಾರು ೭ ಕೆರೆಗಳನ್ನು ನಿರ್ಮಿಸಲಾಗಿದೆ. ಇದರಿಂದ ನೀರಿನ ಅಭಾವನ್ನು ಗೆಲ್ಲಲು ಪ್ರಯತ್ನಿಸಲಾಗುತ್ತಿದೆ.
- ಕೃಷಿವಿಜ್ಞಾನ ಸಂಶೋಧನೆಯಲ್ಲಿ ವಿವಿಧ ರೀತಿಯ ಭತ್ತದ ತಳಿಗಳ ಬೀಜಗಳನ್ನು ರಕ್ಷಿಸುವ ಪ್ರಯೋಗ ಮಾಡಲಾಗುತ್ತಿದೆ.
- ಗೋವುಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ವಿಶೇಷವಾಗಿ ಮಾಡಲಾಗಿದೆ. ಒಂದು ಬೋಗುಣಿಯಲ್ಲಿ ನೀರುಕುಡಿಯಲು ಬಂದಾಗ ಮೂಗು ತಾಗಿ ಕೊಳವೆಯಿಂದ ನೀರು ಬರುವಂತೆ ವ್ಯವಸ್ಥೆ ಮಾಡಿದೆ. ಇದರಿಂದ ನೀರು ಪೋಲಾಗುವುದನ್ನು ತಪ್ಪಿಸಲಾಗಿದೆ.
- ಇಡೀ ಮಠದ ಪ್ಲಾಸ್ಟಿಕ್ ನಿರ್ವಹಣೆಗಾಗಿ ಮರುಬಳಕೆಯ ಘಟಕವನ್ನು ಮಾಡಲಾಗಿದೆ.
- ಹುಣ್ಣಿಮೆಗಳಂದು ಸ್ವಾಮಿಗಳನ್ನು ಭೇಟಿಮಾಡಲು ಊರುಊರುಗಳಿಂದ ಜನರು ಬರುತ್ತಾರೆ. ಪ್ರತಿಯೊಬ್ಬರಿಗೂ ಅವರು ಸ್ಪಂದಿಸುವ ರೀತಿ ಚೆನ್ನಾಗಿತ್ತು. ರಾಜಕೀಯದ ಛಾಯೆ ಇದ್ದರೂ ರಾಜಕೀಯದ ವ್ಯಕ್ತಿಗಳನ್ನು ಹೆಚ್ಚು ಹತ್ತಿರದಲ್ಲಿ ಇಟ್ಟುಕೊಳ್ಳದೆ ಸರ್ವಾಂಗೀಣ ಶಿಕ್ಷಣಕ್ಕಾಗಿ ಯೋಜನೆಗಳನ್ನು ಮಾಡಿದ್ದಾರೆ. ಸ್ವಾಮಿಗಳ ದೂರದೃಷ್ಟಿ ಅದ್ಭುತ ಎನಿಸಿತು.

# ಜೀವಿಕಾ ಆಶ್ರಮ ಯಾತ್ರೆ

**ಶ್ರೀ ಅನಂತಶಯನ ಶಿರಹಟ್ಟಿ**
ಸಂಸ್ಕೃತ ಅಧ್ಯಾಪಕರು

## ಅರ್ಥವ್ಯವಸ್ಥೆ ಕಾರ್ಯಾಗಾರ

ಸ್ಥಳ:
ಜಬ್ಬಲ್ ಪುರ ಜಿಲ್ಲೆಯ ಇಂದ್ರಾಣ ಗ್ರಾಮ, ಮಧ್ಯಪ್ರದೇಶ

### ಪ್ರಯಾಣ:

ನವೆಂಬರ್ ೮, ೨೦೨೪ ಶುಕ್ರವಾರ, ಸಂಜೆ ೪.೨೦ ಕ್ಕೆ ಯಲಹಂಕದಿಂದ ಹೈದರಾಬಾದಿನ ಕಾಚಿಗುಡಕ್ಕೆ ರೈಲು ಪ್ರಯಾಣ. ಮಾರನೆ ದಿನ ೬.೩೦ ಗೆ ಸಿಕಿಂದರಾಬಾದ್ ಸಮೀಪದ ಹನುಮನ ದೇವಸ್ಥಾನದಲ್ಲಿ (ಒಬ್ಬ ಆಚಾರ್ಯರ ಮನೆ) ಸ್ನಾನಾಹ್ನೀಕ, ಭೋಜನ.

ಅಲ್ಲಿಂದ ೧.೪೦ ಕ್ಕೆ ವಂದೇ ಭಾರತ್ ರೈಲಿನಲ್ಲಿ ಹೊರಟು (೧೦ ಗಂಟೆಗೆ ಕಾದಿರಿಸಲಾಗಿದ್ದ ರೈಲು ೧೬ ಗಂಟೆ



ವಿಲಂಬವಾಗಿ ಬರುತ್ತಿತ್ತು. ಆದ್ದರಿಂದ ಅದನ್ನು ರದ್ದುಮಾಡಿ ವಂದೇ ಭಾರತ್ ಗೆ ಹೊರಟಿದ್ದು) ೮.೩೦ ನಾಗಪುರ ತಲುಪಿ, ಅಲ್ಲಿನ ಪೇಜಾವರ ಮಠದಲ್ಲಿ ಸಾಯಂಸಂಧ್ಯಾ, ಸಂಕೀರ್ತನೆ, ಉಪಾಹಾರ ಮುಗಿಸಿ ೧೧.೩೦ ಗೆ ಬಸ್ ಪ್ರಯಾಣದ ಮೂಲಕ ನವೆಂಬರ್ ೧೦ ರ ಬೆಳಗ್ಗೆ ೫.೩೦ ಗೆ ಜಬಲ್ಪುರ ತಲುಪಿದ್ದು. ಅಲ್ಲಿನ ಪೂರ್ವನಿಯೋಜಿತ ಖಾಸಗಿ ವಾಹನದ ಮೂಲಕ ಗೌರಿಘಾಟ್ ತಲುಪಿ ನರ್ಮದೆಯಲ್ಲಿ ಸ್ನಾನ, ಆಹ್ನೀಕ ಮುಗಿಸಿ ೯ ಗಂಟೆಗೆ ಜೀವಿಕಾ ಆಶ್ರಮ ತಲುಪಿದ್ದು. ೯.೩೦ ಇಂದ ಕಾರ್ಯಾಗಾರ ಆರಂಭ ಆಗಿದ್ದು.

ನವೆಂಬರ್ ೧೦ ರಿಂದ ೧೬ ನೆ ದಿನಾಂಕದ ವರೆಗೆ ಈ ಕಾರ್ಯಾಗಾರ ನಡೆದದ್ದು. ಮೊದಲ ದಿನ ಕಾರ್ಯಗಾರಿ ಯಂತ್ರದಲ್ಲಿ ಆಶಿಷ್ ಗುಪ್ತಾ ಅವರು ದೀಪ ಬೆಳಗುವುದರ ಮೂಲಕ ಆರಂಭಿಸಿದರು.

## ಮೊದಲ ಸತ್ರ:

ಜೀವಿಕಾ ಆಶ್ರಮದಲ್ಲಿ ಮೊದಲು ನಿರ್ಮಾಣಗೊಂಡ ಬಿದಿರಿನ ಕುಟೀರದಲ್ಲಿ ಮೊದಲ ಸತ್ರ ಆರಂಭವಾಯಿತು. ಅಲ್ಲಿ ಒಬ್ಬ ತಂಬೂರಿ ಬಾಬಾ ಜಾನಪದ ಹಾಡುಗಳನ್ನು ಹಾಡುತ್ತಿದ್ದರು, ಅದರ ವಿವರಣೆಯನ್ನು ಗುಪ್ತಾಜಿ ಮಾಡುತ್ತಿದ್ದರು. ಆನಂತರ ಮೊದಲಿಗೆ ಎಲ್ಲರು ತಮ್ಮ ತಮ್ಮ ಪರಿಚಯ ಮಾಡಿಕೊಂಡರು.

೧. ಪವನ - ಗುಜರಾತ್ ನವರು. ಸದ್ಯಕೆ ಬೆಂಗಳೂರಿನಲ್ಲಿ ಯೋಗವನ್ನು ಹೇಳಿಕೊಡುತ್ತಿದ್ದಾರೆ.

೨. ವೇಂಕಟೇಶ - ಹೈದರಾಬಾದ್ ನಿವಾಸಿ, ಗಾರ್ಡನಿಂಗ್ ಮಾಡಿಕೊಂಡಿದ್ದಾರೆ.

೩. ಮುಖೇಶ - ನೇಪಾಲದ ಇವರು ರೈತರ ಜೊತೆ ಕೆಲಸದಲ್ಲಿ ತೊಡಗಿದ್ದಾರೆ.

೪. ಅನಿಲ್ ಜಿ - ಮಹಾರಾಷ್ಟ್ರದ ಠಾಣೆಯ ನಿವಾಸಿ. ನಿವೃತ್ತರು

೫. ಅಭೀಪ್ಸಾ - ಬೆಂಗಳೂರಿನಲ್ಲಿ ಅಧ್ಯಯನ ನಡೆಸುತ್ತಿರುವ ಹುಡುಗಿ. (ಉತ್ತರದ ರಾಜ್ಯದವಳು)

೬. ಗೌರವಕೃಷ್ಣ - ಹೈದರಾಬಾದ್ ನಿವಾಸಿ

೭. ಮಹೇಂದ್ರ - ಬೆಂಗಳೂರಿನ IT ಉದ್ಯಮಿ

೮. ಜಾನಂತನ್ - ಮೂಲತ: ಮಹಾರಾಷ್ಟ್ರದ ಕೇರಳ ನಿವಾಸಿ

೯. ಜಿತೆಂದರ್ ಮಾನ್ - ಪಂಜಾಬ್ ನಿವಾಸಿ

೧೦. ಯುನೀಸ್ - ಕೇರಳದ ರೈತ

೧೧.೧೨ ರಾಮ ಮತ್ತು ಇರಾ - ದಂಪತಿಗಳು, ಹೈದರಾಬಾದ್ ನಿವಾಸಿಗಳು

೧೩. ಮಿಥುಲ್ - ಲೋಧಾನ್ (ಗಣಿತಜ್ಞ)

೧೪. ಚೇತನ್ - ಲಾತೂರ್ ನಿವಾಸಿ, ಅರ್ಥಶಾಸ್ತ್ರದ ವಿದ್ಯಾರ್ಥಿ

೧೫. ರಜತ್ - ಪಂಜಾಬ್

೧೬. ನೀಲು - ಮಧ್ಯಪ್ರದೇಶದ ಮಂಡಲದ ಬುಡಕಟ್ಟು ಜನಾಂಗದವರು

೧೭. ಸನೂಬರ್ - ಪಟನಾದ ದೆಹಲಿ ನಿವಾಸಿ

೧೮. ಅನಿಲ್ - ಬಿಹಾರದವರು

೧೯. ಅಲಿಯಾಸಾ ಬಾಸ್ (ಖಾನ್) - (ದೆಹಲಿ ನಿವಾಸಿ)

೨೦ - ತರುಣ್ - ಜಬಲ್ಪುರದ ಹುಡುಗ (ಮೊದಲ ದಿನ ಮತ್ತು ಆಗಾಗ ಕಾಣುತ್ತಿದ್ದ)

೨೧. ಶ್ಯಾಮ್ -

೨೨. ಲೀನಾ -

೨೩. ಆರ್ಯಮಾನ್ - (ಈ ಮೂವರು ಈ ಅರ್ಥವ್ಯವಸ್ಥಾ ಕಾರ್ಯಗಾರವನ್ನು ನಡೆಸಿದವರು)

೨೪ - ೩೦ - ಪೂರ್ಣಪ್ರಮತಿಯ ಬಳಗ - ಶ್ರೀನಿವಾಸ ಎಮ್ಮಾರ್ಳ್, ರೋಹಿತ್ ಶರ್ಮಾ, ಅಭಿಷೇಕ, ಶ್ರೀಕರ ಹೊಳ್ಳ, ಅನಂತಶಯನ, ವೇದೇಶ, ಅರ್ಣವ

ಎರಡನೆ ಸತ್ರ:

ಈ ಸತ್ರದಲ್ಲಿ ಜೀವಿಕಾ ಆಶ್ರಮದ ಪರಿಚಯವನ್ನು ಗುಪ್ತಾ ಜಿ ಮಾಡಿಸಿದರು.

೧. ಬಿದಿರಿನ ಕುಟೀರ - ಜಾಗ ತೆಗೆದುಕೊಂಡಾಗ ಮೊದಲು ನಿರ್ಮಾಣ ಮಾಡಿದ್ದು, ಬೇರೆ ಕಟ್ಟಡ ಕಟ್ಟುವ ವರೆ ಅಲ್ಲಿಯೆ ದಂಪತಿಗಳು ವಾಸ ಮಾಡುತ್ತಿದ್ದರು. ಮುಖ್ಯತ: ಸತ್ರ ನಡೆದ ಜಾಗ

೨. ಮನೆ : ಮನೆಯನ್ನು ಹಳೆಯ ಕಾಲದ ವಿನ್ಯಾಸದಂತೆ ಮಣ್ಣಿನಿಂದ ಕಟ್ಟಲಾಗಿದೆ ಮತ್ತು ಮೇಲ್ಛಾವಣೆ ನಮ್ಮ ಆನಂದವನದ ಹಾಗೆ ಇದೆ. ಅದರ ಬಾಗಿಲುಗಳು ನೂರು ವರ್ಷ ಹಳೆಯವು.

೩. ಅಡುಗೆ ಮನೆ : ಕಟ್ಟಿಗೆ ಒಲೆಯಲ್ಲಿ ಅಡುಗೆ ಮಾಡಬಹುದಾದ, ಸುಮಾರು ೩೦ ಜನರು ಕುಳಿತು ಊಟ ಮಾಡಬಹುದಾದ ವಿಶಾಲವಾದ ಕೊಠಡಿ, ಇಲ್ಲಿ ಕೂಡ ಬಿದಿರಿನ ಬಳಕೆ ಹೆಚ್ಚು ಇದೆ.

೪. ಕಾರ್ಯಗಾರಿ ಭವನ : ಅನೇಕ ಕಲಾಕೃತಿಗಳ ಪ್ರದರ್ಶಿನಿ (ಮಡಿಕೆ, ಬುಟ್ಟಿ,ಕಂಚಿನ ಪಾತ್ರೆ ,ಕಟ್ಟಿಗೆಯ ಕಲೆಗಳು ಮತ್ತು ಲೋಹದ ಕಲೆಗಳು )

ಒಟ್ಟರೆ ಮೂರುವರೆ ಎಕರೆ ಜಾಗ

ಇಲ್ಲಿಯ ವರೆಗೆ ಎಲ್ಲವೂ ಸೇರಿ ಖರ್ಚಾದದ್ದು ಸುಮಾರು ೧ ಕೋಟಿ ಮಾತ್ರ

ಅಲ್ಲಿನ ಮಾವಿನ ಮರಗಳು ಊರಿನವರು ಹಂಚಿಕೊಂಡಿದ್ದರು, ಅವುಗಳನ್ನು ಅವರಿಗಾಗಿಯೆ ಬಿಟ್ಟಿದ್ದಾರೆ. ಆದ್ದರಿಂದ ಸ್ಥಳೀಯರು ಚಿಂತಿತರಾಗಿಲ್ಲ.

ಒಂದು ತೆರೆದ ವೇದಿಕೆ ಇದೆ. ನೃತ್ಯ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಲು.

ಅಲ್ಲಿನ ಗೇಟ್ ಸ್ಥಳೀಯರೆ ಕಬ್ಬಿಣದಿಂದ (ಗುಜುರಿ) ಮಾಡಿದ್ದು, ಅದರಲ್ಲಿಯೂ ಕಲೆ ಕಾಣುತ್ತದೆ.

## ಮೊದಲ ದಿನದ ಮೂರನೆ ಸತ್ರದಿಂದ ಐದನೆ ದಿನದ ವರೆಗೆ

ಈ ನಾಲ್ಕೂವರೆ ದಿನ ನಮ್ಮ ದೇಶದ ಆರ್ಥಿಕ ವ್ಯವಸ್ಥೆ ಹೇಗಿತ್ತು, ಅದು ಹೇಗೆ ಕ್ರಮೇಣ ಬದಲಾಯಿತು ಮತ್ತು ಜಾಗತಿಕವಾಗಿ ಹೇಗೆ ವಿಸ್ತಾರಗೊಂಡಿತ್ತು ಎಂದು ವಿಸ್ತಾರವಾಗಿ ತಿಳಿಸಲಾಯಿತು. ಇಲ್ಲಿ ಬಂದ ವಿಷಯಗಳು

ಅರ್ಥಶಾಸ್ತ್ರ ಎಂದರೇನು ?

ಉದಾರೀಕರಣ ಎಂದರೇನು ? ಅಭಿವೃದ್ಧಿ ಯಾವುದು ?

- ಕೈಗಾರೀಕರಣ ಮತ್ತು ವಸಾಹತುಶಾಹಿಯ ಕಥೆ
- ಮಾರುಕಟ್ಟೆ ಮತ್ತು ಹಣದ ಇತಿಹಾಸ
- ಆರ್ಥಿಕತೆ ಮತ್ತು ಪರಿಸರ ವಿಜ್ಞಾನ
- ಆಧುನಿಕ ಅರ್ಥಶಾಸ್ತ್ರದ ತಾತ್ವಿಕ ಮೂಲಗಳು
- ಭಾರತೀಯ ಆರ್ಥಿಕ ಇತಿಹಾಸ
- ಕೃಷಿಯ ಕಥೆ
- ಹತ್ತಿಯ ಕಥೆ

- ಉಕ್ಕಿನ ಕಥೆ
- ಶಿಕ್ಷಣದ ಕಥೆ
- ಕುಲವೃತ್ತಿಯ ಉತ್ಪಾದನೆ ಮತ್ತು ಉದ್ಯಮದ ಉತ್ಪಾದನೆ
- ಸಣ್ಣ ತಂತ್ರಜ್ಞಾನ ಮತ್ತು ದೊಡ್ಡ ತಂತ್ರಜ್ಞಾನ
- ಕಲೆ ಮತ್ತು ಸೌಂದರ್ಯದೃಷ್ಟಿ
- ಗ್ರಾಮ ಎಂದರೇನು ?
- ಸಾಮಾಜಿಕ ಅರ್ಥಶಾಸ್ತ್ರ
-

ಈ ಎಲ್ಲ ವಿಷಯಗಳ ಮುಖ್ಯ ತಾತ್ಪರ್ಯ ಏನೆಂದರೆ ನಮ್ಮ ಸಂಸ್ಕೃತಿಯನ್ನು, ಅನ್ಯೋನ್ಯತೆಯನ್ನು ನಾಶ ಮಾಡುವುದೇ ಆಗಿತ್ತು. ಅದು ಕೆಲವರ ಅರಿವಿಗೆ ಬರುವ ಮೊದಲೆ ಎಲ್ಲವೂ ಬದಲಾಗಿತ್ತು. ಈ ಅರಿವು ಬಂದವರು ಹೇಳಿದರೂ ಅರ್ಥ ಆಗದೆ ಇರುವಷ್ಟು ನಮ್ಮ ಮನಸ್ಸು ಬದಲಾಗಿದೆ. ಈ ಸತ್ರಗಳಲ್ಲಿ ಸುಮಾರು ೨೦೦ ವರ್ಷಗಳಿಂದೀಚೆ ಆದ ಬದಲಾವಣೆಯನ್ನು ಮಾತ್ರ ಮುಖ್ಯತ: ಚರ್ಚಿಸಲಾಯಿತು.

ಇತಿಹಾಸದ ಪುಸ್ತಕಗಳಲ್ಲೇನಿದೆ ಹಾಗೆ ಹಳ್ಳಿಗಳಲ್ಲಿ ಕಾಣುವುದಿಲ್ಲ. ಅಲ್ಲಿ ಸಾಮರಸ್ಯವಿದೆ. ಅದಕ್ಕಿಂತ ವಿಭಿನ್ನವಾಗಿ ಆಳುವವರು, ಓದಿರುವವರು ಭಾರತವನ್ನು (ಜಗತ್ತನ್ನು) ನಡೆಸುತ್ತಿದ್ದಾರೆ. ಈಗ ಹಳ್ಳಿಯ ಜೀವನವನ್ನೂ ಆಧುನಿಕತೆ ಆವರಿಸುತ್ತಿದೆ. ಆದರೆ ಹಳ್ಳಿಯ ಜೀವನ ಎಷ್ಟು ಅನ್ಯೋನ್ಯತೆಯಿಂದ ಕೂಡಿತ್ತು, ಆಗಿನ ಅರ್ಥವ್ಯವಸ್ಥೆ ಎಷ್ಟು ವ್ಯವಸ್ಥಿತವಾಗಿತ್ತು ಎಂದು ವಿಸ್ತಾರವಾಗಿ ಚರ್ಚಿಸಲಾಯಿತು.

ಈ ಸತ್ರಗಳಲ್ಲಿ ನನಗೆ ಅರ್ಥ ಆಗಿರುವ ಕೆಲವು ಒಂದೆರಡು ವಿಷಯಗಳನ್ನು ಇಲ್ಲಿ ಹಂಚಿಕೊಳ್ಳುವೆ.

### mass production ಬೇಡ production by mass ಬೇಕು :-

ಈಗಿನ ಜಗತ್ತಿನಲ್ಲಿ ಕಾರ್ಖಾನೆಗಳು ಯಂತ್ರಗಳ ಸಹಾಯದಿಂದ  ಸಹಸ್ರಾರು ಸಂಖ್ಯೆಯಲ್ಲಿ ಉತ್ಪನ್ನಗಳನ್ನು ತಯಾರು ಮಾಡಲಾಗುತ್ತಿದೆ. ಬಟ್ಟೆ, ಪಾತ್ರೆ ಇತ್ಯಾದಿ ಎಲ್ಲ ವಸ್ತುಗಳೂ ಪ್ರತಿದಿನ ಮಾರುಕಟ್ಟೆಗೆ ಬರುತ್ತವೆ. ಅವುಗಳ ಮಾರಾಟ ಆಗುತ್ತಿಲ್ಲ ಎಂದು ಒಂದಕ್ಕೊಂದು ಉಚಿತ, ಅರ್ಧ ಬೆಲೆ ಇತ್ಯಾದಿ ಏನೇನು ಉಪಾಯಗಳನ್ನು ಮಾರಾಟಗಾರರು ಮಾಡಬೇಕಾಗುತ್ತದೆ. mass production (ಸಾಮೂಹಿಕ ಉತ್ಪಾದನೆ) ಇಂದ ಆದ ಅವ್ಯವಸ್ಥೆಯ ಒಂದು ಮುಖ ಇದು. ಇದು ಅದೆಷ್ಟು ಜನರ ಕಲೆ, ಕೆಲಸ, ಅನ್ಯೋನ್ಯತೆ ಕಳೆದಿದೆ ಎಂದು ಯೋಚಿಸಿದರೆ ದಿಗ್ಭ್ರಾಂತರಾಗುತ್ತೇವೆ.

ಆದರೆ ಹಿಂದಿನ ಹಳ್ಳಿಯ ಜೀವನ ಹಾಗೆ ಇರಲಿಲ್ಲ. ಹೆಚ್ಚು ಹಿಂದೆ ಬೇಡ, ಇತ್ತೀಚಿನ ೫೦-೧೦೦ ವರ್ಷಗಳ ಹಿಂದೆ ಸಾಕು. ಆಗಿನ ಜೀವನ ಪದ್ಧತಿ ಹೇಗಿತ್ತು. ಒಂದು ಕುಟುಂಬ ಒಂದು ಕೆಲಸವನ್ನು ಮಾಡುತ್ತಿತ್ತು. ಅಲ್ಲಿ ವ್ಯಕ್ತಿ ಪ್ರಧಾನ ಅಲ್ಲ, ಕುಟುಂಬ ಮುಖ್ಯ. ಉದಾ:

ಮಡಿಕೆ ಮಾಡುವ ಕುಟುಂಬದವರು ಸುತ್ತ-ಮುತ್ತಲಿನ ಹಳ್ಳಿಯ ನಿರ್ದಿಷ್ಟ ಮನೆಗೆ ಅವರಿಂದಲೆ ಮಡಿಕೆ ಮಾಡಿಕೊಡಲಾಗುತ್ತಿತ್ತು. ಮಡಿಕೆ ಮಾಡುವ ಕುಟುಂಬದ ಎಲ್ಲರೂ ಅದಕ್ಕೆ ಸಹಕಾರಿಗಳಾಗಿರುತ್ತಿದ್ದರು. ಮಡಿಕೆ ಮಡುವುದು ಒಬ್ಬನ ಕೆಲಸ ಮಾತ್ರ ಆಗಿರಲಿಲ್ಲ. ಇದು ಬಟ್ಟೆ, ಪಾತ್ರೆ, ಮರದ ಕೆಲಸ ಇತ್ಯಾದಿ ಎಲ್ಲ ಕೆಲಸಗಳಿಗೂ ಸಮಾನ. ಈಗ ಒಬ್ಬ ಮಾತ್ರ ದುಡಿದು ಬರುತ್ತಾನೆ. ಬಂದು "ನಿಮಗೇನು? ದುಡಿಯುವವ ನಾನು" ಎನ್ನುವ ಅಹಂಕಾರಪಡುತ್ತಾನೆ. ಹಿಂದಿನ ಕೌಟುಂಬಿಕ ಜೀವನಕ್ಕೂ ಈಗಿನ ವೈಯುಕ್ತಿಕ ಜೀವನಕ್ಕೂ ಅಜಗಜಾಂತರ. ಸರಿಯಾಗಿ ವಿಚಾರ-ವಿಮರ್ಶೆ ಮಾಡಿ ನೋಡಿದರೆ ಇದೊಂದು ವ್ಯವಸ್ಥಿತ ಹುನ್ನಾರ ಎಂದು ಸ್ಪಷ್ಟ ಆಗುತ್ತದೆ.

## ಪುರುಷಪ್ರಧಾನ ದೇಶ ಮಾಡಿದ್ದು ಯಾರು ?

ಹಿಂದೆ ಹೇಳಿದ ಹಾಗೆ ಒಂದು ಕುಟುಂಬದ ಎಲ್ಲರೂ ಸೇರಿ ತಮ್ಮ ಮನೆಯನ್ನು ತಮ್ಮ ಕುಲವೃತ್ತಿಯಿಂದ ನಡೆಸುತ್ತಿದ್ದರು. ಅಲ್ಲಿ ಒಬ್ಬರದು ಮಾತ್ರ ದುಡಿಮೆ ಇರಲಿಲ್ಲ ಎನ್ನುವುದು ಸ್ಪಷ್ಟ. ಆಗ ಹೊರಗೆ ಹೋಗಿ ದುಡಿಮೆ ಮಾಡಬೇಕಿರಲಿಲ್ಲ. ಮಡಿಕೆ, ಬಟ್ಟೆ, ಮರ, ಲೋಹದ ಕೆಲಸ ಇತ್ಯಾದಿ ಬಹಳ ಕೆಲಸಗಳು ಮನೆಯಲ್ಲಿಯೇ ನಡೆಯುತ್ತಿದ್ದವು. ಸ್ವಲ್ಪ ಪ್ರಮಾಣದಲ್ಲಿ ಹೊರಗೆ ಕೆಲಸ ಇರಬಹುದು ಬಿಟ್ಟರೆ ಮುಖ್ಯ ಕೆಲಸ ಅವರವರ ಜಾಗದಲ್ಲಿಯೇ ನಡೆಯುತ್ತಿದ್ದವು. ಆದರೆ ಕಾಲಕ್ರಮೇಣ ಗಂಡಸು ಹೊರಗೆ ಹೋಗಿ ದುಡಿಯುವ ಸ್ಥಿತಿ ಬಂದು. ಹೆಣ್ಣು ಮನೆಯಲ್ಲಿ ಮನೆಗೆಲಸ ಮಾಡಬೇಕಾಯಿತು. ಆನಂತರ ಪುರುಷಪ್ರಧಾನ ರಾಷ್ಟ್ರ ಇದು ಎಂದು ಹೇಳಿ ಇಲ್ಲಿ ಅಸಮಾನತೆ ಇದೆ, ಸ್ತ್ರೀಶೋಷಣೆ ನಡೆಯುತ್ತಿದೆ ಎಂದು ಬಿಂಬಿಸಿದರು. ಆದರೆ ಗಂಡಸು ಯಾಕೆ ಹೊರಗೆ ಹೋಗಿ ದುಡಿಯಬೇಕಾಯಿತು? ಕುಟುಂಬ ವೃತ್ತಿ ಮಡುವುದನ್ನು ತಪ್ಪಿಸಿದರು, ಹೊರಗೆ ಹೋಗಿ ಕಾರ್ಖಾನೆಯಲ್ಲಿ ದುಡಿಯಲು ದೈಹಿಕ ಬಲ ಇದ್ದದ್ದು ಗಂಡಸಿಗೆ. ಅವನೇ ಹೋಗಬೇಕಾಯಿತು. ಇದು ಕೂಡ ವ್ಯವಸ್ಥಿತ ಸಂಚಾಗಿದೆ.

ಕಾಡಿನ ಮಧ್ಯೆ ಸಂಚರಿಸಿ, ಅಲ್ಲಿ ಸಿಗುವ ಕಲ್ಲನ್ನು ಸಂಗ್ರಹಿಸಿ, ಆ ಕಲ್ಲಿನಿಂದ ಮನೆಯಲ್ಲಿಯೇ ಲೋಹವನ್ನು ತೆಗೆದು, ಅದರಿಂದ ವಿವಿಧ ಆಕಾರದ ಪಾತ್ರೆಗಳನ್ನು ವಸ್ತುಗಳನ್ನು ಮಾಡಿ ಬದುಕುತ್ತಿದ್ದ ಕುಟುಂಬಕ್ಕೆ ಕಾಡಿನಿಂದ ಕಲ್ಲು ತರುವುದು ಕಾನೂನಿನ ಪ್ರಕಾರ ಅಪರಾಧ. ಹಾಗೆ ಕಲ್ಲು ತಂದರೆ ಅದನ್ನು ಕಳ್ಳತನ ಎಂದು ಬಿಂಬಿಸಿ ಸೆರೆಹಿಡಿಯಬೇಕಾಗುತ್ತದೆ ಎಂದು ಹೆದರಿಸಿದರು. ಆ ಕಲ್ಲಗಳನ್ನು ಸಂಗ್ರಹಿಸಲು ದೊಡ್ಡ ದೊಡ್ಡ ಕಂಪನಿಗಳಿಗೆ ಅನುಮತಿ ನೀಡಲಾಯಿತು. ಅವರು ಕಾಡು ಕೊರೆದು ತೆಗೆದುಕೊಂಡು ಹೋದರು. ಕಾರ್ಖಾನೆಯಲ್ಲಿ

ದೊಡ್ಡ ಪಮಾಣದಲ್ಲಿ ಉತ್ಪಾದನೆ ಮಾಡಲು ಆರಂಭಿಸಿದರು. ಯಾವ ಮನೆಯಲ್ಲಿ ಸ್ವತಂತ್ರವಾಗಿ ಲೋಹದ ಕೆಲಸ ಮಾಡುತ್ತಿದ್ದನೋ ಅವನು ಈಗ ಆ ಕಾರ್ಖಾನೆಯಲ್ಲಿ ಸಂಬಳಕ್ಕಾಗಿ ದುಡಿಯುವ ಸ್ಥಿತಿಗೆ ಬಂದನು. ಕಾಡಿಗೆ ಸ್ವಲ್ಪವೂ ಹಾನಿ ಮಾಡದೆ ಲೋಹ ಆಗಲೂ ತಯಾರಾಗುತ್ತಿತ್ತು, ಜೀವನವೂ ನಡೆಯುತ್ತಿತ್ತು. ಆದರೀಗ ಕಾಡಿನ ಜೊತೆ ಜೀವನವೂ ನಾಶವಾಗುತ್ತಿದೆ.

### ಸಂಚಾರಿ ಸಣ್ಣ ಕಾರ್ಖಾನೆ :-

ಬಟ್ಟೆ, ಬುಟಿ, ಪಾತ್ರೆ ಇವೆಲ್ಲ ಕುಲವೃತ್ತಿಯವರು ತಮ್ಮ ತಮ್ಮ ಮನೆಗಳಲ್ಲಿಯೇ ಮಾಡುತ್ತಿದ್ದರು. ಅವರು ಬೇರೆ ಕಡೆ ಹೋದರೆ ತಮ್ಮ ಕಾರ್ಖಾನೆಯನ್ನು ಎತ್ತಿಕೊಂಡು ಹೋಗುತ್ತಿದ್ದರು. ಅಲ್ಲಿ ಜೀವನ ನಡೆಸುತ್ತಿದ್ದರು. ಆದರೀಗ ಸಾಧ್ಯವೆ ? ಯೋಚಿಸುವುದೂ ಕಷ್ಟ.

### ಅನ್ಯೋನ್ಯತೆ ಮತ್ತು ತೃಪ್ತಿ : -

ಗ್ರಾಮೀಣ ಜೀವನದಲ್ಲಿನ ಅನ್ಯೋನ್ಯತೆ ನಮ್ಮ ಹಿರಿಯರ ನೆನಪಿನಿಂದ ಮಾಸಿಲ್ಲ. ಊರಲ್ಲಿ ಒಂದು ಮದುವೆ ಎಂದಾದರೆ ಅದಕ್ಕೆ ಬೇಕಾದ ವ್ಯವಸ್ಥೆಗೆ ಊರಿನ ಎಲ್ಲ ಜನರೂ ನಿಲ್ಲುತ್ತಿದ್ದರು. ಚಪ್ಪರ ಕಟ್ಟುವುದರಿಂದ ಹಿಡಿದು ಭೋಜನ ಮುಗಿಸಿ ಅತಿಥಿಗಳನ್ನು ಕಳುಹಿಸುವವರೆಗೂ. ಇದಕ್ಕೆ ಹಣಕಾಸಿನ ಚಿಂತೆ ಇರಲಿಲ್ಲ. ಇದು ಸಹಕಾರ. ಆಗಿನ ಜನರು ತಮ್ಮ ಉತ್ಪಾದನೆಯನ್ನು ನಾಲ್ಕು ಭಾಗಗಳನ್ನು ಮಾಡಿಕೊಂಡಿದ್ದರು. ಅದರಲ್ಲಿ ಪ್ರಮುಖ ಎರಡನ್ನು ಇಲ್ಲಿ ನೋಡೋಣ.

### ಆವಶ್ಯಕ :

ತಾನು ತಯಾರಿಸಿದ ವಸ್ತುಗಳನ್ನು ಮಾರಿ ಬದುಕುವುದು. ಇಲ್ಲಿ ತಾನು ಕೊಟ್ಟ ಪದಾರ್ಥಕ್ಕೆ ಇಷ್ಟು ಬೆಲೆ ಎಂದು ಇರುತ್ತದೆ. (ಇಲ್ಲಿ ಮಾರುವುದು ಎಂದರೆ ಹಣದ ರೂಪದಲ್ಲಿ ಅಲ್ಲ. ಅದರ ಬಗ್ಗೆ ಮುಂದೆ ನೋಡೋಣ.)

### ನಿರಪೇಕ್ಷ :

ಒಂದು ಮನೆಯಲ್ಲಿ ಏನಾದರು ಶುಭ-ಅಶುಭ ಕೆಲಸಗಳಾದರೆ ಅವರಿಗೆ ಹೋಗಿ ಸಹಾಯ ಮಾಡುವುದು. ಇದಕ್ಕೆ ಪ್ರತಿಯಾಗಿ ಏನನ್ನು ಪಡೆಯುವುದಿಲ್ಲ. ಅವರೂ ತಮ್ಮ ಪರಿವಾರ ಎನ್ನುವ ಚಿಂತನೆ. ಒಬ್ಬರ ಮನೆಯಲ್ಲಿ ಯಾರಾದರು ಮೃತರಾದರೆ, ಆ ಮನೆಗೆ ಒಂದು ಮಡಿಕೆ ಬೇಕು. ಅದನ್ನು ಕುಂಬಾರ ತಂದುಕೊಡುತ್ತಿದ್ದ. ಅದು ತನ್ನ ಕರ್ತವ್ಯವೆಂದು ಭಾವಿಸಿ ಮತ್ತು ಪ್ರತಿಫಲಾಪೇಕ್ಷೆ ಇಲ್ಲದೆ. ಇಲ್ಲಿ ಪದಾರ್ಥಕ್ಕೆ ಒಂದು ಬೆಲೆ (Rate) ಎಂದು ಇರುವುದಿಲ್ಲ. ಊರ ಹಬ್ಬ, ಉತ್ಸವ ಜಾತ್ರೆ ಇತ್ಯಾದಿಗಳಲ್ಲಿಯೂ ಇಂದಿನಂತೆ ಮಾರಾಟವೆಂದು ಮಾಡುತ್ತಿರಲಿಲ್ಲ.

### ಮಾರಾಟಕ್ಕೆ ಹೆಣಗುತ್ತಿರಲಿಲ್ಲ: -

ಸಾಮೂಹಿಕ ಉತ್ಪಾದನೆ ಮಾಡಿ ಅವುಗಳನ್ನು ಹಬ್ಬ ಹರಿದಿನಗಳಲ್ಲಿ ಏನೇನೊ

ಕೊಡುಗೆ ಎನ್ನುವ ನೆಪದಲ್ಲಿ ಮಾರಾಟ ಮಾಡುತ್ತಿರುವುದನ್ನು ಈಗ ನಾವು ಕಾಣುತ್ತಿದ್ದೇವೆ. ಆದರೆ ಹಿಂದೆ ಒಂದು ವಸ್ತು ಬೇಕಿದ್ದರೆ ಅದನ್ನು ಮಾಡುವವನ ಬಳಿ ಹೋಗಿ ಕೇಳಿದರೆ ಅವನು ಒಂದು ಅಥವಾ ಕೆಲವು ದಿನದಲ್ಲಿ ಮಾಡಿಕೊಡುತ್ತಿದ್ದ. ವ್ಯಾಪಾರಿಯ ಬಳಿ ಸ್ಟಾಕ್ ಇರುತ್ತಿರಲಿಲ್ಲ ಮತ್ತು ಗ್ರಾಹಕನ ಬಳಿ ಸಮಯ ಇರುತ್ತಿತ್ತು; ಕಾಯುವ ತಾಳ್ಮೆ ಇರುತ್ತಿತ್ತು. ಒಮ್ಮೆಯೂ ತಾನು ಮಾಡಿದ ಪದಾರ್ಥ ಮಾರಾಟವಾಗಿಲ್ಲ ಎನ್ನುವ ಚಿಂತೆ ವ್ಯಾಪಾರಿಗೆ ಬರುತ್ತಿರಲಿಲ್ಲ.

### ವಿನಿಮಯ ಪದ್ಧತಿ :

ನಾವು ತಿಳಿದ ವಿನಿಮಯ ಪದ್ಧತಿ ಎಂದರೆ ಏನು ? ಒಬ್ಬ ಕುಂಬಾರನಿಗೆ ರೈತ ಧಾನ್ಯ ಕೊಟ್ಟರೆ ತನ್ನ ಬಳಿ ಇದ್ದ ಮಡಿಕೆಯನ್ನು ರೈತನಿಗೆ ಕೊಡುತ್ತಾನೆ. ಹೀಗೆ ವ್ಯವಹಾರ ನಡೆಯುತ್ತಿತ್ತು ಎಂದು. ರೈತನಿಗೆ ಮಡಿಕೆ ಬೇಡ ಎಂದಾರೆ ಏನು ಮಾಡುತ್ತಿದ್ದರು ? ಈಗಿನಂತೆ ನನಗೆ ಉತ್ಪನ್ನ ಬಂದ ನಂತರ ನಾನು ಹಣ ಕೊಡುತ್ತೇನೆ; ಅಥವಾ ಹಣ ಕೊಟ್ಟ ನಂತರ ಉತ್ಪನ್ನ ಕಡುತ್ತಾರೆ. ಆದರೆ ಆಗ ಅಗತ್ಯ ಇದ್ದಾಗ ಇರುವವರ ಕಡೆಯಿಂದ ಉತ್ಪನ್ನ ಪಡೆಯುವುದು, ಅವರಿಗೆ ಅಗತ್ಯ ಬಂದಾಗ ತಮ್ಮ ಉತ್ಪನ್ನ ಕೊಡುವುದು. ಇಲ್ಲಿ ಪರಸ್ಪರ ನಂಬಿಕೆ, ಪ್ರಾಮಾಣಿಕತೆ ಇವೆಲ್ಲ ಈಗಿನ ಕಾಲಕ್ಕೆ ಊಹೆಗೂ ನಿಲುಕದಂತಾಗಿದೆ. ಆದರೆ ಆಧುನಿಕತೆಯ ಪ್ರವೇಶ ಆಗಿರದ, ಅಥವಾ ಇನ್ನೂ ಹೆಚ್ಚು ಪ್ರವೇಶ ಆಗದ ಹಳ್ಳಿಗಳಲ್ಲಿ ಇದನ್ನು ಕಾಣಬಹುದು.

### ಆಗ ಸಮ್ಮಾನ, ಈಗ ಬಿಗುಮಾನ

ಒಂದು ಕುಲವೃತ್ತಿಯಲ್ಲಿ ಇವರಿಗೆ ಆಗ ಸಮ್ಮಾನ ಸಿಗುತ್ತಿತ್ತು. ಒಂದು ಮದುವೆಗೆ ಒಬ್ಬ ನೇಕಾರನಿಂದ ಬಟ್ಟೆ ನೇಯಿಸಬೇಕು ಎಂದಿದ್ದರೆ ಅವನಿಗೆ ಸೂಕ್ತ ಗೌರವದ ಮೂಲಕ ಹೇಳಿ, ಉತ್ಪನ್ನ ಪಡೆಯುವಾಗ ಅವನಿಗೆ ಅಷ್ಟೇ ಗೌರವದ ಕ್ರಿಯಾ ಕಲಾಪಗಳನ್ನು ಮಾಡುತ್ತಿದ್ದರು. ಈಗ ನನ್ನ ಬಳಿ ಇಷ್ಟು ಹಣ ಇದೆ ಎನ್ನುವ ಬಿಗುಮಾನದಿಂದ ನಮ್ಮ ವ್ಯವಹಾರ ನಡೆಯುತ್ತಿದೆ.

### ಅರ್ಥವ್ಯವಸ್ಥೆ ಆಗ: ಈಗ

ಒಂದು ಗ್ರಾಮದಲ್ಲಿ ಸುಮಾರು ೩೬೦ ಜಾತಿಗಳು ಇರುತ್ತಿದ್ದವು. ಇಲ್ಲಿ ಜಾತಿ ಎಂದರೆ ಅವರ ಕುಲವೃತ್ತಿಯನ್ನು ಆಧರಿಸಿ ಹೇಳುತ್ತಾರೆ. ಆ ೩೬೦ ಕುಲವೃತ್ತಿಯನ್ನು ಆಧರಿಸಿಯೇ ಆ ಗ್ರಾಮ ಸ್ವತಂತ್ರವಾಗಿ ಬದುಕುತ್ತಿತ್ತು. ಉತ್ತರ ಭಾರತದ ಪ್ರಸಿದ್ಧ ಪದಾರ್ಥ ನಮ್ಮ ಊರಿನಲ್ಲಿ ತಿನ್ನಬೇಕು ಎನ್ನುವ ಬಯಕೆ ಕೂಡ ಇರಲಿಲ್ಲ. ಆರೋಗ್ಯದ ಪ್ರಕಾರ ಕೂಡ ತಾನು ವಾಸಿಸುವ ಸುತ್ತ-ಮುತ್ತಲಿನ ಮಣ್ಣಿನ ವಾಸನೆ ಇರುವ ಪದಾರ್ಥಸೇವನೆ ಮಾತ್ರ ಉತ್ತಮ ಎಂದು ಆಗಿನವರು ತಿಳಿದಿದ್ದರು. ಈಗ ಸಂಪೂರ್ಣ ಬದಲಾಗಿದೆ. ನಮಗೆ ಬೇಕಾದ ಪದಾರ್ಥ ಅದೆಷ್ಟೊ ಸಾವಿರ ಕಿಲೊಮೀಟರ್ ದೂರದಿಂದ ಬರುತ್ತದೆ. ಅದರ ಪ್ಯಾಕಿಂಗ್,

ಸಾರಿಗೆ ಇತ್ಯಾದಿಗಳ ವೆಚ್ಚ ಕೂಡ ನಮ್ಮ ಮೇಲೆಯೆ. ಪ್ರತಿ ೧೦೦ ಕಿಲೋಮೀಟರ್ ಗೆ ನಮ್ಮ ದೇಶದಲ್ಲಿ ವಾಸ್ತುಶೈಲಿ, ಆಹಾರ, ಭಾಷೆ, ಉಡುಗೆ ಎಲ್ಲವೂ ಬದಲಾಗಿರುತ್ತಿದ್ದವು. ಅವರ ಉಡುಗೆ, ಭಾಷೆ ನೋಡಿ ಅವರು ಎಲ್ಲಿನವರು ಎಂದು ಹೇಳಬಹುದಿತ್ತು. ಈಗ ಎಲ್ಲರದೂ ಒಂದೆ ಭಾಷೆ(english) ಒಂದೆ ರೀತಿಯ ಬಟ್ಟೆ (T-shirt, Pant). ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಬಯಲುಸೀಮೆ, ಮಲೆನಾಡು ಎಂದು ಯಾವ ವ್ಯತ್ಯಾಸವೂ ಇಲ್ಲದೆ ಒಂದೇ ರೀತಿಯ ಕಟ್ಟಡಗಳು.

## ಆಶಿಷ್ ಗುಪ್ತಾ ಅವರ ಸೂಚನೆ:

ನಾವು ಎಲ್ಲವನ್ನೂ ಒಂದೇ ದೃಷ್ಟಿಯಿಂದ ನೋಡುತ್ತಿದ್ದೇವೆ. ಅದಕ್ಕೆ ಇನ್ನೊಂದು ಮುಖ ಅಥವಾ ನಿಜವಾದ ಮುಖ ಇರುತ್ತದೆ. ಅದನ್ನು ಕಾಣಬೇಕು. ನಮ್ಮ ಪಠ್ಯದಲ್ಲಿ ಅರ್ಥವ್ಯವಸ್ಥೆಯ ಬಗ್ಗೆ ಹೇಳಿದಂತೆ ನಮ್ಮ ಹಳ್ಳಿಗಳಲ್ಲಿ ಇಲ್ಲ. ಎಲ್ಲರಿಗೆ ಸಹಾಯ, ಅನುಕೂಲ ಎಂದು ಯಾವುದನ್ನು ಅರ್ಥಶಾಸ್ತ್ರ ಹೇಳುತ್ತದೆಯೋ ಅದು ನಮ್ಮ ಹಳ್ಳಿಗಳಲ್ಲಿ ಅನ್ವಯ ಆಗುವುದಿಲ್ಲ. ಕೇವಲ ಪಠ್ಯವನ್ನು ಓದಿ ಅರ್ಥಮಾಡಿಕೊಳ್ಳುವುದಕ್ಕಿಂತ ಸಮಾಜದ ಜೊತೆ ಬೆರೆತು ಅರ್ಥಮಾಡಿಕೊಳ್ಳಬೇಕು. ಇಲ್ಲಿ ನಡೆದ ಚಿಂತನೆಗಳು ನೀವು ಅರ್ಥ ಮಾಡಿಕೊಂಡಿರುವುದಕ್ಕಿಂತ ಭಿನ್ನವಾಗಿರ ಬಹುದು. ಆದರೆ ಈ ಮುಖವೂ ಇದೆ ಎನ್ನುವುದನ್ನು ತಿಳಿಯಿರಿ. ಹಾಗಂತ ಇದನ್ನು ಸತ್ಯ ಎಂದು ಕೂಡಲೆ ಒಪ್ಪಬೇಕಂತಿಲ್ಲ. ಮುಕ್ತಮನಸ್ಸಿನಿಂದ ವಿಚಾರ ಮಾಡಿನೋಡಿ.

## ದಿನಚರಿ

ದಿನದಲ್ಲಿ ನಾಲ್ಕು ಸತ್ರಗಳಿದ್ದವು.

- ೯.೩೦ - ೧೧.೦೦
- ೧೧.೩೦ - ೧.೦೦
- ೩.೦೦ - ೪.೩೦
- ೫.೩೦ - ೭.೦೦

ನಾವು ೯.೩೦ ಒಳಗೆ ನಮ್ಮ ಸ್ನಾನಾಹ್ನೀಕ ಉಪಾಹಾರ ಮುಗಿಸುತ್ತಿದ್ದೆವು. ಮಧ್ಯಾಹ್ನ ೧ ರಿಂದ ೩ ರ ಒಳಗೆ ಒಲೆ ಹಚ್ಚಿ, ಅಡುಗೆ ಮಾಡಿ, ತಿಂದು ೩ ಗಂಟೆಯ ಸಭೆಗೆ ಸಿದ್ಧರಿರುತ್ತಿದ್ದೆವು. ಸಂಜೆ ೫.೩೦ ಒಳಗೆ ಸಂಧ್ಯಾದಿ ಮುಗಿಸಿ ಸಭೆಯ ನಂತರ ಮತ್ತೆ ಅಡುಗೆ ಮಾಡಿ, ಊಟ ಮಾಡಿ ೯.೩೦ ಸುಮಾರಿಗೆ ಮಲಗುತ್ತಿದ್ದೆವು.

ಲೇಖನ ಮುಂದುವರೆಯುವುದು..........

ಇಷ್ಟು ಹೇಳಿದ್ದು, ಹೇಳದೆ ಉಳಿದದ್ದು ಬಹಳಷ್ಟಿವೆ. ಅನೇಕ ಅನುಭವಗಳ ಆಕರವನ್ನು ತಂದುಕೊಟ್ಟ ಈ ಯಾತ್ರೆಯನ್ನು ಆಯೋಜನೆ ಮಾಡಿದ ಪೂರ್ಣಪ್ರಮತಿಗೆ ಧನ್ಯವಾದಗಳು.

# ಜೀವಿಕಾ ಆಶ್ರಮ ಕಾರ್ಯಗಾರ

**ಶ್ರೀಕರ ಹೊಳ್ಳ**
ಪ್ರೌಢಶಾಲಾ ಅಧ್ಯಾಪಕರು

## ಜೀವಿಕಾ ಆಶ್ರಮದಲ್ಲಿ ಆಯೋಜಿಸಿದ್ದ
## **"ಭಾರತೀಯ ಅರ್ಥವ್ಯವಸ್ಥೆ 2.0 ಕಾರ್ಯಾಗಾರ"**
ಸ್ಥಳ: ಜಬ್ಬಲ್ ಪುರ ಜಿಲ್ಲೆಯ ಇಂದ್ರಾಣ ಗ್ರಾಮ, ಮಧ್ಯಪ್ರದೇಶ

ನಮಸ್ಕಾರ,

ವಿಂಧ್ಯ ಶ್ರೇಣಿಯ ತಪ್ಪಲಿನಲ್ಲಿರುವ ನರ್ಮದೆಯ ಉಪನದಿಯಾದ ಹಿರಣ್ ನದಿಯ ತಟದಲ್ಲಿರುವ ಮಧ್ಯಪ್ರದೇಶ ರಾಜ್ಯದ ಜಬ್ಬಲ್ ಪುರ ಜಿಲ್ಲೆಯಿಂದ ಸುಮಾರು 30Km ದೂರದಲ್ಲಿರುವ ಇಂದ್ರಾಣ ಗ್ರಾಮದ ಬಳಿ ಇರುವ ಜೀವಿಕಾ ಆಶ್ರಮಕ್ಕೆ ಭೇಟಿ ಮಾಡಿ ಅಲ್ಲಿ ಆಯೋಜಿಸಿದ್ದ 'ಭಾರತೀಯ ವ್ಯವಸ್ಥೆ 2.0' ಎನ್ನುವ ಕಾರ್ಯಾಗಾರದಲ್ಲಿ ಭಾಗವಹಿಸುವ ಸದವಕಾಶವನ್ನು ಪೂರ್ಣಪ್ರಮತಿಯು ನನಗೆ ಒದಗಿಸಿತು.

ದಿನಾಂಕ ೮.೧೧.೨೦೨೪ರ ಸಂಜೆ ಬೆಂಗಳೂರಿನ ಯಲಹಂಕ ರೈಲ್ವೆ ನಿಲ್ದಾಣದಿಂದ ಹೊರಟ ಇಬ್ಬರು ವಿದ್ಯಾರ್ಥಿಗಳನ್ನು ಒಳಗೊಂಡ ೭ ಜನರ ತಂಡ ಮೊದಲು ತಲುಪಿದ್ದು ತೆಲಂಗಾಣ ರಾಜ್ಯದ ಕಾಚಿಗುಡ ರೈಲ್ವೆ ನಿಲ್ದಾಣಕ್ಕೆ, ಅದೇ ಊರಿನಲ್ಲಿ ನಿತ್ಯ ಕರ್ಮಗಳು ಮುಗಿಸಿಕೊಂಡು ಅಲ್ಲಿಂದ ಜಬ್ಬಲ್ ಪುರದ ಕಡೆಗೆ ಹೊರಡಲು ತಯಾರಾದೆವು. ಆ ಸಮಯದಲ್ಲಿ ನಮಗೆ ಒಂದು ಆಘಾತವೇ ಕಾದಿತ್ತು. ನಾವು ಪ್ರಯಾಣಿಸಬೇಕಾದ ರೈಲು ೧೬ ಗಂಟೆಗಳು ತಡವಾಗಿದೆ ಎಂದು ತಿಳಿದಾಗ ನಮಗೆ ಮುಂದೆ ಏನು? ಎಂಬ ಚಿಂತೆ ಕಾಡತೊಡಗಿತು. ಇದೇ ಸಮಯದಲ್ಲಿ ನಮ್ಮಲ್ಲಿರುವ ಸಂಯಮ ಜಾಗೃತಗೊಂಡು "ಆದದ್ದೆಲ್ಲಾ ಒಳಿತೇ ಆಯಿತು" ಎಂಬ ದಾಸವಾಣಿಯಂತೆ, ಆ ಸನ್ನಿವೇಶ ನಮಗೆ ಕಿತ್ತಳೆ ನಾಡು ನಾಗಪುರವನ್ನು ವೀಕ್ಷಿಸುವ ಹಾಗೂ ಅಲ್ಲಿ ದೇವರ ಸಂಕೀರ್ತನೆ ನಡೆಸುವ ಸುಸಂದರ್ಭ ಒದಗಿಸಿತ್ತು.

ವಂದೇಭಾರತ್ ರೈಲಿನಲ್ಲಿ ನಾಗಪುರಕ್ಕೆ ಬಂದಿಳಿದ ನಾವು, ಅಲ್ಲಿಂದ ಬಸ್ಸಿನಲ್ಲಿ ಜಬ್ಬಲ್ ಪುರವನ್ನು ತಲುಪಿದೆವು. ದಿನಾಂಕ ೧೦.೧೧.೨೦೨೪ರ ಬೆಳಗಿನ ಜಾವದಲ್ಲಿ ಜಬ್ಬಲ್ ಪುರವನ್ನು ತಲುಪಿ ಅಲ್ಲಿಂದ ನೇರವಾಗಿ ನರ್ಮದಾ ನದಿಯ ದರ್ಶನ ಮಾಡಲು ಗ್ವಾರಿಘಾಟ್ ಕಡೆಗೆ ಹೊರಟೆವು. ಆಶೀರ್ವಾದ ಎಂಬ ವ್ಯಕ್ತಿಯ ಗಾಡಿಯಲ್ಲಿ ನಮ್ಮ ಪಯಣ ನರ್ಮದಾ ನದಿಯ ಕಡೆಗೆ ಹೊರಟಿತು.

ನದಿಯಲ್ಲಿ ಮಿಂದು ನಮ್ಮ ನಿತ್ಯ ಕರ್ಮಗಳನ್ನು ಮುಗಿಸಿದ ನಾವು ಅಲ್ಲಿಂದ ಜೀವಿಕಾ ಆಶ್ರಮದ ಕಡೆಗೆ ಹೊರಟೆವು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ರೈಲು ೧೬ ಗಂಟೆಗಳ ಕಾಲ ತಡವಾಗುತ್ತದೆ ಎಂದು ತಿಳಿದಾಗ ನಾವೆಲ್ಲರೂ ಸೇರಿ ಮಾಡಿದ ವ್ಯವಸ್ಥೆ ನಮ್ಮನ್ನು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಜಬ್ಬಲ್ ಪುರ ತಲುಪಿಸಿತು ಹಾಗೂ ನರ್ಮದಾ ನದಿಯಲ್ಲಿ ಕಾರ್ತಿಕ ಸ್ನಾನ ಮಾಡಲು ಅನುಕೂಲ ಮಾಡಿಕೊಟ್ಟಿತು.

ದಿನಾಂಕ ೧೦.೧೧.೨೦೨೪ರ ಮುಂಜಾನೆ ೮.೪೫ರ ಸಮಯದಲ್ಲಿ ಜೀವಿಕಾ ಆಶ್ರಮ ತಲುಪಿದ ನಾವು ಅಲ್ಲಿನ ಪರಿಸರ, ವ್ಯವಸ್ಥೆ ಹಾಗೂ ಆತಿಥ್ಯ ನೋಡಿ ಬೆರಗಾದೆವು. ವಿವಿಧ ಕುಶಲಕರ್ಮಿಗಳಿಗೆ ಸ್ಥಾನ ನೀಡಿರುವ ಜೀವಿಕಾ ಆಶ್ರಮದ ಸೃಷ್ಟಿಕರ್ತ ಶ್ರೀಯುತ ಆಶಿಷ್ ಗುಪ್ತಾರವರು. ವಿವಿಧ ಸ್ತರದ ಹುದ್ದೆಗಳಲ್ಲಿ ನಿರತವಾಗಿದ್ದ ಒಂದಾನೊಂದು ಸಮಯದಲ್ಲಿ ಆ ಹುದ್ದೆ ಮತ್ತು ಪದವಿಯನ್ನು ತ್ಯಜಿಸಿ, ಭಾರತದ ಏಳಿಗೆಗೆ ನಮ್ಮ ಗ್ರಾಮ ಮತ್ತು ಕುಶಲಕರ್ಮಿಗಳ ಪಾತ್ರ ಮಹತ್ವವಾದದ್ದು ಎಂದು ತಿಳಿದು ಇಂದ್ರಾಣ ಗ್ರಾಮದ ಬಳಿ ಜೀವಿಕಾ ಆಶ್ರಮವನ್ನು ಸ್ಥಾಪಿಸಿದರು. ಇಂತಹ ಸ್ಥಳದಲ್ಲಿ 'ಭಾರತೀಯ ಅರ್ಥ ವ್ಯವಸ್ಥೆ 2.0' ಎಂಬ ಕಾರ್ಯಗಾರ ನಡೆದಿದ್ದು ನಮ್ಮ ಕಲಿಕೆಗೆ ಹೆಚ್ಚು ಪುಷ್ಟಿ ನೀಡಿತು. 'ಭಾರತೀಯ ಅರ್ಥ ವ್ಯವಸ್ಥೆ 2.0' ಕಾರ್ಯಗಾರದ ಕಲಿಕೆಯ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

### ವಿಕಾಸ (development) ಎಂದರೆ ಏನು?

ವಿಕಾಸ ಎಂಬುದು ಕೆಲವರ ಆಸೆಗೆ ಬೇರೆಯವರ ಮೇಲೆ ಒತ್ತಾಯಪೂರ್ವಕವಾಗಿ ಹೇರುವಂತಹ ಒಂದು ಸನ್ನಿವೇಶ. ಇದನ್ನು 'Big Push Theory' ಎಂದು Paul Rosenstein-Rodan ರವರು ತಿಳಿಸಿದ್ದಾರೆ. ಒಂದು ದೇಶದ ಅಭಿವೃದ್ಧಿಯನ್ನು / ವಿಕಾಸವನ್ನು ಅಳೆಯಲು ಉಪಯೋಗಿಸುವ ಮಾಪನಗಳೆಂದರೆ:

- HDI (Human Development Index)
- GDP (Gross Domestic Product)
- Per Capita of Energy Consumption
- Per Capita Credit Growth

ಇವುಗಳಲ್ಲಿ ತಿಳಿಯುವ ಅಂಶವೆಂದರೆ ಪರಿಸರವನ್ನು ಹಾಳು ಮಾಡುವುದು ಅಭಿವೃದ್ಧಿಯ ಅಥವಾ ವಿಕಾಸವಾದದ ಮೂಲ ತತ್ವವಾಗಿದೆ.

ಅರ್ಥಶಾಸ್ತ್ರವನ್ನು ಆಂಗ್ಲ ಭಾಷೆಯಲ್ಲಿ Economics ಎಂದು ಹೇಳುತ್ತೇವೆ. Eco ಎಂಬುದು ಪರಿಸರಕ್ಕೆ ಇರುವ ಆಂಗ್ಲ ಪದ. ಆದರೆ ಇಂದಿನ Economics ನಲ್ಲಿ ಪರಿಸರ ಕಾಳಜಿ ಇರಲಿ ಅಥವಾ ಗಂಧವು ಇರುವುದಿಲ್ಲ. ಬದಲಾಗಿ ಪರಿಸರವನ್ನು ಹಾಳು ಗಿಡವನ್ನು ಬೇಕಾದ ಮಾರ್ಗಗಳನ್ನು ಕಲಿಯುತ್ತೇವೆ.

ಈ ಮುಂಚಿತವಾಗಿ ತಿಳಿಸಿದಂತೆ 'Big

Push Theroy' ಎಲ್ಲಿ ಕಾರ್ಖಾನೆಗಳು ತಾವು ಉತ್ಪಾದಿಸಿದ ಉತ್ಪನ್ನಗಳನ್ನು ಜನರ ಮೇಲೆ ಹೇರುವ ಒಂದು ಮಾರ್ಗವಾಗಿದೆ. ಅದನ್ನು ಸಮರ್ಥಿಸುವ ರೀತಿಯಲ್ಲಿ ಭಾರತ ಅರ್ಥಶಾಸ್ತ್ರಜ್ಞರಾದ ನೋಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ಥ್ಯ ಸೇನ್ ರವರು ಇದನ್ನು ' Enhancement of Capabilities' ಅಂದರೆ ಸಾಮರ್ಥ್ಯವನ್ನು ಹೆಚ್ಚಳ ಮಾಡುವುದು ಎಂದು ತಿಳಿಸಿದ್ದಾರೆ. ಇವರೆಲ್ಲರೂ ಪರಿಸರದಲ್ಲಿ ಆಗುತ್ತಿರುವ ಆಗುಹೋಗುಗಳ ಬಗ್ಗೆ ಚಿಂತಿಸುತ್ತಿರುವುದೇ ಇಲ್ಲ.

ಇದರ ಮುಂದುವರೆದ ಭಾಗವಾಗಿ ಹೊಸದಾದ ಒಂದು ಚಿಂತನೆ ಪ್ರಪಂಚದ ಅರ್ಥ ವ್ಯವಸ್ಥೆಯಲ್ಲಿ ಹರಿದಾಡತೊಡಗಿತು. ಅದೇನೆಂದರೆ 'ಹೊಸ ಉದಾರೀಕರಣ ನೀತಿ' ಅಥವಾ 'ನವ ಉದಾರೀಕರಣ'. ಇದನ್ನು ಪ್ರಪಂಚಕ್ಕೆ ಪರಿಚಯಿಸಿದವರು Milton Friedman ಎಂಬ ಅಮೇರಿಕಾದ ಅರ್ಥಶಾಸ್ತ್ರಜ್ಞ. ಈ ಸೂತ್ರಕ್ಕೆ ಅವರಿಗೆ ನೊಬೆಲ್ ಪ್ರಶಸ್ತಿ ನೀಡಿದ್ದಲ್ಲದೆ ಅವರನ್ನು 'ನವ ಉದಾರೀಕರಣದ ಪಿತಾಮಹ' ಎಂದು ಸಂಬೋಧಿಸಿದರು. ಈ ನೀತಿಯಲ್ಲಿ ಪ್ರಪಂಚದಲ್ಲಿರುವ ದೇಶಗಳು ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಹೊಂದುತ್ತದೆ. ಇದೇ ನವ ಉದಾರಿಕರಣದ ಹೆಸರಲ್ಲಿ ಅಮೇರಿಕಾದಂತಹ ಅಭಿವೃದ್ಧಿ ಹೊಂದಿದ ದೇಶಗಳು ಪ್ರಸ್ತುತ ನವ ವಸಹಾತುಶಾಹಿಯನ್ನು ಹುಟ್ಟು ಹಾಕಿದೆ.

ಅಮೇರಿಕಾದ ನವ ವಸಹಾತುಶಾಹಿ ಯನ್ನು ಉತ್ತೇಜಿಸಲು ವಿಶ್ವ ವಾಣಿಜ್ಯ ಸಂಸ್ಥೆ (WTO) ಅನ್ನು ಸ್ಥಾಪನೆ ಮಾಡಲಾಗಿ ಇದು ಆಫ್ರಿಕಾದ ಹಾಗೂ ಏಷ್ಯಾದ ಅಭಿವೃದ್ಧಿ ಹೊಂದದ ಹಾಗೂ ಹೊಂದುತ್ತಿರುವ ದೇಶಗಳಲ್ಲಿ ವಾಣಿಜ್ಯ ಉತ್ತೇಜನ ಮಾಡುವ ನೆಪದಲ್ಲಿ ತಮ್ಮ ದೇಶದ ಉತ್ಪನ್ನಗಳ ಮೂಲಕ ಅವರ ಮಾರುಕಟ್ಟೆಗಳನ್ನು ತಲುಪಿ ಅಲ್ಲಿ ಆ ಉತ್ಪನ್ನಗಳಿಗೆ ಬೇಡಿಕೆ ಸೃಷ್ಟಿಸುವ ಮೂಲಕ ಅವರನ್ನು ಸಾಲಗಾರರನ್ನಾಗಿ ಮಾಡುತ್ತಿದೆ. ಇದೆ ನವ ವಸಹಾತುಶಾಹಿಯ ಮರ್ಮ. ಒಂದಾನೊಂದು ಕಾಲದಲ್ಲಿ ಪ್ರಪಂಚದ ಒಟ್ಟಾರೆ ಆರ್ಥಿಕತೆಯ ೨೭% ಪ್ರತಿಶತ ಭಾಗ ಹೊಂದಿದ್ದ ಭಾರತ ಇಂದು ಬೇರೆ ದೇಶದ ಸಾಲದ ಹೊರೆಯಲ್ಲಿ ಸಿಲುಕಿಕೊಂಡಿದೆ. ಇದೇ ನವ ವಸಹಾತುಶಾಹಿಯ ಪ್ರಭಾವ. ೧೯೯೧ರಲ್ಲಿ ಅಡುಗೆ ಎಣ್ಣೆಯಲ್ಲಿ ಸ್ವಯಂ ರಫ್ತುದಾರನಾಗಿದ್ದ ಭಾರತ ದೇಶ ಇಂದು ಅದನ್ನು ಆಮದು ಮಾಡಿಕೊಳ್ಳುತ್ತಿರುವ ಅತಿ ದೊಡ್ಡ ದೇಶವಾಗಿದೆ.

ವಿಶ್ವಬ್ಯಾಂಕ್ ನ ಮುಖ್ಯ ಆರ್ಥಿಕತಜ್ಞ Larry summers ಎಂಬಾತ ಸಹಿ ಮಾಡಿದ Lant Pritchett ಎಂಬ ವ್ಯಕ್ತಿ ತಯಾರು ಮಾಡಿದ 'Summers memo' ಎಂಬ ದಾಖಲೆಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ವಿಷಪೂರಿತ ತ್ಯಾಜ್ಯಗಳನ್ನು ಅಭಿವೃದ್ಧಿ ಹೊಂದದ ಹಾಗೂ ಹೊಂದುತ್ತಿರುವ ವಿಶ್ವದ ಮೂರನೇ ದರ್ಜೆ ದೇಶಗಳಲ್ಲಿ ರಾಶಿ (Dumping) ಹಾಕಬೇಕು ಎಂದು ದಾಖಲೆಪೂರಕವಾಗಿ ಹೇಳುತ್ತಾರೆ. ಇದು ನಮಗೆ, ಅಭಿವೃದ್ಧಿ ಹೊಂದಿದ

ದೇಶಗಳಿಗೆ ಇರುವಂತಹ ಮನಸ್ಥಿತಿಯನ್ನು ತೋರ್ಪಡಿಸುತ್ತದೆ.

ಇದಕ್ಕೆ ಉತ್ತರ ಎಲ್ಲಿ? ಎಂದು ಹುಡುಕಲು ಹೋರಟಾಗ ನಮಗೆ ಸಿಗುವ ಏಕೈಕ ಜಾಗ ಭಾರತ. ಇಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರಿಸಿ ಸಿಕ್ಕಿದೆ. ಹಾಗಾದರೆ ಆ ಪ್ರಶ್ನೆಗಳು ಯಾವುದು?

- Mass Production v/s Production of Masses
- Agriculture v/s Agri Business
- Big Technology v/s Small Technology.

ಭಾರತದಲ್ಲಿ ಬಜಾರ್ ವ್ಯವಸ್ಥೆ ಇತ್ತು ಆದರೆ ಇಂದು ಅದನ್ನು ಮಾರುಕಟ್ಟೆ ವ್ಯವಸ್ಥೆ ಆವರಿಸಿಕೊಂಡಿದೆ. ಹಾಗಾದರೆ ಇವೆರಡರ ನಡುವೆ ಇರುವ ವ್ಯತ್ಯಾಸವೇನು?

ಬಜಾರ್ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿಯು ತನ್ನ ಬಳಕೆಯ ನಂತರ ಉಳಿಕೆ ವಸ್ತುಗಳನ್ನು ಇತರೆಯವರಿಗೆ ಮಾರುತಿದ್ದ. ಇಲ್ಲಿ ಗ್ರಾಹಕರಿಗೆ ನೇರವಾಗಿ ಉತ್ಪಾದಕರಿಂದಲೇ ವಸ್ತುಗಳು ಸಿಗುತ್ತಿತ್ತು.

ಮಾರುಕಟ್ಟೆ ವ್ಯವಸ್ಥೆಯಲ್ಲಿ ಉತ್ಪಾದಕರಲ್ಲು ಕೇವಲ ಮಾರಾಟ ಮಾಡುವ ದೃಷ್ಟಿಯಿಂದಲೇ ಉತ್ಪಾದನೆ ಮಾಡುತ್ತಾರೆ ಹಾಗೂ ಇಲ್ಲಿ ಅನೇಕ ಮಧ್ಯವರ್ತಿಗಳಿಂದ ಕೂಡಿದ್ದು ಇದು ಜನರನ್ನು ಕೊಳ್ಳುಬಾಕತನಕ್ಕೆ ದೂಡುತ್ತದೆ.

## ಹಾಗಾದರೆ ಭಾರತದಲ್ಲಿ ಏನಾಗುತ್ತಿತ್ತು?

ರವೀಂದ್ರ ಶರ್ಮಾ ಗುರೂಜಿ ಅವರು ಹೇಳುವಂತೆ ಭಾರತದಲ್ಲಿ ಒಂದು ಗ್ರಾಮವೆಂದರೆ ಅದರಲ್ಲಿ ೧೮ ಜಾತಿಗಳು ಇರಲೇಬೇಕು. ಇದನ್ನೇ ಮುಂದುವರೆಸಿ ಒಟ್ಟಾರೆ ೩೬೦ ಜಾತಿ ಮತ್ತು ಉಪಜಾತಿಗಳು ಇರಬೇಕು ಎಂದು ಹೇಳುತ್ತಾರೆ. ಇಲ್ಲಿ ಜಾತಿ ಎಂದರೇನು? ಭಾರತದಲ್ಲಿ ಜಾತಿ ಎಂಬುದು ಅವರು ಮಾಡುವ ಕರ್ಮ ಆಧಾರಿತವಾಗಿತ್ತು. ಒಂದು ಹಳ್ಳಿ ಅಥವಾ ಗ್ರಾಮ ನಡೆಯಲು ಬೇಕಾದ ವ್ಯವಸ್ಥೆ ಮಾಡುವುದು ಈ ಜಾತಿಗಳ ಕಾರ್ಯವಾಗಿತ್ತು. ಅದೆಂದರೆ ಕೆಲವರು ಮಣ್ಣಿನ ಕೆಲಸ ಮಾಡಿದರೆ ಅವರದು ಕುಂಬಾರರ ಜಾತಿ, ಮರದ ಕೆಲಸ ಮಾಡುವವರು ಬಡಗಿ ಜಾತಿ ಹೀಗೆ ಅನೇಕ ಜಾತಿಗಳು ವಿಂಗಡಣೆಗೊಂಡಿದ್ದವು. ಈ ಜಾತಿಯವರಿಗೆ / ವೃತ್ತಿಯವರಿಗೆ ಅವರದೇ ಆದ ಗ್ರಾಹಕರ ಗುಂಪು ಇತ್ತು. ಇಂತಹ ಗುಂಪುಗಳಿಗೆ ಬೇರೆ ಬೇರೆ ವ್ಯಕ್ತಿಗಳು ಅಂದರೆ ಒಂದೇ ಜಾತಿಯ ಇತರ ವ್ಯಕ್ತಿಗಳು ಯಾವುದೇ ರೀತಿಯ ವ್ಯಾಪಾರ ಮಾಡುತ್ತಿರಲಿಲ್ಲ. ಹೀಗೆ ಭಾರತದಲ್ಲಿ ನಿರುದ್ಯೋಗದ ಸಮಸ್ಯೆಯು ಇರಲಿಲ್ಲ ಏಕೆಂದರೆ ಒಂದು ಕುಟುಂಬ ಒಂದು ಕಾಲದಲ್ಲಿ ನಿರತವಾಗುತ್ತಿತ್ತು ಹಾಗೂ ಆದಾಯವನ್ನು ಇಡಿ ಕುಟುಂಬ ಹಂಚಿಕೊಳ್ಳುತ್ತಿತ್ತು.

ಭಾರತವು "ಉದ್ಯೋಗ ಪ್ರಧಾನ ದೇಶವಾಗಿತ್ತು". ಇಲ್ಲಿ ದವಸ ಮತ್ತು ಶಿಕ್ಷಣವನ್ನು ಮಾರುವುದು ಪಾಪ ಎಂದೇ

ಪರಿಗಣಿಸಲಾಗಿತ್ತು ಈ ವಿಷಯವನ್ನು ಹೇಳಲು ಕಾರಣವೇನೆಂದರೆ ನಾವು ನಮ್ಮ ಶಾಲಾವಸ್ಥೆಯಿಂದ ಇಂದಿನವರೆಗೂ ಕೇಳುತ್ತಾ ಬಂದಿರುವುದು ಭಾರತವು 'ಕೃಷಿ ಪ್ರಧಾನ' ದೇಶವೆಂದು. ಆದರೆ ನಮಗೆ ತಿಳಿಯದ ಮಾಹಿತಿ ಎಂದರೆ ಸುಮಾರು ೨೦೦ ರಿಂದ ೨೫೦ ವರ್ಷಗಳ ಕೆಳಗೆ ಕೃಷಿಯು ಭಾರತದ ಒಟ್ಟಾರೆ ಉತ್ಪಾದನೆಯ ಕೇವಲ ಒಂದು ಭಾಗವಾಗಿತ್ತು. ಭಾರತ ಅತಿ ಹೆಚ್ಚು ಉತ್ಪಾದನೆ ಕುಶಲಕರ್ಮಿಗಳಿಂದ ಹಾಗೂ ಕುಲಕಸಬುಗಳಿಂದ ಬರುತ್ತಿತ್ತು. ೧೯೩೦ರ ಒಂದು ಅಧ್ಯಯನದ ಪ್ರಕಾರ J C Kumarappa ನವರು ಹೇಳುವ ಪ್ರಕಾರ ದೇಶದ ಶೇಕಡ ೫೦ ಭಾಗ ಕೃಷಿಯೇತರ ಚಟುವಟಿಕೆಗಳಿಂದ ಉತ್ಪಾದನೆಗೊಳ್ಳುತ್ತಿತ್ತು. ಬೆಳ್ಳಿಯ ಕೆಲಸಗಳು, ಕಂಚಿನ ಕೆಲಸಗಳು, ಅತಿ ಮುಖ್ಯವಾಗಿ ಕಲ್ಲಿನಿಂದ ಕಬ್ಬಿಣ ತೆಗೆಯುವ ಕೆಲಸ ಮಾಡುವ ವ್ಯಕ್ತಿಗಳು ಪ್ರಮುಖವಾಗಿದ್ದರು. ಅದರಲ್ಲೂ ಅಘಾರಿಯ ಸಮಾಜವು ಭೂಮಿಯನ್ನು ಅಗೆಯದೆ ಮೇಲ್ಪದರದಲ್ಲಿ ಸಿಗುವ ಕಲ್ಲಿನಿಂದ ಕಬ್ಬಿಣವನ್ನು ತೆಗೆಯುತ್ತಿದ್ದರು ಎಂದರೆ ನಂಬಲು ಅಸಾಧ್ಯ. ಇಂತಹ ಜನಾಂಗವು ಇಂದು ತಮ್ಮ ಕುಲಕಸುಬು ಮಾಡಿದರೆ ಅವರನ್ನು ಅಪರಾಧಿಗಳೆಂದು ಪರಿಗಣಿಸುತ್ತಾರೆ ಎಂದರೆ ನಮ್ಮ ದೇಶದ ಸ್ಥಿತಿ ಯಾವ ಮಟ್ಟಿಗೆ ಇಳಿದಿದೆ ಎಂದು ನಾವೇ ಊಹಿಸಬೇಕು.

ಇದನ್ನೇ ರವೀಂದ್ರ ಶರ್ಮ ಗುರೂಜಿಯವರು ಸಣ್ಣ ತಂತ್ರಜ್ಞಾನ ಎಂದು ಕರೆಯುತ್ತಾರೆ. ಅವರು ಹೇಳುವಂತೆ ದೊಡ್ಡ ತಂತ್ರಜ್ಞಾನಗಳು ಬಂದಾಗಿನಿಂದ ಭಾರತ ಸ್ಥಳೀಯ ಹಾಗೂ ಸ್ವಂತ ವ್ಯಕ್ತಿಗಳು ಅಥವಾ ತಂತ್ರಜ್ಞಾನಗಳು ಮರೆಯಾಗಿವೆ. ಸಣ್ಣ ತಂತ್ರಜ್ಞಾನ ಎಂದರೆ ಕುಶಲಕರ್ಮಿಗಳ ತಂತ್ರಜ್ಞಾನ. ಅದನ್ನು ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಹುದು. ಈ ತಂತ್ರಜ್ಞಾನವನ್ನು ಸಮುದಾಯಗಳೇ ನಡೆಸುತ್ತವೆ. ಇಲ್ಲಿನ ಉತ್ಪಾದನೆಯಲ್ಲಿ ವ್ಯಕ್ತಿಯ ವೈಯಕ್ತಿಕ ಆಯ್ಕೆಗೆ ಮಾನ್ಯತೆ ಇರುತ್ತದೆ ಆದರೆ ದೊಡ್ಡ ತಂತ್ರಜ್ಞಾನಗಳು ಮಾರುಕಟ್ಟೆಯನ್ನು ತಮ್ಮ ನಿಯಂತ್ರಣದಲ್ಲಿ ಹಿಡಿದುಕೊಂಡು ಇರುತ್ತದೆ. ಅದಕ್ಕೆ ಹಣಕಾಸಿನ ಹೂಡಿಕೆಯು ಜಾಸ್ತಿ ಹಾಗೂ ಮಾರುಕಟ್ಟೆಯನ್ನು ಜನರ ಬಳಿ ತಂದು ಅವರಲ್ಲಿ ಕೊಳ್ಳುಬಾಕುತನ ಹೆಚ್ಚಿಸುತ್ತದೆ. ಇಲ್ಲಿ ವೈಯಕ್ತಿಕ ಆಯ್ಕೆಗೆ ಯಾವುದೇ ಅವಕಾಶ ಇರುವುದಿಲ್ಲ. ಹೀಗೆ ಭಾರತದ ಅರ್ಥ ವ್ಯವಸ್ಥೆಯನ್ನು ಪರಕೀಯರ ದಾಳಿಗಳು ಹಾಳುಗೆಡವಿದೆ.

ಇದರೊಂದಿಗೆ ಇರುವ ಇನ್ನೊಂದು ವಿಶೇಷ ವಿಷಯವೆಂದರೆ ಒಂದು ಗ್ರಾಮವು ೪ ಸ್ತಂಭಗಳ ಆಧಾರದಲ್ಲಿ ನಿಂತಿದೆ. ಅವೆಂದರೆ ವಿಜ್ಞಾನ (ವಿಶೇಷ ಜ್ಞಾನ), ಕಲೆ, ಅಧ್ಯಾತ್ಮ ಮತ್ತು ಸಾಮಾಜಿಕ ಅರ್ಥ ವ್ಯವಸ್ಥೆ.

ಜೀವಿಕಾ ಆಶ್ರಮದಲ್ಲಿ ಕಲಿತ ವಿಷಯಗಳು ಅನೇಕವಿದ್ದು ಅದನ್ನು ಪಟ್ಟಿ ಮಾಡುವುದು ಅಸಾಧ್ಯವಾದ ಮಾತು ಅಲ್ಲಿ ನಡೆದ ಒಂದು ಸನ್ನಿವೇಶವನ್ನು ನೆನಪಿಸಿಕೊಳ್ಳದಿದ್ದರೆ ಈ ಯಾತ್ರೆ ಅಪೂರ್ಣವಾಗುತ್ತದೆ. ಅದೇನೆಂದರೆ ತುಳಸಿ ವಿವಾಹದ ದಿನ ನಮ್ಮ ಕಡೆಯಿಂದ

ನಡೆದ ತುಳಸಿ ಸಂಕೀರ್ತನೆ ತದನಂತರ ಅಲ್ಲಿಯೇ ಹತ್ತಿರ ಇರುವ ಬುಡಕಟ್ಟು ಜನಾಂಗವಾದ ಅಹಿರ್ ಸಮಾಜದವರು ತುಳಸಿ ವಿವಾಹಕ್ಕಾಗಿ ಮಾಡಿದ ಸಾಂಪ್ರದಾಯಿಕ ನೃತ್ಯ. ಈ ಸಮಾಜವು ತಮ್ಮನ್ನು ಶ್ರೀ ಕೃಷ್ಣನ ಯಾದವ ಕುಲದವರು ಎಂದು ಗುರುತಿಸುವುದು ವಿಶೇಷ.

ಇಷ್ಟೆಲ್ಲ ಅನುಭವಗಳನ್ನು ಪಡೆದು ದಿನಾಂಕ ೧೭.೧೧.೨೦೨೪ರಂದು ತೆಲಂಗಾಣ ರಾಜ್ಯದ ಅದಿಲಾಬಾದ್ ನಗರದಲ್ಲಿರುವ ರವೀಂದ್ರ ಶರ್ಮ ಗುರೂಜಿಯವರ ಕಲಾಶ್ರಮವನ್ನು ವೀಕ್ಷಿಸಿ ಅಲ್ಲಿ ಕಲೆಗಳು ಹಾಗೂ ಕುಶಲಕರ್ಮಿಗಳ ಪೋಷಣೆಗೆ ಕೈಗೊಂಡಿರುವ ವ್ಯವಸ್ಥೆಗಳನ್ನು ಕಂಡು ಮನದುಂಬಿ ಬಂತು. ರವೀಂದ್ರ ಶರ್ಮ ಗುರೂಜಿಯವರೇ ಸ್ವತಃ ಅನೇಕ ಕಲೆಗಳನ್ನು ಕಲಿತು ಅದನ್ನು ಪ್ರಯೋಗಿಸುತ್ತಿದ್ದರು ಎಂದು ತಿಳಿದು ಸಂತೋಷವಾಯಿತು. ಅದೇ ದಿನ ರಾತ್ರಿ ಅದಿಲಾಬಾದ್ ನಿಂದ ಬಸ್ಸಿನಲ್ಲಿ ಹೊರಟ ನಾವು ದಿನಾಂಕ ೧೮.೧೧.೨೦೨೪ರ ಮಧ್ಯಾಹ್ನ ೧೨.೩೦ರ ಸಮಯದಲ್ಲಿ ಬೆಂಗಳೂರನ್ನು ತಲುಪಿದೆವು. ಇಲ್ಲಿಗೆ ನಮ್ಮ ಜೀವಿಕಾ ಆಶ್ರಮದ ಕಲಿಕಾ ಯಾತ್ರೆಯು ಸಂಪನ್ನವಾಯಿತು.

ಧನ್ಯವಾದಗಳು

## "ಕುಂಕುಮ ಸಂಸ್ಕೃತಿ"

# ಲಲಾಟೇ ಕುಂಕುಮಂ ಚೈವ ಸದಾ ಲಕ್ಷ್ಮೀ ನಿವಾಸಕಮ್

**ಸುಲಕ್ಷಣಾ**
ಸಂಸ್ಕಾರ - ಸಂಸ್ಕೃತಿ ಪ್ರತಿನಿಧಿ

ಶ್ರೀಕೃಷ್ಣಾಯನಮ:

ನಮ್ಮ ಭಾರತೀಯ ಭವ್ಯ ಪರಂಪರೆಯಲ್ಲಿ ಕುಂಕುಮಕ್ಕೆ ಅತಿ ಪ್ರಧಾನವಾದ ಸ್ಥಾನವನ್ನು ನೀಡಿದ್ದಾರೆ. ಅರಿಶಿನ - ಕುಂಕುಮವಿಲ್ಲದೆ ಯಾವುದೇ ಮಂಗಳಕಾರ್ಯಗಳು ನಮ್ಮಲ್ಲಿ ನಡೆಯುವುದಿಲ್ಲ.

ನಿರಂತರವಾಗಿ ದೈವೀಶಕ್ತಿಯನ್ನು ಮತ್ತು ದೈವೀಭಾವನೆಯನ್ನು ಹೊರಸೂಸುವ ಗುಣ ಕುಂಕುಮದಲ್ಲಿದೆ. ಕುಂಕುಮ ಕೆಂಪು ಬಣ್ಣದಲ್ಲಿರುತ್ತದೆ ಆದಕಾರಣ ದುರ್ಗೆ ಹಾಗೂ ಪಾರ್ವತಿಯರ ಪೂರ್ಣ ಸನ್ನಿಧಾನವಿರುತ್ತದೆ.

ಭಾರತೀಯ ಮಹಿಳೆಯರು ತಮ್ಮ ಅಲಂಕಾರದಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿರುತ್ತಾರೆ. ನಮ್ಮ ಆಭರಣಗಳು, ವೇಷಭೂಷಣಗಳು, ಆಹಾರಗಳು ಎಲ್ಲವೂ ವಿಶ್ವಪ್ರಸಿದ್ಧಿಯನ್ನು ಪಡೆದಿವೆ. ದೃಢ ಪರಂಪರೆಯನ್ನು ಮೈಗೂಡಿಸಿಕೊಂಡ ನಮ್ಮ ಭಾರತ ಪುಣ್ಯ ಭೂಮಿಯೆನಿಸಿದೆ.

### ಪುರಾಣೋಲ್ಲೇಖ (ದೈವಿಕ)

ಹರಿದ್ರಾ ಕುಂಕುಮಂ ಚೈವ ಸಿಂಧೂರಂ ಕಜ್ಜಲಂ ತಥಾ।

ಕೂರ್ಪಾಸಕಂ ಚ ತಾಂಬೂಲಂ ಮಾಂಗಲ್ಯಾಭರಣಂ ಶುಭಮ್ ॥

ಕೇಶ ಸಂಸ್ಕಾರ ಕಬರೀ ಕರಕರ್ಣ ವಿಭೂಷಣಮ್ ।

ಭರ್ತುರಾಯುಷ್ಯಮಿಚ್ಛಂತೀ ದೂರಯೇನ್ನ ಪತಿವ್ರತಾ ॥ - ಸ್ಕಾಂದ ಪುರಾಣ

ಕೆನ್ನೆಗೆ ಅರಿಶಿನ, ಹಣೆಗೆ ಕುಂಕುಮ,ಬೈತಲೆಗೆ ಸಿಂಧೂರ, ಕಣ್ಣಿಗೆ ಕಾಡಿಗೆ, ಎದೆ, ಬೆನ್ನು ಮುಚ್ಚುವಂತಹ ಕುಪ್ಪಸ, ಕೊರಳಲ್ಲಿ ಮಂಗಳಸೂತ್ರ, ಜಡೆ ಹೆಣೆದು ತುರುಬು ಕಟ್ಟುವುದು, ಕಿವಿಗಳಲ್ಲಿ ಓಲೆ, ಮೂಗಿನಲ್ಲಿ ಮೂಗುತಿ, ಕೈಗಳಲ್ಲಿ ಬಳೆ, ಇವುಗಳನ್ನು, ಗಂಡನ ಆಯುಷ್ಯವನ್ನು ಬಯಸುವ ಹೆಣ್ಣು ಮಕ್ಕಳು ಇವುಗಳನ್ನು ದೂರುವುದಿಲ್ಲ.

### ದಾಸಸಾಹಿತ್ಯ

ದಾಸವರೇಣ್ಯರಾದ ಶ್ರೀ ಪುರಂದರದಾಸರು ಈ ರೀತಿಯಾಗಿ ಹೇಳಿದ್ದಾರೆ.

"ಮುತ್ತೈದೆತನವೆಂಬ ಮುಖದಲಿ ಕುಂಕುಮದ ಕಸ್ತೂರಿಯ ಬೊಟ್ಟನಿಡೆ ನಿನ್ನ ಫಣೆಗೆ ಕಸ್ತೂರಿಯ ಬೊಟ್ಟನಿಡೆ"

ಮದುವೆ ಮಾಡಿಕೊಂಡು ಗಂಡನ ಮನೆಗೆ ಹೊರಟ ನವ ವಧುವಿಗೆ ತಂದೆ-ತಾಯಿಯರು ಆಶೀರ್ವದಿಸಿ ಉಪದೇಶಿಸುವ ಮಾತಿದು. ಮುತ್ತೈದೆ ಎಂದರೆ ಐದು ಮುತ್ತುಗಳನ್ನು ಹೊಂದಿದವಳು ಎಂದು. ಆ

ಐದು ಮುತ್ತುಗಳು ಹೀಗಿವೆ .

- ಕುಂಕುಮ
- ಕಾಡಿಗೆ
- ಕರಿಮಣಿ
- ಕುಪ್ಪಸ
- ಕಂಕಣ

ಒಟ್ಟಾರೆ ಎಲ್ಲ ಮಂಗಲಕರ ದ್ರವ್ಯಗಳಲ್ಲಿ ಕುಂಕುಮದ ಪಾತ್ರ ಹಿರಿದಾಗಿದೆ.

"ಕಸ್ತೂರಿತಿಲಕವ ಶಿಸ್ತಾಗಿ ಫಣಿಯೊಳಟ್ಟು ಮಸ್ತಕದಲಿ ಪರವಸ್ತು ತೋರಿದ ಕೃಷ್ಣ "

"ಸಣ್ಣ ನಾಮವ ಬರೆದಿಟ್ಟು ಬಣ್ಣಿಸಿ ಕಸ್ತೂರಿ ಕಂಕುಮವಿಟ್ಟು "

"ಎದ್ದು ಮುಖ ತೊಳೆ ಏಳು ತಿದ್ದು ಕಸ್ತೂರಿ ತಿಲಕ"

"ರಾಜಬೀದಿಯೊಳಗಿಂದ ಕಸ್ತೂರಿರಂಗ ತೇಜಿಯೇರಿ ಮೆರೆದು ಬಂದ"

ಈ ರೀತಿಯಾಗಿ ಭಗವಂತನು ತನ್ನ ಹಣೆಯಲ್ಲಿ ತಿಲಕ ಧಾರಣೆ ಮಾಡಿದ್ದಾನೆ. ಇದನ್ನೇ ದಾಸರಾಯರು ಲಕ್ಷ್ಮಿ ದೇವಿ ಧರಿಸಿದ್ದನ್ನು ಹಾಡಿ ಹೊಗಳುತ್ತಾರೆ. "ಕಸ್ತೂರಿ ತಿಲಕ ಧರಿಸಿದಳಾದೇವಿ ಸರ್ವತ್ರ ವಧೂವರರ ಸಲಹಲಿ" (ಮದುವೆಯ ಮನೆಯಲ್ಲಿ ವಧು-ವರರಿಗೆ ಲಕ್ಷ್ಮೀನಾರಾಯಣರ ಆಶೀರ್ವಾದವಿರಲಿ ಎಂದು ಈ ಪದ್ಯವನ್ನು ಹೇಳುವ ಪ್ರತೀತಿ ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ಪ್ರಚಲಿತದಲ್ಲಿದೆ) ಪ್ರಾಚೀನ ಕಾಲದಿಂದ ಕುಂಕುಮ ಧಾರಣೆಯ ಸಮಯದಲ್ಲಿ ಹೇಳುವ ಒಂದು ಶ್ಲೋಕ ಈ ರೀತಿಯಾಗಿದೆ .

ಊರ್ಧ್ವ ಪುಂಡ್ರಂ ಲಲಾಟೇ ತು
ಭರ್ತೃರಾಯುಷ್ಯವರ್ಧಕಂ

ಲಲಾಟೇ ಕುಂಕುಮಂ ಚೈವ ಸದಾ ಲಕ್ಷ್ಮೀ
ನಿವಾಸಕಮ್

ಪತಿಯ ಆರೋಗ್ಯ ಆಯುಷ್ಯದ ಸೂಚನೆಯೂ ಈ ಕುಂಕುಮದಲ್ಲಿ ಅಡಗಿದೆ.

ತಿಲಕ ಎಂದರೆ ತಿಲದಂತೆ ಇರುವ ಉದ್ದ ಆಕೃತಿ. ಭಗವಂತನ ತಿಲಕದಂತೆ ಇಂದು ನಮಗೆ ಕಸ್ತೂರಿತಿಲಕ ದೊರೆಯದು . ಕುಂಕುಮವೆಂದರೆ ಕೆಂಪು. ಶತಮಾನಗಳ ಹಿಂದೆ ಕಾಶ್ಮೀರದ ಕೇಸರಿಯಿಂದ ಕುಂಕುಮವನ್ನು(ತಿಲಕಧಾರಣೆಯನ್ನು ಮಾಡುತ್ತಿದ್ದರೆಂದು ತಿಳಿದು ಬರುತ್ತದೆ) ಕ್ರಮೇಣ ಕುಂಕುಮವನ್ನು ಮಂಗಳ ದ್ರವ್ಯವಾದ ಅರಿಶಿಣದ ಕೊಂಬಿನಿಂದ ಸಿದ್ಧಪಡಿಸಲು ಆರಂಭವಾಯಿತು.

ಪ್ರಾಕೃತಿಕವಾಗಿ ಕುಂಕುಮವನ್ನು ತಯಾರಿ ಮಾಡುವುದಲ್ಲದೆ ಅದರ ಕಾರಣವೂ ಸೂಕ್ತವಾಗಿದೆ .

## ಕುಂಕುಮಕ್ಕೆ ಬಳಸುವ ಪದಾರ್ಥಗಳು ಈ ರೀತಿಯಾಗಿವೆ

- ಅರಿಶಿನ ಕೊಂಬು - ರೋಗ ನಿವಾರಕ
- ನಿಂಬೆಹಣ್ಣು - ಸೌಂದರ್ಯ ವರ್ಧಕ
- ಬಿಳಿಗಾರ - ಚರ್ಮ ರಕ್ಷಕ, ಕಣ್ಣು ದೃಷ್ಟಿ ಪರಿಹಾರಕ, (ದೈವೀಶಕ್ತಿ) ಈಗಲೂ ತಮಿಳುನಾಡಿನ ಎಷ್ಟೋ ಮನೆಗಳಲ್ಲಿ ಈ ಬಿಳಿಗಾರವನ್ನು ಮನೆಯ ಬಾಗಿಲಿನ ಮುಂಭಾಗದಲ್ಲಿ ದುಷ್ಟ ಶಕ್ತಿಯ ತಡೆಗಾಗಿ

ಕಟ್ಟಿರುತ್ತಾರೆ.

- ಪಟಕ - ಶುದ್ಧಿಕಾರಕ
- ಶುದ್ಧ ಹಸುವಿನ ತುಪ್ಪ - ಆರೋಗ್ಯದಾಯಕ

## ಕುಂಕುಮದ ಮಹತ್ವ

- ಭಕ್ತಿ
- ಲಕ್ಷ್ಮೀ ನಿವಾಸ
- ಸೌಂದರ್ಯ
- ಆರೋಗ್ಯ
- ಆಧ್ಯಾತ್ಮಿಕ ಬೆಳವಣಿಗೆ
- ಮನೆಯಲ್ಲಿ ಸ್ಥಿರ ಸಂಪತ್ತು
- ಪತಿಯ ಆಯುಷ್ಯದ ಅಭಿವೃದ್ಧಿ

ನಮ್ಮ ಹಲವಾರು ಗ್ರಂಥಗಳಲ್ಲಿ ಕುಂಕುಮದ ಬಗ್ಗೆ ಉಲ್ಲೇಖಿಸಿದ್ದಾರೆ.

- ರಾಜನಿಘಂಟು: -ಕುಂಕುಮ ಹಚ್ಚಿಕೊಳ್ಳುವುದರಿಂದ ಶ್ವಾಸರೋಗ, ವಾತರೋಗ, ಕಫ,( ಕಂಠ) ಥೈರಾಯ್ಡ್ ರೋಗ ತಲೆನೋವು ವಿಷ ಬಾಧೆಗಳು ನಾಶವಾಗುವುವು, ಅಲ್ಲದೆ ಮುಖ ತೇಜ ಹಾಗೂ ಶರೀರ ಕಾಂತಿಯ ಅಭಿವೃದ್ಧಿ ಆಗುವುದು.

- ರಾಜವಲ್ಲಭ - ಪಚನ ಶಕ್ತಿ ಬೆಳೆಯುವುದು, ಅಲರ್ಜಿಯನ್ನು ದೂರ ಮಾಡಿ ಮುಖ ಕಾಂತಿಯನ್ನು ಹೆಚ್ಚಿಸುವುದು.

- ಭಾವ ಪ್ರಕಾಶ - ತಲೆ ಶೂಲೆ ಮುಖದಲ್ಲಿಯ ಗಾಯ ಹುಣ್ಣು ಮುಖದ ಮೇಲೆ ಗುಳ್ಳೆಗಳು ಆಗದಂತೆ ನೋಡಿಕೊಳ್ಳುವುದು ಅಲ್ಲದೆ ಸಂತಾನ ಸಾಮರ್ಥ್ಯ ಹಾಗೂ ಮುಖ ಕಾಂತಿಗಳನ್ನು ಹೆಚ್ಚಿಸುತ್ತದೆ.

- ರತ್ನಾವಲಿ - ಸಕಲ ಚರ್ಮ ರೋಗಗಳನ್ನು ಕುಂಕುಮವು ನಿವಾರಿಸುವುದು ಎಂದು ಹೇಳಿದೆ ಇದೆಲ್ಲ ವಿವರಣೆಗೆ ಶಬ್ದ ಕಲ್ಪದ್ರುಮ ಗ್ರಂಥವು ಆಧಾರವಾಗಿದೆ.

ಆಧುನಿಕ ವಿಜ್ಞಾನದ ಪ್ರಕಾರ ತಲೆ ಬುರುಡೆಯ ಹಣೆಯ ಮೇಲೆ ಒಂದು ಉದ್ದದ ಸೀಳು ಇದೆ ಅದಕ್ಕೆ ಸೈನಸ್ ಎಂದು ಕರೆಯುತ್ತಾರೆ. ಚಳಿ ಅಥವಾ ರೋಗಾಣುಗಳ ಸೋಂಕು ಈ ಸೀಳಿನ ಮುಖಾಂತರವೇ ಆಗಿ ತಲೆಶೂಲೆ ನೆಗಡಿ ಇತ್ಯಾದಿ ಪೀಡೆಗಳು ಆಗುವುವು. ಕುಂಕುಮ ಧಾರಣೆಯಿಂದ ಅಥವಾ ನಾಮದ ಧಾರಣೆಯಿಂದ ಈ ಸೋಂಕುಗಳನ್ನು ತಡೆಯಲು ಸಾಧ್ಯವಿದೆ.

ಯುಗಾನುಕೂಲಕ್ಕೆ ತಕ್ಕಂತೆ ಈ ವಿಷಯವನ್ನು ಹೀಗೆ ಚಿಂತನೆ ಮಾಡಬಹುದು

ಒಂದು ಹುಡುಗಿಯ ಮುಖದಲ್ಲಿ ಅಥವಾ ಮಹಿಳೆಯ ಮುಖದಲ್ಲಿ ದೈವಿ ಸ್ವರೂಪವಾದ ಕುಂಕುಮವೊಂದು ಲಕ್ಷಣವಾಗಿ ಕಾಣುವಂತೆ ಇದ್ದಲ್ಲಿ ಆ ಮಗುವಿನ ಬಗ್ಗೆ ಆಗಲಿ ಆ ಮಹಿಳೆಯ ಬಗ್ಗೆ ಆಗಲಿ ಕೆಟ್ಟ ಯೋಚನೆ ಮಾಡಲು ಮನಸ್ಸು ಹಿಂದೇಟು ಹಾಕುತ್ತದೆ.

ಈಗ ನಾವು ಧಾರಣೆ ಮಾಡುತ್ತಿರುವ ಬಿಂದಿ ಎಂಬುದು ಕುಂಕುಮವಲ್ಲ. ಕುಂಕುಮದ ಸ್ಥಾನದಲ್ಲಿ ಬಂದು ಕುಳಿತಿರುವ ಒಂದು ಪದಾರ್ಥ ಅಷ್ಟೇ? ಉದ್ದೇಶ ಮೂಲವನ್ನು ನಾಶಪಡಿಸುವುದು. ಈಗ ಸಿದ್ಧವಾಗುತ್ತಿರುವ ಕುಂಕುಮದ ತಯಾರಿಯಲ್ಲಿ ಹಾನಿಕಾರಕ ರಾಸಾಯನಿಕದ ಸೇರ್ಪಡೆಯಾಗುತ್ತಿರುವುದು ಎಲ್ಲರ



ಗಮನಕ್ಕೂ ಅನುಭವಕ್ಕೂ ಬಂದಿರಲು ಸಾಧ್ಯವಿದೆ.

ಬೆರಳೆಣಿಕೆಯಷ್ಟು ಭಾಗಗಳಲ್ಲಿ ಬಿಟ್ಟರೆ ಉಳಿದಂತೆ ಎಲ್ಲೆಡೆ ಸಿಗುತ್ತಿರುವ ಕುಂಕುಮ ಪದಾರ್ಥವು ಕೇವಲ ಕುಂಕುಮದ ಬಣ್ಣದಲ್ಲಿ ಕಾಣುತ್ತಿರುವ ಒಂದು ಪುಡಿ ಅಷ್ಟೇ ಆಗಿದೆ. ಹಾಗಾಗಿಯೇ ಅದನ್ನು ಧಾರಣೆ ಮಾಡಿದವರ ಚರ್ಮದ ಸೋಂಕು ಹೆಚ್ಚುತ್ತಾ ಹೋಗಿ ಅವರೆಲ್ಲರೂ ಇಂದು ಬಿಂದಿ ಇಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದನ್ನು ನಾವಿಂದು ಕಾಣಬಹುದು.

ಹಿಂದೂ ಧರ್ಮದ ಧಾರ್ಮಿಕ ಪಾತ್ರ ವಹಿಸುವ ಅನೇಕ ಪದಾರ್ಥಗಳನ್ನು ನಾವಿಂದು ಸಿದ್ಧಪಡಿಸುತ್ತಿಲ್ಲ. ಅನ್ಯಧರ್ಮೀಯರಿಂದ ಇವೆಲ್ಲವೂ ಸಿದ್ಧವಾಗಿ ಮಾರುಕಟ್ಟೆಗೆ ಬರುತ್ತಿವೆ. ಬಾಲಿವುಡ್ ಸಿನಿಮಾಗಳಿಂದ ಪ್ರೇರಿತರಾಗಿ ಅನೇಕ ಯುವ ಪಡೆಗಳು ತಮ್ಮ ಧರ್ಮವನ್ನು ಬದಿಗೆ ತಳ್ಳಿರುವುದು ಸಿನಿಮಾ ನಟಿಯರಂತೆ ತಮ್ಮನ್ನು ತಾವು ಗುರುತಿಸಿಕೊಳ್ಳಲು ಪ್ರಯತ್ನಪಡುವರು.

ಇದೆಲ್ಲದರ ಹಿನ್ನೆಲೆಯನ್ನು ಅರಿತು ನಮ್ಮನ್ನು ನಾವಿಂದು ಸರಿ ಪಡಿಸಿಕೊಳ್ಳಬೇಕಿದೆ, ನಮ್ಮ ಸನಾತನ ಭಾರತದ ಪರಂಪರೆಯನ್ನು ಧರ್ಮವನ್ನು ಉಳಿಸಿಕೊಳ್ಳಬೇಕಿದೆ.

ಭಾರತ್ ಮಾತಾ ಕೀ ಜೈ

ವಂದೇ ಭಾರತ ಮಾತರಮ್

# ಕನ್ನಡ ಹಬ್ಬದ ವರದಿ ೨೪- ೨೫

## ಕರ್ನಾಟಕ ರಾಜ್ಯೋತ್ಸವ

**ಶ್ರೀಮತಿ ಭಾಗ್ಯಶ್ರೀ**
ವಿಷಯ ಪ್ರಶಿಕ್ಷಣ ಪ್ರತಿನಿಧಿ



"ಕನ್ನಡವೆನೆ ಕುಣಿದಾಡುವುದೆನ್ನದೆ ಕನ್ನಡವೆನೆ ಕಿವಿ ನಿಮಿರುವುದು" ಇಂತಾಗಲು ಕನ್ನಡ ಮನದ ಭಾಷೆಯಾಗಬೇಕು. ಭಾಷೆಯ ಕುರಿತು ಒಲವು ಮೂಡಬೇಕು. ಒಲವು ಮೂಡಬೇಕಾದಲ್ಲಿ ಭಾಷೆಯ ವಿವಿಧ ಸೊಗಸುಗಳ ಪರಿಚಯವಾಗಬೇಕು. ಸೊಗಸು ಪರಿಚಯ ಆಗಬೇಕಾದಲ್ಲಿ ಕಿರಿಯ ವಯಸ್ಸಿನಿಂದಲೇ ಭಾಷಾ ಚಟುವಟಿಕೆಗಳಲ್ಲಿ ಮಕ್ಕಳು ತೊಡಗುವಂತಾಗಬೇಕು. ಕೊನೆಗೊಮ್ಮೆ ಮಾತೃಭಾಷೆಗೆ ಸೇವಾ ರೂಪದಲ್ಲಿ ಸಾಹಿತಿ, ಲೇಖಕರು, ಕವಿಗಳನ್ನು ಕೊಡುಗೆಯಾಗಿ ಕೊಡಬೇಕೆಂಬುದು ಪೂರ್ಣಪ್ರಮತಿಯ ಕನಸು.

ಪೂರ್ಣಪ್ರಮತಿಯ ಈ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿಯೇ ಪ್ರತೀ ವರ್ಷದಂತೆ ಈ ವರ್ಷವೂ ಕನ್ನಡ ಹಬ್ಬದ ತಯಾರಿಯು ಯೋಜನೆಯ ರೂಪದಲ್ಲಿ ಅಕ್ಟೋಬರ್ ೧೪ ನೇ ತಾರೀಖಿನಿಂದ ಪ್ರಾರಂಭವಾಯಿತು. ಈ ಬಾರಿಯ ವಿಶೇಷತೆಯೆಂದರೆ ಅಂತರ ಶಾಲಾ ಸ್ಪರ್ಧೆಗಳು. ಪ್ರತೀ ಬಾರಿ ನಮ್ಮೊಳಗೇ ನಡೆಯುತ್ತಿದ್ದ ಚಟುವಟಿಕೆಗಳು ಈ ಬಾರಿ ಒಂದು ಹೆಜ್ಜೆ ಮುಂದಿಟ್ಟು ಮಕ್ಕಳ ಕಲಿಕೆಗೆ ವೇದಿಕೆ ಕಲ್ಪಿಸಲು ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಒಟ್ಟಾರೆ ೧೫ ಸ್ಪರ್ಧೆಗಳಿಗೆ ಮಕ್ಕಳನ್ನು ಸಿದ್ಧಪಡಿಸಿ, ಹೊರಗಿನ ೬ ಶಾಲೆಗಳನ್ನು ಆಹ್ವಾನಿಸಲಾಯಿತು. ಅಂಜಿಕೆಯ ಮೊದಲ ಹೆಜ್ಜೆಗೆ ಸಿಕ್ಕಿದ್ದು ಸ್ಫೂರ್ತಿದಾಯಕ ಪ್ರತಿಕ್ರಿಯೆ. ಮಕ್ಕಳ ಕೈಯ್ಯಿಂದಲೇ ಆಹ್ವಾನ ಪತ್ರಿಕೆ ಸಿದ್ಧಪಡಿಸಿ, ಮಕ್ಕಳಿಂದಲೇ ಆಮಂತ್ರಣ ಕೊಡಿಸಿದ್ದನ್ನು ಆಯಾ ಶಾಲೆಯ ಸಿಬ್ಬಂದಿಗಳು ಬಹುವಾಗಿ ಪ್ರಶಂಸಿಸಿದರು. ಬರುವುದಾಗಿಯೂ ಹೇಳಿದರು. ಒಟ್ಟಾರೆ ಆರು ಶಾಲೆಗಳಿಗೆ ನಾವು ಅಹ್ವಾನವಿತ್ತೆವು. ಅನಿವಾರ್ಯ ಕಾರಣಗಳಿಂದ ಕಡೆಯಲ್ಲಿ ಅರುಂಧತಿ ಗುರುಕುಲ ಹಾಗೂ ವಿಜಯಭಾರತಿ ಈ ಎರಡು ಶಾಲೆಯ ಮಾಕ್ಕಳು ಮಾತ್ರ ಭಾಗವಹಿಸಿ ಕಾರ್ಯಕ್ರಮಕ್ಕೆ ಕಳೆಯನ್ನು ತಂದುಕೊಟ್ಟರು.

ಅಂತರ ಶಾಲಾ ಸ್ಪರ್ಧೆಗೆ ಮಕ್ಕಳ ಆಯ್ಕೆಯ ಪ್ರಕ್ರಿಯೆಯೂ ಕಠಿಣವಾಗಿತ್ತು. ಪರಿಸರವಾರು - ನದಿವಾರು- ಕ್ಷೇತ್ರವಾರು ಈ ಮೂರು ಸುತ್ತುಗಳಲ್ಲಿ ಆಯ್ಕೆಯಾದ ಇಬ್ಬರು ಮಕ್ಕಳಿಗೆ ಮಾತ್ರ ಅಂತರ ಶಾಲಾ ಸ್ಪರ್ಧೆಗೆ ಭಾಗವಹಿಸಲು ಅವಕಾಶವಿತ್ತು. ಹಾಗಾಗಿ ಮಕ್ಕಳು ತಾವು ಆಯ್ಕೆಯಾಗಬೇಕೆಂಬ ಛಲದಲ್ಲಿ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದರು.

ಪೂರ್ಣಪ್ರಮತಿಗೆ ಹೊಸಬರಾಗಿದ್ದರು. ಪೂರ್ಣಪ್ರಮತಿಯ ಕಲಿಕಾ ಪ್ರಕ್ರಿಯೆಯನ್ನು ನೋಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನಮ್ಮ ಯೋಜನೆಯಂತೆ ಸಮಾರೋಪವು ದಿನಾಂಕ ೨೩/೧೧/೨೪ ರ ಶನಿವಾರದಂದು ನಡೆಯಿತು. ಬೆಳಗ್ಗೆ ೯:೦೦ - ೧೧:೦೦ ರ ವರೆಗೆ ಸ್ಪರ್ಧೆಗಳು ನಂತರದಲ್ಲಿ ಸಮಾರೋಪ ಕಾರ್ಯಕ್ರಮ ಪ್ರಾರಂಭವಾಯಿತು. ಸಭೆಗೆ



ಸಾರ್ವತ್ರಿಕವೆಂಬಂತೆ ಕೆಲವು ಮಕ್ಕಳು ನೀರಸ ಪ್ರತಿಕ್ರಿಯೆ, ಕೆಲವರು ಮಧ್ಯಮ ಹಾಗೂ ಕೆಲವರು ಉತ್ಸುಕತೆಯಿಂದ ಭಾಗವಹಿಸಿದರು. ಆದರೆ ಕಡೆಯಲ್ಲಿ ಭಾಗವಸಲು ಉತ್ಸಾಹ ತೋರದ ಮಕ್ಕಳಿಗೂ ಭಾಗವಹಿಸಬೇಕಿತ್ತೆಂಬ ನಿಟ್ಟಿನಲ್ಲಿ  ಸ್ಪರ್ಧೆಗಳು ಜರುಗಿದ್ದು ಸಂತಸದ ವಿಷಯ. ಪೂರ್ಣಪ್ರಮತೀಯರೆಲ್ಲರ ಸಹಕಾರದಿಂದ ಕಾರ್ಯಕ್ರಮ ಕಳೆಕಟ್ಟಿತು.

ಸ್ಪರ್ಧೆಗೆ ಆಗಮಿಸಿದ ನಿರ್ಣಾಯಕರಲ್ಲಿ ಮೂವರನ್ನು ಹೊರತುಪಡಿಸಿ ಉಳಿದೆಲ್ಲರೂ

ಗೌರವಾನ್ವಿತ ಅಭ್ಯಾಗತರಾಗಿ ಹಿರಿಯ ರಂಗಭೂಮಿ ಕಲಾವಿದರಾದ, ದಕ್ಷಿಣ ಪ್ರಾತದ ಸಂಸ್ಕಾರ ಭಾರತಿಯ ಉಪಾಧ್ಯಕ್ಷರಾದ ಶ್ರೀಯುತ ಬಾಬು ಹಿರಣ್ಣಯ್ಯನವರು ಹಾಗೂ ಶತಕೃತಿ ಲೇಖಕರೂ,ಆಧ್ಯಾತ್ಮ ಚಿಂತಕರೂ, ಉಪನ್ಯಾಸಕರೂ, ಸಾಹಿತಿಗಳೂ ಆದ ಶ್ರೀಯುತ ಬೇಲೂರು ರಾಮಸ್ವಾಮಿಯವರು ಆಗಮಿಸಿದ್ದು ನಮ್ಮೆಲ್ಲರ ಭಾಗ್ಯವೇ ಆಗಿತ್ತು.

ಹಿಂದೆಗುರು ಮುಂದೆ ಗುರಿಯನ್ನು ಇರಿಸಿಕೊಂಡು ನಮ್ಮ ನಾಡಿನಲ್ಲಿರುವ

ನಮ್ಮದೇ ಆದ ಸತ್ವವನ್ನು ಅರಿಯುವವರು ನಾವಾಗಬೇಕೆಂಬ ಬಾಬು ಹಿರಣ್ಣಯ್ಯನವರ ಮಾತು ಎಲ್ಲರ ಮನತಟ್ಟುವಂತಿದ್ದರೆ, ನಮ್ಮ ಕೆಲಸ, ಕರ್ತವ್ಯಗಳನ್ನು ಮತ್ತೊಬ್ಬರಿಂದ ಹೇಳಿಸಿಕೊಳ್ಳದೇ ಪ್ರತಿನಿತ್ಯ ಆತ್ಮಾವಲೋಕನ ಮಾಡಿಕೊಳ್ಳುತ್ತಾ, ಸಮಯ ಪರಿಪಾಲನೆಯಂತಹ ಮುಖ್ಯ ವಿಚಾರಗಳನ್ನು ಅಳವಡಿಸಿಕೊಳ್ಳುತ್ತಾ ಭಗವದ್ಗೀತೆಯು ನಮಗಿತ್ತ ಮುಖ್ಯ ಪಾಠವನ್ನು ಮನವರಿಕೆ ಮಾಡಿಕೊಳ್ಳುತ್ತಾ ಸಾಗಬೇಕು. ಆಗಲೇ ಜೀವನ ಸಾರ್ಥಕವೆಂಬ ಬೇಲೂರು ರಾಮಮೂರ್ತಿಯವರ ಮಾತು ಯುವಪೀಳಿಗೆಗೆ ಕಣ್ತೆರೆಸುವಂತಿತ್ತು.

ಮಕ್ಕಳ ಕಲಿಕಾ ಪ್ರದರ್ಶನದೊಂದಿಗೆ ಈ ಬಾರಿಯ ಮತ್ತೊಂದು ವಿಶೇಷವೆಂದರೆ ಮಕ್ಕಳ ಬರವಣಿಗೆಯ ಪುಸ್ತಕ ಬಿಡುಗಡೆ. "ಪ್ರಮತಿ ಕಸ್ತೂರಿ" ಎಂಬ ಶೀರ್ಷಿಕೆಯ ಅಡಿಯಲ್ಲಿ ಈ ವರ್ಷದ ಇನಿಜೇನು ಎಂಬ ನಾಮಾಂಕಿತ  ಮಕ್ಕಳ ಲೇಖನ, ಕವನಗಳು, ಪದಬಂಧಗಳ ಮಿಶ್ರಿತ ಹೊತ್ತಿಗೆ ಗೌರವಾನ್ವಿತ ಅಭ್ಯಾಗತರಿಂದ ಬಿಡುಗಡೆಯಾಗಿದ್ದು, ಮಕ್ಕಳ ಪರಿಶ್ರಮಕ್ಕೆ ಪ್ರೋತ್ಸಾಹ ನೀಡುವಂತಿತ್ತು.

ಅಂತರಶಾಲಾ ಸ್ಪರ್ಧೆ ಎಂಬುವ ಮೊದಲ ದಾಪುಗಾಲಿಡುವಾಗ ಹಲವು ಕಡೆ ಎಡವಿದ್ದೇವೆ, ಮತ್ತೆ ಎದ್ದು ನಿಲ್ಲುವ ಪ್ರಯತ್ನ ಮಾಡಿದ್ದೇವೆ. ಈ ಬಾರಿಯ ತಪ್ಪುಗಳನ್ನು ಮುಂದಿನ ದಿನಗಳಲ್ಲಿ ಪುನರಾವಾರ್ತನೆ ಮಾಡದೇ ತಿದ್ದಿಕೊಂಡು ಮತ್ತೊಂದು ಹೆಜ್ಜೆಯನ್ನು ಭದ್ರವಾಗಿ ಮುಂದಿಡುವ ಸಂಕಲ್ಪವನ್ನು ಪೂರ್ಣಪ್ರಮತೀಯರೆಲ್ಲರ ಸಹಕಾರದಿಂದ ಸಂಕಲ್ಪಗೈದ ಸುಂದರ ಘಳಿಗೆಯೇ ಕನ್ನಡ ಹಬ್ಬವಾಗಿತ್ತು ಎಂದು ಹೇಳಬಹುದಾಗಿದೆ.



# ಆನಂದವನ ಗುರುಕುಲ ಭೇಟಿ

**ರಾಘವ**
ನಿರ್ವಹಣಾ ತಂಡದ ಸದಸ್ಯ
ಹಾಗೂ ಕಲಾ ಶಿಕ್ಷಕ

ದಿನಾಂಕ 21 ಹಾಗೂ 22 ನವೆಂಬರ್ 2024 ಈ ದಿನಗಳಂದು ನಾನು ಪೂರ್ಣಪ್ರಮತಿ ಆನಂದವನ ಗುರುಕುಲಕ್ಕೆ ಭೇಟಿಕೊಟ್ಟಿದ್ದೆನು. ಎರಡು ಉದ್ದೇಶಗಳಿದ್ದವು. ಮೊದಲನೆಯದ್ದು ನಾನು ಗುರುಕುಲದಲ್ಲಿ ಮಕ್ಕಳ ದಿನಚರಿ ಮತ್ತು ಜೀವನವನ್ನು ಹತ್ತಿರದಿಂದ ಗಮನಿಸುವುದು ಹಾಗೂ ಎರಡನೆಯದು ಗುರುಕುಲಕ್ಕೆ ಭೇಟಿಕೊಡಲಿದ್ದ ಮಾರ್ಕಂಡೇಯ ಪರಿಸರದ ಮಕ್ಕಳ ಸಂರಕ್ಷಣೆ  ಮತ್ತು ಕಾಳಜಿ ತೆಗೆದುಕೊಳ್ಳುವುದು.

ಮೊದಲು ನಾವು ಮಾಗಡಿ ಪಟ್ಟಣಕ್ಕೆ ಹೋದೆವು. ಅಲ್ಲಿ ರೇಷಿಮೆ ಬಟ್ಟೆ ನೇಯುವ ವಿದ್ಯುತ್ ಮಗ್ಗಗಳನ್ನು ನೋಡಿದೆವು ಮತ್ತು ಅಲ್ಲಿ ಕೆಲಸಮಾಡುವ ಕಾರ್ಮಿಕರು ಮತ್ತು ಆ ಉದ್ಯಮವನ್ನು ನಡೆಸುವ ಮಾಲೀಕರೊಂದಿಗೆ ಮಾತನಾಡಿದೆವು.

### ನಾವು ನೋಡಿದ್ದು :

- ವಿದ್ಯುತ್ತಿನಿಂದ ನಡೆಯುವ ಯಂತ್ರಗಳಿಂದ ರೇಷಿಮೆ ಎಳೆಗಳನ್ನು ದಾರವಾಗಿ ಪರಿವರ್ತಿಸುವುದು.
- ತಯಾರಾದ ದಾರಗಳನ್ನು ಕೊಳವೆಗಳಿಗೆ ಸುತ್ತುವುದು.
- ವಿದ್ಯುತ್ ಮತ್ತು ವಿದ್ಯುನ್ಮಾನ ಮಗ್ಗಗಳಲ್ಲಿ ರೇಷಿಮೆ ಬಟ್ಟೆಗಳನ್ನು ನೇಯುವುದು.
- ನೇಯ್ದ ರೇಷ್ಮೆ ಸೀರೆಗಳು

### ನನ್ನ ಗಮನಕ್ಕೆ ಬಂದಿದ್ದು :

ರೇಷ್ಮೆ ಸೀರೆ ನೇಯ್ಗೆಗೆ ವಿದ್ಯುತ್ ಚಾಲಿತ ಯಂತ್ರಗಳು ಮತ್ತು ವಿದ್ಯುನ್ಮಾನ ತಂತ್ರಜ್ಞಾನದ ಬಳಕೆ ಮಾಡುತ್ತಿರುವುದರ ಪರಿಣಾಮಗಳನ್ನು ಗಮನಿಸಿದೆ. ಅಲ್ಲಿ ಬೆರಳೆಣಿಕೆಯಷ್ಟು ಕೆಲಸಗಾರರು ಇದ್ದಾರೆ. ಅವರೂ ಕೂಡ ಹೆಚ್ಚಾಗಿ ಸುಪರ್‌ವಿಜನ್ ಮತ್ತು ಏನಾದರೂ ತೊಂದರೆಗಳು ಬಂದಲ್ಲಿ ಅದನ್ನು ಸರಿಪಡಿಸುವುದು ಇಷ್ಟನ್ನೇ ಮಾಡುತ್ತಿದ್ದರು. ಯಂತ್ರಗಳೇ ಬಹುಪಾಲಿನ ಕೆಲಸ ಮಾಡುತ್ತಿವೆ. ಹತ್ತಾರು ಜನರಿಗೆ ಕೆಲಸ ಕೊಟ್ಟಿದ್ದ ಉದ್ಯಮ ಇಂದು ಬೆರಳೆಣಿಕೆಯಷ್ಟು ಜನರಿನ್ನಿಟ್ಟುಕೊಂಡು ನಡೆಯುತ್ತಿದೆ. ಅದರರ್ಥ ಯಂತ್ರಗಳು ಬಹಳಷ್ಟು ಜನರ ಉದ್ಯೋಗ ಕಸಿದುಕೊಂಡಿವೆ. ಪಾರಂಪರಿಕ ನೇಕಾರಿಕೆಗೆ ಕುತ್ತು ಬಂದಿದೆ. ಅಲ್ಲಿ ಈಗ ಕೆಲಸಮಾಡುತ್ತಿರುವ ಜನರೂ ಕೂಡ ನೇಕಾರಿಕೆಯಲ್ಲಿ ನುರಿತವರಲ್ಲ (ಕುಶಲಕರ್ಮಿಗಳಲ್ಲ) ಕೇವಲ ಯಂತ್ರಗಳನ್ನು ಆಪರೇಟ್ ಮಾಡುವ ಕಾರ್ಮಿಕರು ಅಷ್ಟೇ ಅನಿಸಿತು.

ವಿದ್ಯುತ್ ಚಾಲಿತ ಯಂತ್ರಗಳು ಹಾಗೂ ಮಗ್ಗಗಳು ಇರುವಲ್ಲಿ ವಿಪರೀತ ಎನ್ನಿಸುವಷ್ಟು ಶಬ್ದಮಾಲಿನ್ಯವಿರುತ್ತದೆ. ಅನಿವಾರ್ಯವಾಗಿ

ಅದನ್ನು ಸಹಿಸಿಕೊಂಡೇ ಕಾರ್ಮಿಕರು ಅಲ್ಲಿ ಕೆಲಸ ಮಾಡಬೇಕಾಗುತ್ತದೆ.

ರೇಷ್ಮೆ ಸೀರೆಗಳ ಉತ್ಪಾದನೆ ನಿಂತಿಲ್ಲ ಎನ್ನುವುದೊಂದೇ ಸಮಾಧಾನದ ಸಂಗತಿ. ಅದನ್ನು ಬಿಟ್ಟರೆ ಕೈಗಳಿಂದ ಸುಂದರವಾದ ಕಲಾಕುಸುರಿಗಳಿಂದ ಕೂಡಿದ ರೇಷ್ಮೆ ಬಟ್ಟೆ ನೇಯ್ಗೆಯ ಪಾರಂಪರಿಕ ಕೌಶಲ್ಯ ಅಥವಾ ಕಲೆ ಅಲ್ಲಿ ಇರಲಿಲ್ಲ ಎಂಬುದು ಎದ್ದು ಕಾಣುತ್ತಿತ್ತು.

## ಆನಂದವನ ಗುರುಕುಲದಲ್ಲಿ ನಾವು

ಪ್ರಕೃತಿಯ ಮಡಿಲಲ್ಲಿ ಮೈದಳೆಯುತ್ತಿರುವ ಗುರುಕುಲ. ಇನ್ನೂ ಕಟ್ಟಡಗಳ ಕೆಲಸ ಮುಗಿದಿಲ್ಲ, ನಡೆಯುತ್ತಿದೆ. ಮುಂಜಾನೆ ಎದ್ದು ನಾವು ಟ್ರೆಕ್ಕಿಂಗ್‌ಗೆ ಹೋಗಿದ್ದು ಅವಿಸ್ಮರಣೀಯ ಅನುಭವ ಕೊಟ್ಟಿತು. ಗುರುಕುಲದ ಮಗ್ಗುಲಲ್ಲೇ ಕೃಷಿ ಜಮೀನುಗಳಿವೆ. ಅವುಗಳನ್ನು ದಾಟಿಕೊಂಡು ಸ್ವಲ್ಪ ಮುಂದೆ ಹೋದರೆ ಕಾಡು ಪ್ರಾರಂಭವಾಗುತ್ತದೆ. ಅಲ್ಲಿನ ಕಾಡಿನಲ್ಲಿ ಮನುಷ್ಯನ ಹಸ್ತಕ್ಷೇಪ, ಓಡಾಟ ಕಡಿಮೆಯಿದೆ ಎನ್ನುವುದು ಕಾಣುತ್ತಿತ್ತು. ಹೀಗಾಗಿ ಅಲ್ಲಿ ಮರಗಳು, ಪೊದೆಗಳು, ಸಣ್ಣ ಸಸ್ಯಗಳು ಹುಲುಸಾಗಿ ಬೆಳೆದಿವೆ. ಪ್ರಕೃತಿಯಲ್ಲಿ ಸಹಜವಾಗಿ ಬೆಳೆದ ಅಲ್ಲಿನ ಒಂದು ಜಾತಿಯ ಕಿರಿದಾದ ಕಪ್ಪುಬಣ್ಣದ ಹಣ್ಣು ನಮ್ಮನ್ನು ಆಕರ್ಷಿಸಿತು. ಹುಳಿ ಮತ್ತು ಸಿಹಿಯ ಮಿಶ್ರಣ ಆ ಹಣ್ಣಿನ ಸೇವನೆ ಸಂತೋಷಕೊಟ್ಟಿತು.

ಗುರುಕುಲದ ಬಗ್ಗೆ ಹೇಳುವುದು ಇನ್ನೂ ಇದೆ. ಅದನ್ನು ಮುಂದಿನ ಸಂಚಿಕೆಯಲ್ಲಿ ಬರೆಯುತ್ತೇನೆ.



# ಗೋಪಿನಾಥಾಚಾರ್ಯ ಗಲಿಗಲಿ ಯವರೊಂದಿಗೆ

**ಯಶಸ್ವಿನಿ**
ಪ್ರೌಢಶಾಲಾ ಅಧ್ಯಾಪಕರು

ಪೂರ್ಣಪ್ರಮತಿಯ ಮಕ್ಕಳು ಸಾಧಕರೊಂದಿಗೆ ಜ್ಞಾನವನ್ನು ಪಡೆಯಲು ಜ್ಞಾನದ ದಾಹವನ್ನು ಇಂಗಿಸಿಕೊಳ್ಳಲು ಗೋಪಿನಾಥ ಆಚಾರ್ಯ ಗಲಿಗಲಿ ಅವರನ್ನು ಸ್ವಾಗತಿಸಿದೆವು.

ನಮ್ಮ ಮುಂದೆ ಖುರ್ಚಿಯ ಮೇಲೆ ಕುಳಿತು ಸರಳವಾಗಿ ಕಾಣುವ ವ್ಯಕ್ತಿ ಸಂಸ್ಕೃತ ಸುಭಾಷಿತವನ್ನು ಹೇಳಿ ತಮ್ಮ ಮಾತುಗಳನ್ನು ಆಂಗ್ಲಭಾಷೆಯಲ್ಲಿ ಶುರು ಮಾಡಿದ್ದು ನಮಗೆಲ್ಲ ಕಣ್ಣರಳಿಸುವಂತಾಯಿತು. ಅವರು ಸ್ಪಷ್ಟವಾಗಿ ಹೇಳಿದ್ದು ಆಂಗ್ಲಭಾಷೆ ಕಲಿಯುವುದು ತಪ್ಪಲ್ಲ. ಆದರೆ ನಮ್ಮ ಭಾಷೆಯನ್ನು ಮರೆಯುವ ಅವಶ್ಯಕತೆ ಇಲ್ಲ ಎಂದು. ಇದನ್ನು ಕೇಳಿ ಮಕ್ಕಳೆಲ್ಲ ತಲೆ ಹೌದು ಎಂಬಂತೆ ಆಡಿಸಿದರು. ಇದು ಆಧುನಿಕತೆಯ ಮುಖವಾಡ ಹಾಕಿರುವ ನಾಗರೀಕರಿಗೆ ಒಳ್ಳೆಯ ಕಿವಿಮಾತು ಎನಿಸಿತು.

ಆಚಾರ್ಯರು ಅವರ ಮಾತಿನ ಮೊದಲನೆ ದೃಷ್ಟಾಂತವನ್ನು ಮನುಷ್ಯನ ಒಂದು ಆಧುನಿಕತೆಯನ್ನು ತೋರುವ ಒಂದು ದೃಷ್ಟಾಂತವನ್ನು ಹೇಳಿದರು. ಅಮೇರಿಕಾದಲ್ಲಿ ಯಾರೋ ಒಬ್ಬ ಮೋಕ್ಷಸುಖವನ್ನು ಬದುಕಿದ್ದಾಗಲೇ ಅನುಭವಿಸುವ ಸಾಧನೆಯನ್ನು ತೋರಿಸುತ್ತೇನೆ ಎಂದು ಹೇಳಿದ್ದನಂತೆ, ಅದು ೮೦೦ ಕ್ಕೆ. ಇದಕ್ಕೂ ಮೀರಿದ ಆಶ್ಚರ್ಯವೇನೆಂದರೆ ಅಲ್ಲಿನ ಜನ ಮೋಕ್ಷದ ಸುಖಕ್ಕೆ ಸಾಲಿನಲ್ಲಿ ಕಿಕ್ಕಿರಿದು ನಾ ಮುಂದು ತಾ ಮುಂದು ಎನ್ನುತ್ತಾ ಬಂದಿದ್ದರಂತೆ. ಇದನ್ನು ಕೇಳಿದರೆ ನಗುವುದೋ ಅಳುವುದೋ ತಿಳಿಯುವುದಿಲ್ಲ. ಇವರೊಡನೆ ಕಳೆದ ಸಮಯ ಹೇಗೆ ಹಾರಿ ಹೋಯಿತು ಅನ್ನುವುದು ತಿಳಿಯಲಿಲ್ಲ. ಮತ್ತೆ ನಮ್ಮ ಪೂರ್ಣಪ್ರಮತಿ ಧಾರೆಯಲ್ಲಿ ಇವರನ್ನೂ ಕಂಡು ಅವರಿಂದ ಕನ್ನಡ ಗದ್ಯ ಸಾಹಿತ್ಯದ ಬಗ್ಗೆ ತಿಳಿಯುವ ಅವಕಾಶವೂ ಬಂದಿತು ಎಂದು ತಿಳಿಸಲು ಹರ್ಷಿಸುತ್ತೇನೆ.

# ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ ನಿಭೋದತ

**ಯಶಸ್ವಿನಿ**
ಪ್ರೌಢಶಾಲಾ ಅಧ್ಯಾಪಕರು

## ಪೂರ್ಣಪ್ರಮತಿ ವಿದ್ಯಾರ್ಥಿಗಳೊಂದಿಗೆ ಸಂವಾದ
## ಶ್ರೀಯುತ ಅಜಿತ್ ಹನುಮಕ್ಕನವರ್
ಖ್ಯಾತ ವಾಗ್ಮಿ, ಪತ್ರಕರ್ತರು, ಸುವರ್ಣ ವಾಹಿನಿ

ಈ ಉಪನಿಷತ್ತಿನ ಉಕ್ತಿಯನ್ನು ನಮ್ಮ ಭಾರತ ಮಾತೆಯ ವೀರ ಪುತ್ರ ಸ್ವಾಮಿ ವಿವೇಕಾನಂದರು ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿಯನ್ನು ತಲುಪುವವರೆಗೆ ನಿಲ್ಲಬೇಡಿ ಎಂದು ಘಂಟಾಘೋಷದಿಂದ ನಮ್ಮೆಲ್ಲರಿಗೆ ಕರೆ ನೀಡಿದ್ದಾರೆ. ಈ ದಾರಿಯಲ್ಲಿ ಪರಂಪರಾಬೀಜರಕ್ಷೆಯ ಗುರಿಯನ್ನು ಇಟ್ಟುಕೊಂಡು ಶಿಕ್ಷಣದ ಹಾದಿಯಲ್ಲಿ ಹೊರಟಿರುವ ಪೂರ್ಣಪ್ರಮತಿ ಗುರುಕುಲ ಅದರ ಮಕ್ಕಳನ್ನು ಭಾರತೀಯ ಚಿಂತನೆ ಮಾಡಲು ಮೂಡಿಸಲು ಎಚ್ಚರಗೊಳಿಸಲು ಹಲವಾರು ಸಾಧಕರೊಂದಿಗೆ ಸಂವಾದಗಳನ್ನು ಹಮ್ಮಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ ನಮ್ಮ ಗುರುಕುಲಕ್ಕೆ ಮಕ್ಕಳೊಂದಿಗೆ ಸಂವಾದ ನಡೆಸಲು ಖ್ಯಾತ ಪತ್ರಕರ್ತರಾದ ಅಜಿತ್ ಹನುಮಕ್ಕನವರು ಅವರನ್ನು ೯/೧೧/೨೦೨೪ ರಂದು ಆಹ್ವಾನಿಸಿದ್ದೆವು.

ಅಜಿತ್ ಅವರು ಜನಪ್ರಿಯ ಕನ್ನಡ ಸುದ್ದಿವಾಹಿನಿ ಸುವರ್ಣ ನ್ಯೂಸ್ ನಲ್ಲಿ ಪತ್ರಕರ್ತರಾಗಿ ಜನರಿಗೆ ನೇರ, ದಿಟ್ಟ ನೈಜ ಸುದ್ದಿಗಳನ್ನು ತಲುಪಿಸುವರು ಎಂದೇ ಖ್ಯಾತಿಯನ್ನು ಪಡೆದಿದ್ದಾರೆ. ನಮ್ಮ ಆಹ್ವಾನವನ್ನು ಒಪ್ಪಿ ತಮ್ಮ ಬಿಡುವಿಲ್ಲದೆ ಸಮಯದಲ್ಲಿ ಮಕ್ಕಳೊಂದಿಗೆ ಮಾತನಾಡಲು ಸಹರ್ಷದಿಂದ ಬಂದರು.



ನಾವೆಲ್ಲರೂ ತಂಬಾ ಕಾತರದಿಂದ ಅವರೊಂದಿಗೆ ಮಾತನಾಡಲು ಕಾಯುತ್ತಿದ್ದದ್ದು

ನಿಜ. ಪೂರ್ಣಪ್ರಮತಿ ಪ್ರೌಢಶಾಲೆ ಮಕ್ಕಳೊಂದಿಗೆ ಸುಮಾರು ೩ ಗಂಟೆಗಳ ಕಾಲ ಅವರ ಸಂವಾದ ನಡೆಯಿತು. ಅವರೊಡನೆ ನಡೆದ ಸಂವಾದದಲ್ಲಿ ನನ್ನ ಮನಸ್ಸು ಮುಟ್ಟುವ ಕೆಲವು ಮಾತುಗಳನ್ನು ಹಂಚಿಕೊಳ್ಳುತ್ತೇನೆ.

ಅವರು ನಮ್ಮ ಸಮಾಜದಲ್ಲಿ ವಾಸ್ತವಿಕತೆಯನ್ನು ಅರ್ಥಮಾಡಿಸುವ ಪ್ರಯತ್ನದಲ್ಲಿ ಅವರ ಕೌಟುಂಬಿಕ ಪ್ರವಾಸದ ಒಂದು ಸನ್ನಿವೇಶವನ್ನು ವಿವರಿಸಿದರು. ಅದರಲ್ಲಿ ಕಾಡಿನಲ್ಲೆ ಹುಟ್ಟಿ ಬೆಳೆದ ಒಬ್ಬ ಕಾಡು ಕುರುಬ ಹುಡುಗ ಅರಣ್ಯ ಇಲಾಖೆಯಲ್ಲಿ ಒಬ್ಬ ಸಾಮಾನ್ಯ ವಾಹನ ಚಾಲಕನ ಕೆಲಸಕ್ಕೆ ಬಂದಿದ್ದನಂತೆ. ಅಂತೆಯೆ ಅವನ ಮೇಲಧಿಕಾರಿಗಳೆಲ್ಲ ಕಾಡು ಅನ್ನುವುದನ್ನು ಕೇವಲ ಪುಸ್ತಕದಲ್ಲಿ ಮಾತ್ರ ಓದಿ ತಿಳಿದುಕೊಂಡವರಾಗಿದ್ದರಂತೆ. ಆದರೆ ವಿಪರ್ಯಾಸವೆಂದರೆ ಆ ಕಾಡ ಕುರುಬ ಹುಡುಗನ ಮನೆಯೇ ಕಾಡಾಗಿದ್ದದ್ದು. ಅವನು ಅಜಿತ್ ಅವರಿಗೆ ಕಾಡಿನಲ್ಲಿ ಇರುವ ಸಸ್ಯ ವನ್ಯಗಳನ್ನು ವರ್ಣಿಸುವುದರಲ್ಲಿ ಗೊತ್ತಾಗುತ್ತಿತ್ತು. ಈಗಿನ ವ್ಯವಸ್ಥೆಯಲ್ಲಿ ಜ್ಞಾನ ಎನ್ನುವುದು ಬೂದಿ ಮುಚ್ಚಿದ ಕೆಂಡದಂತೆ ಆಗಿದೆ. ಅದರ ಇರುವಿಕೆಗೆ ಬೆಲೆಯೇ ಇಲ್ಲ. ಜ್ಞಾನವಿದ್ದವರಿಗೆ ಅಧಿಕಾರವಿಲ್ಲ, ಅಧಿಕಾರ ಇರುವವರಿಗೆ ಅವರ ಪಾತ್ರಕರ್ತವ್ಯದ ಬಗ್ಗೆ ಜ್ಞಾನವೇ ಇಲ್ಲ. ಹಲ್ಲಿದ್ದವರಿಗೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲಿಲ್ಲ ಎನ್ನುವ ಹಾಗೆ. ಪ್ರಮಾಣ ಪತ್ರದ ಪರೀಕ್ಷೆಗಳಿಗೆ ಮಾತ್ರ ಬೆಲೆ ಆಗಿಹೋಗಿದೆ. ಇದು ನಮ್ಮ ಈಗಿನ ಸಮಾಜದ ದೌರ್ಭಾಗ್ಯವು ಹೌದು ಮತ್ತು ದುರ್ಗತಿಯೂ ಹೌದು. ಹೀಗೆ ಮುಂದುವರೆದರೆ ನಮ್ಮ ಸಮಾಜವು ಅವನತಿಗೆ ಹೋಗುವುದು ಹೌದು.

ಅಜಿತ್ ಅವರು ಭಾರತೀಯ ಇತಿಹಾಸದಲ್ಲಿನ ಜ್ಞಾನ-ವಿಜ್ಞಾನದ ಬಗ್ಗೆ ಮಕ್ಕಳಿಗೆ ಹೇಳುವಾಗ ನಮ್ಮ ಕರ್ನಾಟಕದ ಕೊಲ್ಲೂರು ದೇವಸ್ಥಾನದ ದೀಪಸ್ತಂಭದ ಕಬ್ಬಿಣದ ೧೪೦೦ ವರ್ಷಗಳಾದರು ತುಕ್ಕು ಹಿಡಿಯದ ಕಬ್ಬಿಣ ಮಾಡುವ ತಂತ್ರಜ್ಞಾನ ನಮ್ಮ ಪೂರ್ವಜರಿಗೆ ಇತ್ತು ಅಂತೆಯೇ ದೆಹಲಿಯ ಈಗಿನ ಕುತುಬ್ ಮಿನಾರ್ ಆಗಿನ ಧೃವಸ್ಥಂಭ ಇರುವ ಪ್ರಾಂಗಣದಲ್ಲಿ 3000 ವರ್ಷದ ಕಬ್ಬಿಣದ ಸ್ತಂಭ ಇದೆ ಅದನ್ನು ಹೇಗೆ ತಯಾರಿಸಿರಬಹುದು ಎಂದು ದೇಶವಿದೇಶಗಳಿಂದ ಬಂದು ಎಂದಿಗೂ ವಿಜ್ಞಾನಿಗಳು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆ ಶಿಕ್ಷಣ ಎಲ್ಲಿ ಕಳೆದು ಹೋಯಿತು ಯಾಕೆ ಟಾಟಾ ಕುಟುಂಬದವರಿಗೆ ಕಬ್ಬಿಣ ತಯಾರಿಸುವ ತಂತ್ರಜ್ಞಾನವನ್ನು ತಿಳಿಯಲು ಅಮೆರಿಕಾಗೆ ಹೋಗಬೇಕಾದ ಅನಿವಾರ್ಯತೆ ಬಂತು ? ಭಾರತೀಯರು ಲೋಹಜ್ಞಾನದಲ್ಲಿ ಏನನ್ನು ಸಾಧಿಸಿದ್ದರು ಎನ್ನುವುದನ್ನು ನಾವು ತಿಳಿಯಬೇಕು ಇದಲ್ಲವೇ ನಿಜವಾದ ಶಿಕ್ಷಣ. ಆ ಜ್ಞಾನ ಪರಂಪರೆ ಗೆಲ್ಲಿ ಹೋಯಿತು ? ಅದನ್ನು ನಷ್ಟ ಮಾಡಿದವರು ಯಾರು? ಈ ಪ್ರಶ್ನೆಗಳ ಮೂಲಕ ಶಿಕ್ಷಣ ಎಂದರೆ ಕೇವಲ ಪುಸ್ತಕವನ್ನು ಓದುವುದು ಅಥವಾ ನಮ್ಮ ಹೆಸರಿನ ಸಹಿ ಹಾಕುವುದು ಅಲ್ಲ. ಈ ವಾಸ್ತವದ ಭೇದ

ತಿಳಿಯುವ ಅನಿವಾರ್ಯತೆ ನಮಗೆ ಮತ್ತು ನಮ್ಮ ಮಕ್ಕಳಿಗೆ ಇದೆ ಅದನ್ನು ತಿಳಿದುಕೊಂಡರೆ ಮಾತ್ರ ಶಿಕ್ಷಣದ ಮಹತ್ವ ಮತ್ತು ನಿಜವಾದ ಅರ್ಥ ತಿಳಿಯುತ್ತದೆ ಎಂದು ಹೊಸ ಚಿಂತನೆಗೆ ನಮ್ಮನ್ನು ತೆರೆದಿಟ್ಟರು. ನಮ್ಮ ಪೂರ್ಣಪ್ರಮತಿಯಲ್ಲಿ ಪ್ರಶ್ನೆಗಳನ್ನು ಕೇಳುವ ಮುಕ್ತ ಅವಕಾಶವಿದೆ ಅದನ್ನು ಬಳಸಿಕೊಂಡು ಆ ಸಭೆಯಲ್ಲಿ ನೆರದಿದ್ದ ಒಬ್ಬ ಪೋಷಕರು ಹೇಗೆ ರಾಮಾಯಣದಲ್ಲಿ ಸಮುದ್ರ ಲಂಘನ ಮಾಡುವ ಸಂದರ್ಭದಲ್ಲಿ ಹನುಮಂತ ಸಾಮರ್ಥ್ಯವನ್ನು ಜಾಂಬವಂತ ನೆನಪಿಸಿಕೊಡುತ್ತಾನೋ ಹಾಗೆ ಹುಟ್ಟು ವೀರರಾದ ಭಾರತೀಯರಿಗೆ ತಮ್ಮ ಸಾಮರ್ಥ್ಯವನ್ನು ನೆನಪಿಸುವ ಕೆಲಸವನ್ನು ಮಾಧ್ಯಮದವರು ಮಾಡುವುದು ಸೂಕ್ತ ಅಲ್ಲವೇ ಎಂದು ಕೇಳಿದರು ಈ ಪ್ರಶ್ನೆಗೆ ಅಜಿತ್ ಅವರು ತಮ್ಮ ಮುಖದ ಮೇಲೆ ಒಂದು ಸಮ್ಮತಿಯ ನಗೆಯನ್ನು ತಂದು ಉತ್ತರಿಸಿದರು. ಅವರು ಬಂದು ಮಾರ್ಮಿಕವಾದ ಉತ್ತರವನ್ನು ಕೊಟ್ಟರು - ಇಂದಿನ ಸಮಾಜ ಹೇಗಿದೆ ಎಂದರೆ ಪ್ರತಿಯೊಬ್ಬರಿಗೂ ಒಳ್ಳೆಯದಾಗಬೇಕು ಎಂದಿದೆ ಆದರೆ ಆ ಒಳ್ಳೆಯದು ಬೇರೆಯವರಿಂದ ಆಗಬೇಕು ಎಂಬ ನಿರೀಕ್ಷೆ ಇದೆ. ನಾವೇ ಏಕೆ ಜಾಂಬವಂತರಾಗಬಾರದು ? ಎಂಬುದು ಅವರ ಪ್ರಶ್ನೆಯಾಗಿತ್ತು.

ಇನ್ನೊಂದು ಪ್ರಶ್ನೆ ಬಹಳ ಜನರಿಂದ ಬಂದದ್ದು - ನಾವು ಯಾರನ್ನು ನಾಯಕರನ್ನಾಗಿ ಮಾಡಿಕೊಳ್ಳಬೇಕು ಮತ್ತು ಹೇಗೆ? ಭಾರತ ಒಂದು ಪುಣ್ಯಭೂಮಿ ನಮ್ಮ ಭಾರತ ಮಾತೆ ರತ್ನಗರ್ಭದಿಂದ ಕಾಲಕಾಲಕ್ಕೆ ಅವಳನ್ನು ರಕ್ಷಿಸುವ ವೀರ ಪುತ್ರರು ಜನಿಸುತ್ತಾರೆ. ಆದರೆ ಅವರನ್ನು ನಮ್ಮ ನಾಯಕರನ್ನಾಗಿ ಗುರುತಿಸಿ, ಮಾಡಿಕೊಳ್ಳುವ ಜವಾಬ್ದಾರಿ ನಮ್ಮದು ಇಲ್ಲದಿದ್ದರೆ ಆಗುವ ಹಾನಿಯನ್ನು ನಾವೇ ಎದುರಿಸಬೇಕಾಗುತ್ತದೆ ಎಂದು ಉತ್ತರಿಸಿದರು. ನಾಗರೀಕ ಹಕ್ಕಾದ ಮತದಾನವನ್ನು ಉಪಯೋಗಿಸಿ ನಮ್ಮ ಧರ್ಮ ಮತ್ತು ತನ್ನತನವನ್ನು ಬೆಳೆಸಿಕೊಳ್ಳುವ ಅವಕಾಶ ಕೊಡುವ ನಾಯಕರನ್ನು ಆರಿಸಿಕೊಳ್ಳಬೇಕು ಎಂದು ತಿಳಿಸಿದರು.

ಮಕ್ಕಳಿಗೆ ನಿಮ್ಮ ತಂದೆ ತಾಯಿ ಹಿರಿಯರು ಮತದಾನ ಮಾಡಲು ಹೊರಡುವ ಮುನ್ನ ಒಮ್ಮೆ ನಿಮ್ಮ ಭವಿಷ್ಯದ ಬಗ್ಗೆ ಯೋಚಿಸಿ ಮತದಾನ ಮಾಡಿ ಎಂದು ಒತ್ತಾಯಿಸಿ ಎಂಬ ಕಿವಿ ಮಾತನ್ನು ಹೇಳಿದರು. ಒಬ್ಬ ಹುಡುಗ ತಾನು ಓದಿದ ಒಂದು ಸುದ್ದಿಯನ್ನು ಆಚರಿಸಿ 2047ರ ಹೊತ್ತಿಗೆ ನಮ್ಮ ಭಾರತ ಮುಸಲ್ಮಾನ ದೇಶವಾಗುತ್ತದೆ ಒಬ್ಬ ಮುಸಲ್ಮಾನ ನಾಯಕ ಹೇಳುತ್ತಾನೆ ನಿಜವಾ ಎಂದು ಕೇಳಿದ. ಅಜಿತ್ ಅವರು 2048ರ ಹೊತ್ತಿಗೆ ಭಾರತ ಮುಸಲ್ಮಾನ ದೇಶ ಆಗುತ್ತಿದೆ ಎಂದು ನಾವೂ ನಿಶ್ಚಯಿಸಿದರೆ ಆಗಬಹುದು. ಆದರೆ ಬೇರೆ ಯಾರು ಅಂದುಕೊಂಡರೆ ಅದು ಸಾಧ್ಯ ಆಗುವುದಿಲ್ಲ ಇದಕ್ಕೆ ನಮ್ಮ ಇತಿಹಾಸವೇ ಸಾಕ್ಷಿ ಎಂದು ಉತ್ತರಿಸಿದರು.

ಹೀಗೆ ಮಕ್ಕಳಿಗೆ ಯಾವ ರಾಜಕೀಯ ಹಾಗೂ ಪಕ್ಷಪಾತ ಅಭಿಪ್ರಾಯಗಳನ್ನು

# ಪೂರ್ಣಪ್ರಮತಿಯಲ್ಲಿ ನನ್ನ ಮೊದಲ ಅನುಭವ

**ಜ್ಯೋತಿಲಕ್ಷ್ಮೀ**
ಪ್ರಶಿಕ್ಷಣಾರ್ಥಿ

ನಾನು ತಿಳಿದ ಮಟ್ಟಿಗೆ ಪೂರ್ಣಪ್ರಮತಿಯಲ್ಲಿ ನಮ್ಮ ಹಿಂದಿನ ಸಂಪ್ರದಾಯ ಮತ್ತು ಆಚಾರ ವಿಚಾರಗಳನ್ನು ಮುಂದಿನ ಪೀಳಿಗೆಗೆ ಹೇಗೆ ನಾವು ಕೊಡಬಹುದು ಎಂಬ ಆಲೋಚನೆಯಲ್ಲಿ ನಡೆಯುತ್ತಿರುವ ಶಾಲೆ. ಈಗಿನ ದೈನಂದಿನ ಬದುಕಿನಲ್ಲಿ ಬದುಕು ಯಂತ್ರದಂತೆ ಸಾಗಿದೆ. ಇಲ್ಲಿ ಪ್ರತಿಯೊಬ್ಬರಿಗೂ ಅವರ ವೈಯಕ್ತಿಕ ಸಮಸ್ಯೆ ಮತ್ತು ಸ್ವಾರ್ಥ ಮನೋಭಾವದಿಂದ ತಮ್ಮ ಬದುಕು ಮತ್ತು ತಮ್ಮ ಕುಟುಂಬ ನಿರ್ವಹಣೆ ಇವುಗಳ ಬಗ್ಗೆಯೇ ಹೆಚ್ಚು ಗಮನ ಹರಿಸುತ್ತಾರೆ ಹೊರತು ಈ ಸಮಾಜಕ್ಕೆ ನಾವು ಏನು ಕೊಡಬಹುದು, ಸಮಾಜದಲ್ಲಿ ನನ್ನ ಅವಶ್ಯಕತೆ ಏನಿದೆ? ಈ ಭೂಮಿಯಲ್ಲಿ ಹುಟ್ಟಿದ ಮೇಲೆ ಯಾವ ರೀತಿ ನಾವು ಮುಂದಿನ ಪೀಳಿಗೆಗೆ ನಮ್ಮ ಅಳಿಲು ಸೇವೆಯನ್ನು ಸಲ್ಲಿಸಬಹುದು? ಎಂಬ ಕಲ್ಪನೆ ಇಲ್ಲ. ಪ್ರತಿಯೊಬ್ಬರು ಅವರ ವೈಯಕ್ತಿಕ ಸಮಸ್ಯೆ ಸಮಯದ ಒತ್ತಡ ಇವುಗಳಿಂದ ತಮ್ಮ ಜೀವನದ ಕಡೆ ಗಮನ ಹರಿಸುತ್ತಾರೆ. ಇದರಿಂದ ನಮ್ಮಿಂದ ಸಮಾಜಕ್ಕೆ ಯುವ ಪೀಳಿಗೆಗೆ ಯಾವುದೇ ತರಹದ ಸಹಾಯ ಮತ್ತು ಸಮಾಜದ ಉದ್ಧಾರವಾಗುವುದಿಲ್ಲ. ನನಗೆ ಇಂತಹ ಶಾಲೆಯ ಸೇವೆ ಸಲ್ಲಿಸಲು ಸಂತೃಪ್ತಿಯಿಂದ ಒಪ್ಪಿಕೊಳ್ಳುತ್ತೇನೆ.ನಮ್ಮ ಕನ್ನಡ ನಾಡಿನಲ್ಲಿ ಅದರಲ್ಲೂ ಬೆಂಗಳೂರಿನಂತಹ ಮಹಾನಗರದಲ್ಲಿ ಇಂತಹ ಶಾಲೆಯನ್ನು ನಡೆಸುವುದು ಸುಲಭದ ಮಾತಲ್ಲ. ಇದಕ್ಕೆ ಅನೇಕ ಜನರ ಸಹಕಾರ ಮತ್ತು ಅವರ ಅನುಭವಬೇಕು. ಇಂತಹ ಸಂದರ್ಭದಲ್ಲಿ ದೇವರ ಮೇಲೆ ನಂಬಿಕೆಯಿಟ್ಟು ಪ್ರಾರಂಭವಾದ ಶಾಲೆ ಈಗ ಅನೇಕರ ಮೆಚ್ಚುಗೆ ಪಡೆದಿದೆ.

ನನ್ನ ಅನಿಸಿಕೆ ಪ್ರಕಾರ ಪೂರ್ಣಪ್ರಮತಿ ಒಂದು ಗುರುಕುಲ. ಇಲ್ಲಿ ನಾನು ಕಂಡದ್ದು ಪ್ರಾಚೀನ ಗುರುಕುಲ ಪದ್ಧತಿ. ಇಲ್ಲಿನ ಮಕ್ಕಳಿಗೆ ಆಚಾರ ವಿಚಾರ ಮತ್ತು ಹಿರಿಯರ ಬಗ್ಗೆ ನಮಗೆ ಇರಬೇಕಾದ ಗೌರವ ಇವುಗಳು ನನಗೆ ಇಷ್ಟವಾಯಿತು. ಬೆಳೆಯುವ ಪೈರು ಮೊಳಕೆಯಲ್ಲಿ, ನಾವು ಅದದಕ್ಕೆ ಸರಿಯಾದ ಪೋಷಣೆಯನ್ನು ನೀಡಿದಾಗ ಅದು ಒಂದು ಶುದ್ಧವಾದ ಹೆಮ್ಮರವಾಗಿ ಬೆಳೆಯುತ್ತದೆ. ಇದರಿಂದ ಅನೇಕರಿಗೆ ನೆರಳುಸಿಗುತ್ತದೆ. ಇಂತಹ ಕೆಲಸವನ್ನು ಪೂರ್ಣಪ್ರಮತಿ ಗುರುಕುಲ ನಡೆಸುತ್ತಿದೆ. ಇಂತಹ ಶಾಲೆಯಲ್ಲಿ ಅಭ್ಯಾಸ ಮಾಡುವ ಮಕ್ಕಳು ಪೂರ್ಣಜ್ಞಾನವನ್ನು ಹೊಂದುತ್ತಾರೆ. ಇಂತಹ ಗುರುಕುಲದಲ್ಲಿ ಅಭ್ಯಾಸ ಮಾಡಿದ ಮಕ್ಕಳು ದೈಹಿಕವಾಗಿ ಅಲ್ಲದೆ ಮಾನಸಿಕವಾಗಿ ತಯಾರಾಗುತ್ತಾರೆ. ಮಾನಸಿಕವಾಗಿ ಅವರ ಬುದ್ಧಿಶಕ್ತಿ ವಿಸ್ತಾರವಾಗುತ್ತದೆ. ಇಲ್ಲಿನ

ಗುರುಕುಲದಲ್ಲಿ ಪಠ್ಯ ಚಟುವಟಿಕೆಗೆ ಮಾತ್ರ ಪ್ರಾಮುಖ್ಯತೆಯನ್ನು ಕೊಡದೆ ಮಕ್ಕಳಿಗೆ ಇತರ ಚಟುವಟಿಕೆಗಳಾದ ಸಂಗೀತ, ನೃತ್ಯ, ಯಕ್ಷಗಾನ ವಾದ್ಯಗಳ ನುಡಿಸುವಿಕೆ ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಆ ಮಗುವಿಗೆ ಯಾವ ಕ್ಷೇತ್ರದಲ್ಲಿ ಬೆಳೆಯಲು ಆಸಕ್ತಿ ಇದೆಯೋ ಅಂತಹ ಕ್ಷೇತ್ರದಲ್ಲಿ ಮಗುವು ಬೆಳೆಯಲು ಅವಕಾಶ ಇಲ್ಲಿ ಕಲ್ಪಿಸಿದ್ದಾರೆ. ಇಲ್ಲಿನ ಮಕ್ಕಳು ಪಾಠ ಮತ್ತು ಪ್ರವಚನ ಮತ್ತು ಗುರುಗಳ ಪ್ರವಚನ ಇವುಗಳನ್ನು ಆಸಕ್ತಿಯಿಂದ ಶಿಸ್ತುಬದ್ಧವಾಗಿ ಕುಳಿತು ಆಲಿಸುತ್ತಾರೆ. ತಾಳ್ಮೆಯಿಂದ ಕುಳಿತುಕೊಳ್ಳುವುದನ್ನು ಇವರಿಗೆ ಯಾರೂ ಕಲಿಸುವ ಅವಶ್ಯಕತೆ ಇಲ್ಲ. ಅವರ ಮಟ್ಟಿಗೆ ಅವರು ತಾಳ್ಮೆಯಿಂದ ಕುಳಿತುಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಂಡಿದ್ದಾರೆ. ಇಲ್ಲಿನ ಅಭ್ಯಾಸದ ಪ್ರಕಾರ ಮಕ್ಕಳು ಬೆಳಗಿನ ಪ್ರಾರ್ಥನೆ ಮತ್ತು ಭೋಜನದ ಮೊದಲು ಪ್ರಾರ್ಥನೆ, ನಂತರ ಶಾಲೆಯಿಂದ ಹೊರಡುವ ಮೊದಲು ಪ್ರಾರ್ಥನೆ ನಂತರ ಮನೆಗೆ ತೆರಳುವುದು ಇದು ಹಿಂದಿನ ಗುರುಕುಲ ಪದ್ಧತಿಯಲ್ಲಿತ್ತು. ಆದರೆ ಅದು ಇಂದಿನ ಪೂರ್ಣಪ್ರಮತಿಯಲ್ಲಿ ಕಾಣಬಹುದು. ಇಲ್ಲಿನ ಮಕ್ಕಳು ಸ್ವ ಅಧ್ಯಯನದ ಮೂಲಕ ಹೆಚ್ಚು ಅಭ್ಯಾಸ ಮಾಡುತ್ತಾರೆ. ಒಂದು ವಿಷಯವನ್ನು ತೆಗೆದುಕೊಂಡು ಅದನ್ನು ಅರ್ಥಮಾಡಿಕೊಂಡು ಮತ್ತೊಬ್ಬರಿಗೆ ಆ ವಿಷಯವನ್ನು ವ್ಯಕ್ತಿಪಡಿಸುವುದು. ಇದು ಸ್ವಕಲಿಕೆಗೆ ಮಕ್ಕಳು ಎಷ್ಟು ಪ್ರಾಮುಖ್ಯತೆ ಕೊಡುತ್ತಾರೆ ಎಂಬುದು ತಿಳಿಯುತ್ತದೆ. ಪ್ರತಿಯೊಬ್ಬ ಶಿಕ್ಷಕರು ಶಿಕ್ಷಕಿಯರು ಮಕ್ಕಳ ಪೂರ್ಣ ಬೆಳವಣಿಗೆಗೆ ತಯಾರಿ ಮಾಡಿಕೊಳ್ಳುವುದು, ಪ್ರತಿಯೊಬ್ಬರು ಗೌರವಯುಕ್ತವಾಗಿ ನಡೆದುಕೊಳ್ಳುವದು. ಇಂತಹ ಅನೇಕ ವಿಷಯಗಳು ನನ್ನ ಮನಸ್ಸಿಗೆ ನಾಟಿದೆ. ಈ ಸಂಸ್ಥೆಗೆ ನನ್ನ ಪ್ರಯತ್ನದಿಂದ ನಾನು ಏನನ್ನು ಕೊಡಬಹುದು ಎಂಬುದನ್ನು ತಿಳಿದುಕೊಂಡು ಕೊಡುವ ಪ್ರಯತ್ನ ಮಾಡುತ್ತೇನೆ. ಇದು ನನ್ನ ಸಂಕಲ್ಪ.

# ಕನ್ನಡ ಸಾಹಿತ್ಯ ಪ್ರಕಾರಗಳು : ಭಾಷಾ ವಿಸ್ಮಯ



**ರಾಘವ್**
ನಿರ್ವಹಣೆ ತಂಡ, ಪೂರ್ಣಪ್ರಮತಿ

## ಒಂದೇ ಭಾಷೆಯಲ್ಲಿ ಇಷ್ಟೊಂದು ವೈವಿಧ್ಯವೇ !!!

ಬಹಳ ಹಿಂದಿನಿಂದಲೂ ಕನ್ನಡ ಭಾಷೆಯಲ್ಲಿ ವಿಪುಲವಾದ ಮತ್ತು ಗಂಭೀರವಾದ ಸಾಹಿತ್ಯ ರಚನೆಯಾಗುತ್ತ ಬಂದಿದೆ. ಸಾಹಿತ್ಯ ರಚನೆಗೆ ಒದಗಬಹುದಾದ ಬಹುತೇಕ ಎಲ್ಲ ಪ್ರಕಾರದ ಸೃಜನಶೀಲತೆಯೂ ಇಲ್ಲಿ ವ್ಯಕ್ತಗೊಂಡಿದೆ ಎನ್ನಬಹುದು. ಕನ್ನಡದಲ್ಲಿ ಇರದಿರುವ ಸಾಹಿತ್ಯ ಪ್ರಕಾರ ಮತ್ತಿನ್ನಾವ ಭಾಷೆಯಲ್ಲಿದ್ದೀತು ಎಂದು ಕೇಳುವ ಮಟ್ಟಿಗೆ ಇಲ್ಲಿ ಸಾಹಿತ್ಯ ಕೃಷಿ ನಡೆದಿದೆ. ಆದ್ದರಿಂದಲೇ ಜಗತ್ತಿನ ಅತಿ ಶ್ರೀಮಂತ ಭಾಷೆಗಳಲ್ಲಿ ಕನ್ನಡವೂ ಒಂದು.

ಮುಂದಿನ ಸಹಸ್ರಾರು ವರ್ಷಗಳವರೆಗೆ ಉಳಿಯುವ ಮತ್ತು ಬೆಳೆಯುತ್ತಲೇ ಇರುವ ಮತ್ತು ಅಪ್‌ಡೇಟ್ ಆಗುತ್ತಿಲಿರುವ ಜಗತ್ತಿನ ಕೆಲವೇ ಕೆಲವು ಭಾಷೆಗಳಲ್ಲಿ ಕನ್ನಡವೂ ಒಂದು. ಕನ್ನಡದ ಕೆಲ ನೆರೆಹೊರೆಯ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಅನೇಕ ಭಾಷೆಗಳಿಗೆ ಈ ಸೌಭಾಗ್ಯವಿಲ್ಲದಿರುವುದು ಶೋಚನೀಯ. ಹಲವಾರು ಭಾರತೀಯ ಭಾಷೆಗಳು ಕಾಲಾಂತರದಲ್ಲಿ ಅಳಿದುಹೋಗಲಿವೆ. ಕಾರಣ ಇಂಗ್ಲೀಷ್ ಭಾಷೆಯ ದಬ್ಬಾಳಿಕೆ ಮತ್ತು ಜನರಿಗೆ ಇಂಗ್ಲೀಷ್ ಮೇಲಿರುವ ಅಂಧ ವ್ಯಾಮೋಹ.

ಕನ್ನಡದ ವಿಷಯದಲ್ಲಿ ಹಾಗಿಲ್ಲ. ಕನ್ನಡವನ್ನು ಉಳಿಸುವ, ಬೆಳೆಸುವ ಮತ್ತು ಈಗಿಸುವ (ಅಪ್‌ಡೇಟ್ ಮಾಡುವ) ಕಾರ್ಯ ಸಾಂಸ್ಥಿಕ ಮಟ್ಟದಲ್ಲಿ, ಹಾಗೂ ವ್ಯಕ್ತಿಗಳ ಮಟ್ಟದಲ್ಲಿ ವ್ಯವಸ್ಥಿತವಾಗಿ  ನಡೆಯುತ್ತಲೇ ಇದೆ. ಕಳೆದ ಎರಡೂವರೆ ಸಾವಿರ ವರ್ಷಗಳಿಂದ ಇದು ಹೀಗೇ ಮುಂದುವರಿಯುತ್ತಲಿದೆ.

## ವಚನ ಸಾಹಿತ್ಯ

ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ವಚನ ಸಾಹಿತ್ಯ 10 ನೇ ಶತಮಾನದಲ್ಲಿ ಉದಯಿಸಿ ಇದು ಈಗಲೂ ಕೂಡ ಇಪ್ಪತ್ತೊಂದನೆಯ ಶತಮಾನದಲ್ಲೂ ಬೆಳೆಯುತ್ತಲೇ ಇದೆ. ಇದೊಂದು ಕಾವ್ಯ, ಹಾಡಿದರೆ ಹಾಡು, ಓದಿದರೆ ಗದ್ಯವಾಗುವ ವಿಶಿಷ್ಟ ಕಾವ್ಯ ಪ್ರಕಾರ. ಜನರ ಮನೋಭಿವ್ಯಕ್ತಿಗೆ ಒಂದು ಉಪಾಯ.  ವಚನ ಎಂದರೆ ಪ್ರಮಾಣ ಅಥವಾ ಕೊಟ್ಟ ಮಾತು ಎಂದರ್ಥ.  ವಚನ ಸಾಹಿತ್ಯವನ್ನು ಐತಿಹಾಸಿಕವಾಗಿ ಬಸವ ಪೂರ್ವಯುಗ, ಬಸವಯುಗ, ಮತ್ತು ಬಸವೋತ್ತರಯುಗ ಎಂದು ಮೂರು ಕಾಲಘಟ್ಟಗಳಾಗಿ ವಿಭಾಗಿಸಲಾಗುತ್ತದೆ. ೧೦ ನೇ

ಶತಮಾನದಲ್ಲಿಯೇ ವಚನ ಸಾಹಿತ್ಯ ಪ್ರಕಾರ ಹುಟ್ಟಿಕೊಂಡಿರಬಹುದು. ಶಂಕರದಾಸಿಮಯ್ಯ, ಜೇಡರದಾಸಿಮಯ್ಯ, ಕೊಂಡಗುಳಿ ಕೇಶಿರಾಜ ಮೊದಲಾದವರು ಬಸವಪೂರ್ವಯುಗದ ಶರಣರು. ಇವರಲ್ಲಿ ಚಾಳುಕ್ಯ ಜಯಸಿಂಹನ (1015-1042) ಅರಸಿ ಸುಗ್ಗಲೆಯ ಗುರುವಾದ ಜೇಡರದಾಸಿಮಯ್ಯನ ವಚನಗಳು ಲಭಿಸಿವೆ. 10ನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿರಬಹುದಾದ ಈತನ ಗುರು ಶಂಕರದಾಸಿಮಯ್ಯನೂ ವಚನಗಳನ್ನು ರಚಿಸಿರಬಹುದು. ಜೇಡರ ದಾಸಿಮಯ್ಯನ ಹದಗೊಂಡ ಶೈಲಿಯೂ, ಈ ಹೇಳಿಕೆಗೆ ಪುಷ್ಟಿ ನೀಡುತ್ತದೆ. ಹತ್ತನೆಯ ಶತಮಾನದಲ್ಲಿ ರಚಿಸಲ್ಪಟ್ಟ ವಚನಗಳು ಅಲ್ಲಲ್ಲಿ ಅಂಶ, ಲಯ ಒಳಪ್ರಾಸ ಯುಕ್ತವಾಗಿದ್ದು ಗಾತ್ರದಲ್ಲಿ ಚಿಕ್ಕವಾಗಿವೆ.

ಬಸವಯುಗ ವಚನಸಾಹಿತ್ಯದ ಸುಗ್ಗಿಕಾಲ. 12ನೆಯ ಶತಮಾನದ ಮಧ್ಯಭಾಗದಲ್ಲಿ ಲಿಂಗಾಯತ ಆಂದೋಲನ ಕನ್ನಡ ಸಮಾಜಕ್ಕೆ ಹೊಸ ತಿರುವು ಕೊಟ್ಟಿತು. ಆಚಾರ-ವಿಚಾರ, ಭಾಷೆ-ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳಲ್ಲಿ ಹೊಸತನ್ನು ತುಂಬಿತು. ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ, ಸಿದ್ಧರಾಮ , ಮಡಿವಾಳ ಮಾಚಿದೇವ ಇವರು ಸುಪ್ರಸಿದ್ಧ ವಚನಕಾರರು. ಈ ಕಾಲದ ವಚನ ಸಂಖ್ಯೆ ಹಲವು ಸಾವಿರ, ಹಲವು ಲಕ್ಷ, ಕೋಟಿ ಎಂಬ ಹೇಳಿಕೆಗಳಿವೆ. ಕನ್ನಡಭಾಷೆಯ ಅಭಿವ್ಯಕ್ತಿ ಸಾಧ್ಯತೆಯನ್ನು ತಳಮಟ್ಟ ಕೈವಶ ಮಾಡಿಕೊಂಡ ವಚನಕಾರರು ಆ ಸಾಧ್ಯತೆಯನ್ನು ಇನ್ನೂ ಹಿಗ್ಗಿಸಿದರು. ಅನುಭವ ಅಭಿವ್ಯಕ್ತಿಗಳಲ್ಲಿ ಪ್ರಾಮಾಣಿಕತೆಯನ್ನು ಸಾಧ್ಯ ಮಾಡಿ ತೋರಿಸಿದರು. ಈ ಆಂದೋಲನದ ಅಧಿನಾಯಕ ಜಗಜ್ಯೋತಿ ಬಸವಣ್ಣ. ವಚನ ಸಾಹಿತ್ಯದ ಕಾರ್ಯಚಟುವಟಿಕೆಗಳ ಕೇಂದ್ರ ಸ್ಥಳ ಕಲ್ಯಾಣ.

ಶರಣರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಧರ್ಮ, ಆಧ್ಯಾತ್ಮಿಕ ಕಾರಣಕ್ಕಾಗಿ ಅನುಭವಮಂಟಪವನ್ನು ನಿರ್ಮಾಣ ಮಾಡಿಕೊಂಡಿದ್ದರು.

ಅಲ್ಲಮಪ್ರಭುಗಳು ಅನುಭವ ಮಂಟಪದ ಅಧ್ಯಕ್ಷರಾಗಿದ್ದರು. ಅವರು ಹಿರಿಯ ಆತ್ಮಜ್ಞಾನಿಗಳು. ನಿಜವಾದ ವೈರಾಗ್ಯವನ್ನು ಪಡೆದವರು. ತಮಗಿಂತ ಕಿರಿಯರಾಗಿದ್ದ ಅಕ್ಕಮಹಾದೇವಿ, ಬಸವಣ್ಣ, ಸಿದ್ಧರಾಮ ಮೊದಲಾದವರ ಧ್ಯೇಯ ಧೋರಣೆಗಳಲ್ಲಿನ ಇತಿಮಿತಿಗಳನ್ನು ಎತ್ತಿ ತೋರಿಸಿ ಅವರನ್ನು ಸರಿಯಾದ ಮಾರ್ಗಕ್ಕೆ ಕೊಂಡೊಯ್ದು ಹಿರಿಯರು. ಅಲ್ಲಮಪ್ರಭುಗಳು ತಮ್ಮ ವಚನಗಳಲ್ಲಿ ತಾವು ಕಂಡ ಸತ್ಯವನ್ನು ತಮಗೆ ಹಿಡಿಸದ ಆಚಾರ-ವಿಚಾರಗಳನ್ನು ತೀಕ್ಷ್ಣವಾಗಿ

## ಪ್ರಮುಖ ವಚನಕಾರರು - ಇವರನ್ನು ಶಿವಶರಣರು ಎಂದುಕೂಡ ಕರೆಯಲಾಗುತ್ತದೆ



ಅಲ್ಲಮಪ್ರಭು



ಜಗಜ್ಯೋತಿ ಬಸವೇಶ್ವರ



ಅಕ್ಕ ಮಹಾದೇವಿ



ಅಂಬಿಗರ ಚೌಡಯ್ಯ

ಪ್ರಸ್ತಾಪಿಸಿದ್ದರೆ. ಇವರ ಬೆಡಗಿನ ವಚನಗಳಂತೂ ಪಾರಿಭಾಷಿಕ ಸಂಕೇತಗಳಿಂದ ಕೂಡಿ, ಭೇದಿಸಲಸಾಧ್ಯವಾಗಿವೆ.

**ಅಲ್ಲಮಪ್ರಭುಗಳ ಒಂದು ವಚನ :**

ಸಾವನ್ನಕ್ಕ ಸರಸ ಮಾಡಿದರೆ
ಇನ್ನುಕಾಣದುವ ದಿನವಾವುದು?
ಬಾಳುವನ್ನಕ್ಕರ ಭಜಿಸುತ್ತಿದ್ದರೆ
ತಾನಹ ದಿನವಾವುದು?
ಅರ್ಥವುಳ್ಳನ್ನಕ್ಕರ ಅರಿವುತ್ತಿದ್ದರೆ
ನಿಜವನೈದುವ್ ದಿನವಾವುದು?
ಕಾರ್ಯಕ್ಕೆ ಬಂದು ಕಾರ್ಯ
ಕೈಸಾರಿದ ಬಳಿಕ ಇನ್ನು
ಮರ್ತ್ಯಲೋಕದ ಹಂಗೇಕೆ?

**ಬಹುಷಃ ಸಾವಿರಾರು ಜನ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸಿರಬಹುದು. ಅವರಲ್ಲಿ ಪ್ರಮುಖ ವಚನಕಾರರು :**

- ಅಲ್ಲಮಪ್ರಭುದೇವರು
- ಅಂಬಿಗರ ಚೌಡಯ್ಯ
- ಮಾದಾರ ಚೆನ್ನಯ್ಯ
- ಸೂಳೆ ಸಂಕವ್ವೆ
- ಏಕಾಂತ ರಾಮಯ್ಯ
- ಹಡಪದ ಅಪ್ಪಣ್ಣ
- ಒಕ್ಕಲು ಮಾದಯ್ಯ
- ಮಡಿವಾಳ ಮಾಚಯ್ಯ
- ಆಯ್ದಕ್ಕಿ ಲಕ್ಕಮ
- ಹೆಂಡದ ಮಾರಯ್ಯ
- ಅಂಗಸೋಂಕಿನ ಲಿಂಗತಂದೆ
- ಅಂಬಿಗರ ಚೌಡಯ್ಯ
- ಡೋಹರ ಕಕ್ಕಯ್ಯ
- ಅಕ್ಕಮ್ಮ
- ಅಖಂಡ ಮಂಡಲೇಶ್ವರ
- ಅಗ್ಘವಣಿ ಹಂಪಯ್ಯ
- ಅಗ್ಘವಣಿ ಹೊನ್ನಯ್ಯ
- ಅಜಗಣ್ಣ ತಂದೆ
- ಅರಿವಿನ ಮಾರಿತಂದೆ
- ಅನುಗಲೇಶ್ವರ
- ಅನಾಮಿಕ ನಾಚಯ್ಯ
- ಅಪ್ರಮಾಣ ಗುಹೇಶ್ವರ
- ಅಪ್ಪಿದೇವಯ್ಯ
- ಅವಸರದ ರೇಕಣ್ಣ
- ಅಮರಗುಂಡದ ಮಲ್ಲಿಕಾರ್ಜುನ ತಂದೆ
- ಅಮುಗೆ ರಾಯಮ್ಮ
- ಅಮುಗಿದೇವಯ್ಯ
- ಅಶ್ವಥರಾಮ
- ಆಯ್ದಕ್ಕಿ ಮಾರಯ್ಯ
- ಆಯ್ದಕ್ಕಿ ಲಕ್ಕಮ್ಮ
- ಆದಯ್ಯ
- ಆನಂದ ಸಿದ್ಧೇಶ್ವರ
- ಆನಂದಯ್ಯ
- ಇಮ್ಮಡಿ ಮುರಿಘಾ ಗುರುಸಿದ್ಧ
- ಈಶ್ವರೀಯ ವರದ ಚೆನ್ನರಾಮ
- ಉಗ್ಘಡಿಸುವ ಗಬ್ಬಿದೇವಯ್ಯ

- ಉರಿಲಿಂಗದೇವ
- ಉರಿಲಿಂಗಪೆದ್ದಿ
- ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ
- ಉಪ್ಪರಗುಡಿಯ ಸೋಮಿದೇವಯ್ಯ
- ಉಳಿಯುಮೇಶ್ವರ ಚಿಕ್ಕಣ್ಣ
- ಎಚ್ಚರಿಕೆ ಕಾಯಕದ ಮುಕ್ತನಾಥಯ್ಯ
- ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ
- ಮಸಣಮ್ಮ
- ಎಲೆಗಾರ ಕಾಮಣ್ಣ
- ಏಕಾಂತ ವೀರಸೊಡ್ಡಳ
- ಏಕಾಂತರಾಮಿತಂದೆ
- ಏಕೋರಾಮೇಶ್ವರ ಲಿಂಗ
- ಏಲೇಶ್ವರ ಕೇತಯ್ಯ
- ಒಕ್ಕಲಿಗ ಮುದ್ದಣ್ಣ
- ಕಂಬದ ಮಾರಿತಂದೆ
- ಕರಸ್ಥಲದ ಮಲ್ಲಿಕಾರ್ಜುನೊಡೆಯ
- ಕರುಳ ಕೇತಯ್ಯ
- ಕದಿರಕಾಯಕದ ಕಾಳವ್ವೆ
- ಕದಿರರೆಮ್ಮವ್ವೆ
- ಕನ್ನಡಿಕಾಯಕದ ಅಮ್ಮಿದೇವಯ್ಯ
- ಕನ್ನಡಿಕಾಯಕದ ರೇಮಮ್ಮ
- ಕನ್ನಡ ಮಾರಿತಂದೆ
- ಕಲಕೇತಯ್ಯ
- ಕಲ್ಲಯ್ಯದೇವರು
- ಕುರಂಗಲಿಂಗ
- ಕುರಂಗೇಶ್ವರಲಿಂಗ
- ಕುಷ್ಟಗಿ ಕರಿಬಸವೇಶ್ವರ
- ಕೂಗಿನ ಮಾರಯ್ಯ
- ಕೂಡಲಸಂಗಮೇಶ್ವರ
- ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
- ಕಾಡಸಿದ್ಧೇಶ್ವರ
- ಕಾಮಾಟದ ಭೀಮಣ್ಣ
- ಕಾಲಕಣ್ಣಿಯ ಕಾಮಮ್ಮ
- ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ
- ಕೊಟ್ಟಣದ ಸೋಮಮ್ಮ
- ಕೊಟಾರದ ಸೋಮಣ್ಣ
- ಕೋಲ ಶಾಂತಯ್ಯ
- ಕಿನ್ನರಿ ಬ್ರಹ್ಮಯ್ಯ
- ಕೀಲಾರದ ಭೀಮಣ್ಣ
- ಗಂಗಾಂಬಿಕೆ
- ಗಜೇಶ ಮಸಣಯ್ಯ
- ಗಜೇಶಮಸಣಯ್ಯದ ಪುಣ್ಯಸ್ತ್ರೀ
- ಗಣದಾಸಿ ವೀರಣ್ಣ
- ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ
- ಗುರು ವಿಶ್ವೇಶ್ವರಾ
- ಗುರುಪುರದ ಮಲ್ಲಯ್ಯ
- ಗುರುಬಸವೇಶ್ವರ
- ಮೋಳಿಗೆ ಮಾರಯ್ಯ

ಲೇಖನದ ಈ ಭಾಗವನ್ನು ಸಿದ್ಧಪಡಿಸಲು ನಾನು ವಿಕಿಪೀಡಿಯದಿಂದ ಒಂದಿಷ್ಟು ನೆರವು ಪಡೆದು ಕೊಂಡಿದ್ದೇನೆ. ಆದ್ದರಿಂದ ವಿಕಿಪೀಡಿಯಕ್ಕೆ ನಾನು ಆಭಾರಿಯಾಗಿದ್ದೇನೆ.


ಲೇಖನ ಮುಂದುವರಿಯುವುದು ...

**PUZZLE 1**

Which number should replace the “?”

| | | | |
|---|---|---|---|
| 1 | 3 | 5 | 4 |
| 5 | 5 | 4 | 9 |
| 0 | 1 | 3 | 2 |
| 2 | 3 | 4 | ? |

**PUZZLE 2**




## Solution

**Puzzle 1**

**Number :5**
The numbers under the line are the average of the three numbers in the column above.

**Puzzle 2**

**Answer: 6.**
The difference in the scores forms the following series: –2, +4, –6, +8.
Alternating per column you also see
the following two series: 7, 14, 21, 28; 9, 18, 27, 36.

# ಪ್ರಕಟಣೆಗಳು



pūrṇapramati
A Centre for Integrated Learning

# ಪೂರ್ಣಪ್ರಮತಿ

ಪರಿಪೂರ್ಣ ಕಲಿಕಾತಾಣ

ಪ್ರತಿಷ್ಠಾಪಕ ಸಂರಕ್ಷಕ
ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು
ಪೇಜಾವರ, ಅಧೋಕ್ಷಜ ಮಠ

ಪರಂಪರಾ ಬೀಜರಕ್ಷಾ ಧ್ಯೇಯ ಮತ್ತು ಸ್ವಧರ್ಮದ ಸಾಕ್ಷಾತ್ಕಾರಕ್ಕಾಗಿ ವಿದ್ಯಾಸತ್ರಯಾಗದ ದಾರಿಯಲ್ಲಿ

## ಪೂರ್ಣಪ್ರಮತಿ ಗುರುಕುಲ ಶಿಕ್ಷಣ

ಗಿರಿನಗರ, ಪೂರ್ಣಪ್ರಜ್ಞ ಬಡಾವಣೆ, ಜೆ.ಪಿ. ನಗರ, ಯಲಹಂಕ ಉಪನಗರ, ಆನಂದವನ-ಮಾಗಡಿ

## ಆಜೀವನ ಶಿಕ್ಷಣ ನಮ್ಮ ಹಾದಿ

ಶಿಶು ಶಿಕ್ಷಣದಿಂದ ಪ್ರಾರಂಭಿಸಿ ಉನ್ನತ ಶಿಕ್ಷಣದವರೆಗೂ ಭಾರತೀಯ ಗುರುಕುಲ ಪದ್ಧತಿಯನ್ನು ಆಧರಿಸಿ, ನಮ್ಮ ಶಾಸ್ತ್ರಗಳು, ಸಮಕಾಲೀನ ಅಧ್ಯಯನ ಮತ್ತು ಜೀವನ ಕಲೆಗಳ ವಿದ್ಯೆಯನ್ನು ಪೂರ್ಣಪ್ರಮತಿಯು ನೀಡುತ್ತಿದೆ

## ಇವರಿಗೆಲ್ಲ ಮುಕ್ತ ಅವಕಾಶವಿದೆ

- ವಿದ್ಯಾರ್ಥಿಗಳು
- ಅಧ್ಯಾಪಕರು
- ಪ್ರಶಿಕ್ಷಕರು
- ನಿರ್ವಾಹಕರು
- ವ್ಯವಸ್ಥಾಪಕರು
- ಸಂಯೋಜಕರು

## 2024 - 25 ವರ್ಷಕ್ಕೆ ಪ್ರವೇಶಾವಕಾಶ ಪ್ರಾರಂಭವಾಗಿದೆ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

**98804 91323 / 91414 16390 / 96634 74669 / 72590 40610**

**ಪೂರ್ಣಪ್ರಮತಿ, ವೈಜಯಂತ, # 26 / 1, 14 ನೇ ಅಡ್ಡರಸ್ತೆ,**
**ಹೊಸಕೆರೆಹಳ್ಳಿ ಮುಖ್ಯರಸ್ತೆ, ಗಿರಿನಗರ, ಬೆಂಗಳೂರು - 560085**

info@purnapramati.in www.purnapramati.in

pūrṇapramati
A Centre for Integrated Learning

# pūrṇapramati

A Center for Integrated Learning

Pratiṣṭhāpaka Saṃrakṣaka
**PARAMA PŪJYA ŚRĪ VIŚVEŚATĪRTHA ŚRĪPĀDA**
Pejāvara Adhōkṣaja Maṭha, Udupi

Aiming towards paramparā bīja rakṣā education conscious of Svadharma directed towards the conduct of Vidyā satra Yāga

# Admissions open for 2025-26

- Educational initiative that blends India's traditional Gurukula system with modern methods of learning.
- learn directly in an immersive environment.






- Integration of arts and contemporary studies Comprehensive and diverse educational experience.
- Gains knowledge in a broad array of disciplines.



- Rooted in lifelong learning.
- Continuous development from early childhood education to higher education.
- Emphasizes the importance of personal growth, creativity, and intellectual development.
- Students remain grounded in cultural values and ethical principles.

**Purnapramati**
**is already functional at the following places**

- Girinagar
- Poornapragna Layout
- Jayaprakash Nagar
- Anadavana-Magadi



## Proposed new Purnapramati learning centres

## Yelahanka New Town, Vijaynagar and Narasimharaja Colony

An open invitation to students, teachers, administrators, trainers to join our endeavor and make it a success

## For further information contact

98804 91323 / 91414 16390 / 96634 74669 / 72590 40610

Purnapramati, # 26/1, 14th Cross, Hosakerehalli Main Road, Girinagar, Bengaluru, Karnataka - 560085

info@purnapramati.in www.purnapramati.in

पूर्णप्रमतिं जनयन्त योषणाः
pūrṇapramati
A Centre for Integrated Learning

# ಪೂರ್ಣಪ್ರಮತಿ

ಪರಿಪೂರ್ಣ ಕಲಿಕಾತಾಣ

ಪ್ರತಿಷ್ಠಾಪಕ ಸಂರಕ್ಷಕರು
ಪರಮ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು,
ಪೇಜಾವರ, ಅಧೋಕ್ಷಜ ಮಠ

## ನಾವು ನೀವು ನೆರೆಹೊರೆ

## ಪರಂಪರೆಗಳ ಶಿಕ್ಷಣ ರಕ್ಷಣೆ ಮತ್ತು ಪೋಷಣೆಗಾಗಿ ಕೈಜೋಡಿಸೋಣ

### ಪೂರ್ಣಪ್ರಮತಿ ಬಳಗ ನಿಮ್ಮೊಡನೆ ಹೀಗೆ ಭಾಗವಹಿಸುತ್ತದೆ

- ನಗರ ಸಂಕೀರ್ತನೆ
- ಭಜನಾ ಕಾರ್ಯಕ್ರಮ
- ರಾಮಾಯಣ, ಮಹಾಭಾರತ, ಭಾಗವತ, ಶಾಸ್ತ್ರಗ್ರಂಥಗಳ ಪ್ರವಚನ ಹಾಗೂ ಅಧ್ಯಯನ
- ಪ್ರಮತಿ ಧಾರಾ - ಶಿಕ್ಷಣ, ಸಂಸ್ಕೃತಿ, ಪ್ರಕೃತಿ ಇತ್ಯಾದಿ ವಿಷಯಗಳ ಜ್ಞಾನಸತ್ರ
- ಪೌರೋಹಿತ್ಯ ಮತ್ತು ದೇವತಾರ್ಚನೆ
- ಶಿಕ್ಷಕರ ತರಬೇತಿ
- ತ್ಯಾಜ್ಯ ನಿರ್ವಹಣೆಗೆ ಮಾರ್ಗದರ್ಶನ

### ನೀವು ಪೂರ್ಣಪ್ರಮತಿಯಲ್ಲಿ ಹೀಗೆ ಭಾಗವಹಿಸಬಹುದು

- ಪರ್ವದಿನಗಳ ಆಚರಣೆಗಳಲ್ಲಿ ಅತಿಥಿಗಳಾಗಿ ಭಾಗವಹಿಸಿ
- ಸಂಸ್ಕೃತ ಭಾಷೆ ಕಲಿಯಿರಿ
- ಪರಂಪರಾಗತ ಹಾಡುಗಳು, ದಾಸರ ಪದಗಳು, ದೇಶಭಕ್ತಿಗೀತೆಗಳು ಹಾಗೂ ಶ್ಲೋಕಗಳನ್ನು ಕಲಿಯಿರಿ
- ಪೋಷಕರಾಗಿ ಅಥವಾ ಶಿಕ್ಷಕರಾಗಿ
- ಧನ ಮತ್ತು ಭೂಮಿಯ ದಾನಿಗಳಾಗಿ
- ಪ್ರಕೃತಿ ಸಂರಕ್ಷಣಾ ಯೋಜನೆಗಳಲ್ಲಿ ಕೈಜೋಡಿಸಿ
- ಭಾರತೀಯ ಸಾಂಪ್ರದಾಯಿಕ ಕಲೆಗಳ ಶಿಕ್ಷಕರಾಗಿ
- ದೇಶ ಹಾಗೂ ಸಮಾಜಸೇವಕರಾಗಿ ಸಿದ್ಧರಾಗಿ
- ನೈಸರ್ಗಿಕವಾಗಿ ಬೆಳೆದ ತರಕಾರಿ, ಹಣ್ಣು ಹಾಗೂ ಹಾನಿಕಾರಕ ರಾಸಾಯನಿಕ ಬಳಸದ ದಿನಸಿ ಪದಾರ್ಥಗಳನ್ನು ಸಂತೆಯಲ್ಲಿ ಮಾರಲು ಮತ್ತು ಕೊಳ್ಳಲು ಭಾಗವಹಿಸಿ

ನಿಮ್ಮೊಂದಿಗೆ ನಾವು — ಪೂರ್ಣಪ್ರಮತಿ — ನಮ್ಮೊಂದಿಗೆ ನೀವು

ಪೂರ್ಣಪ್ರಮತಿ ಇರುವ ವಿವಿಧ ಕ್ಷೇತ್ರಗಳು -
ಗಿರಿನಗರ, ಉತ್ತರಹಳ್ಳಿ, ಜೆ.ಪಿ.ನಗರ, ಯಲಹಂಕ ಉಪನಗರ, ಮಾಗಡಿ ರಸ್ತೆ, ಬೆಂಗಳೂರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಶ್ರೀಮತಿ ಲತಾ ಎಂ. +91 96634 74669
ಶ್ರೀ ರಾಘವೇಂದ್ರ, ಎಸ್.ಆರ್. +91 72590 40610
ಶ್ರೀಮತಿ ಅನುಸೂಯ +91 91414 16390

pūrṇapramati
A Centre for Integrated Learning

# ಪ್ರಮತಿಧಾರಾ

## ಪೂರ್ಣಪ್ರಮತಿಯ ಪ್ರಸ್ತುತಿ



ಪ್ರತಿಷ್ಠಾಪಕ ಸಂರಕ್ಷಕರು : ಶ್ರೀ ವಿಶ್ವೇಶತೀರ್ಥರು, ಪೇಜಾವರ ಅಧೋಕ್ಷಜ ಮಠ

ಪೂರ್ಣಪ್ರಮತಿ ಪರಿಪೂರ್ಣ ಕಲಿಕಾತಾಣವು ಪ್ರಮತಿಧಾರಾ ಎಂಬ ಜ್ಞಾನಸತ್ರ ಕಾರ್ಯಕ್ರಮವನ್ನು ಆಯೋಜಿಸಿದೆ. ಈ ಕಾರ್ಯಕ್ರಮದಡಿಯಲ್ಲಿ ಅಧ್ಯಾತ್ಮ ಪ್ರವಚನ, ರಾಷ್ಟ್ರಚಿಂತನೆ, ಸತ್ಸಂಗ, ಭಜನೆ ಹಾಗೂ ಇನ್ನೂ ಹಲವಾರು ವಿಷಯಗಳ ಕಾರ್ಯಕ್ರಮವನ್ನು ಆಯೋಜಿಸಿದೆ.

**ಬನ್ನಿ ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತಮಗೆ ಆದರದ ಸ್ವಾಗತ**

| | |
|---|---|
| ದಿನಾಂಕ : 23-11- 2024<br>ವಿಷಯ : ಆಯುರ್ವೇದ - ಋತು ಶೋಧನ<br>ಸಂವಾದ : ಡಾ. ಪ್ರಾಣೇಶ ಕುಲಕರ್ಣಿ - ಸುಷ್ಮಿತಾ | ದಿನಾಂಕ : 24-11-2024<br>ವಿಷಯ : ಆಯುರ್ವೇದ - ಸ್ತ್ರೀಯರ ಆರೋಗ್ಯ<br>ವಕ್ತಾರರು : ಡಾ. ಪ್ರತಿಭಾ ಕುಲಕರ್ಣಿ - ಸುಷ್ಮಿತಾ |
| ದಿನಾಂಕ : 30-11-2024<br>ವಿಷಯ : ಕನ್ನಡ ಪದ್ಯ ಸಾಹಿತ್ಯ<br>ವಕ್ತಾರರು : ಶ್ರೀಯುತ ಗೋಪಿನಾಥಾಚಾರ್ಯ ಗಲಗಲಿ | ದಿನಾಂಕ : 01-12-2024<br>ವಿಷಯ : ಕನ್ನಡ ಗದ್ಯ ಸಾಹಿತ್ಯ<br>ವಕ್ತಾರರು : ಶ್ರೀಯುತ ಗೋಪಿನಾಥಾಚಾರ್ಯ ಗಲಗಲಿ |
| ದಿನಾಂಕ : 07-12-2024<br>ವಿಷಯ : ಪಂಚತಂತ್ರ ಇಂದಿಗೂ ಪ್ರಸ್ತುತ<br>ವಕ್ತಾರರು : ಶ್ರೀಯುತ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ | ದಿನಾಂಕ : 08-12-2024<br>ವಿಷಯ : ದಾಸವಾಣಿ<br>ಪ್ರಸ್ತುತಿ : ಶ್ರೀಮತಿ ಭಾಗ್ಯಶ್ರೀ ಚಿಕ್ಕೇರೂರು |
| ದಿನಾಂಕ : 14-12-2024<br>ವಿಷಯ : ಭಗವದ್ಗೀತಾ ಸಂದೇಶ<br>ವಕ್ತಾರರು : ಮಹಾಮಹೋಪಾಧ್ಯಾಯ ಏ. ಹರಿದಾಸ ಭಟ್ | ದಿನಾಂಕ : 15-12-2024<br>ವಿಷಯ : ಭಗವದ್ಗೀತಾ ಸಂದೇಶ<br>ವಕ್ತಾರರು : ಮಹಾಮಹೋಪಾಧ್ಯಾಯ ಏ. ಹರಿದಾಸ ಭಟ್ |

**ಸಮಯ: ಸಂಜೆ 5-15 ರಿಂದ 6-30 ರ ವರೆಗೆ**

ಸ್ಥಳ: ಪೂರ್ಣಪ್ರಮತಿ # 23, ನೆಲಮಹಡಿ, 14ನೇ ಅಡ್ಡರಸ್ತೆ,
9ನೇ ಮುಖ್ಯರಸ್ತೆ, ಹೊಸಕೆರೆಹಳ್ಳಿ ಲಿಂಕ್ ರಸ್ತೆ,
ಬನಶಂಕರಿ 3ನೇ ಹಂತ, ಗಿರಿನಗರ, ಬೆಂಗಳೂರು - 85

**ಸಂಪರ್ಕಿಸಿ :**

ಶ್ರೀ ಅಭಿಷೇಕ್ ಕಾಶ್ಯಪ್
+91 98804 91323
ಶ್ರೀಮತಿ ಅನಸೂಯಾ
+91 91414 16390

## ರಾಮಮಂದಿರದಿಂದ ರಾಮರಾಜ್ಯದೆಡೆಗೆ

# ಪೂರ್ಣಪ್ರಮತಿ ಉತ್ಸವ 2024-25

### ಮಾರ್ಗಶಿರ-ಶುಕ್ಲ-ದಶಮಿ(10/12/2024) ಯಿಂದ ಪ್ರಾರಂಭಿಸಿ

### ಪುಷ್ಯ-ಶುಕ್ಲ-ದಶಮಿ 9/1/2025 ವರೆಗೆ

## ಮೀಯೋಣ ರಾಮ ಸ್ಮರಣೆಯಲ್ಲಿ

ಆತ್ಮೀಯರೇ,
ಪೂರ್ಣಪ್ರಮತಿ, ಪರಿಪೂರ್ಣ ಕಲಿಕಾತಾಣದ ಸಂರಕ್ಷಕರಾದ ಪೂಜ್ಯ ಶ್ರೀ ವಿಶ್ವಪ್ರಸನ್ನತೀರ್ಥರು 2023-24 ರಲ್ಲಿ ನೀಡಿದ ರಾಮಮಂದಿರದಿಂದ ರಾಮರಾಜ್ಯದೆಡೆಗೆ ಎಂಬ ಕರೆಯನ್ನು ಆದೇಶದಂತೆ ಸ್ವೀಕರಿಸಿ ಕಳೆದ ವರ್ಷದ ಉತ್ಸವವನ್ನು ಆಯೋಜನೆ ಮಾಡಲಾಗಿತ್ತು. ಅದರಲ್ಲಿ ನಾವೆಲ್ಲ ಸಾಕ್ಷಿಯಾಗಿದ್ದೆವು. ಈ ಪ್ರಯತ್ನವನ್ನು ಸತತವಾಗಿ ಮುಂದುವರೆಸುವ ಆಶೀರ್ವಾದವನ್ನು ಗುರುಗಳಲ್ಲಿ ಬೇಡುತ್ತಾ 2024-25 ರ ಉತ್ಸವವನ್ನು ಆಚರಿಸೋಣ.

### ಉತ್ಸವದ ರಸಘಟ್ಟಗಳು

- ಮೃತ್ತಿಕಾ ವೃಂದಾವನದ ವರ್ಧಂತಿ ಉತ್ಸವ
- ಉತ್ಸವ
- ಮಹೋತ್ಸವ
- ಮನೆ ಮನೆಯಲ್ಲಿ ರಾಮರಾಜ್ಯ
- ಪರೀಕ್ಷೆ - ಸಮೀಕ್ಷೆ
- ಗುರು ಸಪರ್ಮಣೆ
- ಗುರುವಂದನೆ
- ಸಮ್ಮಾನ್
- ಜಾತ್ರೆ
- ವ್ಯಾಖ್ಯಾ
- ಸಂವಾದ
- ಪುಸ್ತಕ ಲೋಕಾರ್ಪಣೆ

ಮತ್ತಷ್ಟು ವಿವರಗಳೊಂದಿಗೆ
ಶೀಘ್ರದಲ್ಲೇ ಭೇಟಿ ಮಾಡೋಣ
ಈ ಎಲ್ಲಾ ಕಾರ್ಯಕ್ರಮಗಳಲ್ಲೂ
ನಿಮ್ಮ ಸಮಯ ನಮ್ಮೊಂದಿಗಿರಲಿ

# CONTACTS

| | | |
|---|---|---|
| Shashirekha MG | Pranshupal | 72590 40609 |
| Shreenivas Guttal | Samyojaka | 72590 40606 |
| Raghavendra S.R. | Vitta Sangraha | 72590 40610 |
| Raghuram | Nirvahaka | 72590 40608 |
| Latha M | Prashikshana | 96634 74669 |
| Shashidhar | Transportation | 78996 33733 |

## Kshetra Pratinidhi

| | | |
|---|---|---|
| Badarinarayana Katti | Yamuna & Saraswati | 99001 88042 |
| Anantha Shayana | Godavari & Narmada | 89511 44567 |
| Venkatesha C | Ganga & Sindhu | 86603 26985 |
| Archana R. | Proudha Vibhaga | 95133 46166 |
| Muralidhar Katti | PP Layout - Krishna Kuteera | 98800 83303 |
| Raghavendra | JP Nagara - Dwaraka | 99800 74668 |
| Satyanarayana | Anandavana Gurukula | 95910 27668 |


**pūrṇapramati**

A Center for Integrated Learning

14th Cross, Hosakerehalli Main Road,
Girinagar, Bengaluru - 560085

96634 74669 / 72590 40610

info@purnapramati.in www.purnapramati.in